ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್

ಶ್ರೀಮತಿ ತುಂಗಮ್ಮ ಮತ್ತು ಮತ್ತೊಬ್ಬರು ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 58183-58184/2017, ದಿನಾಂಕ 1 ನೇ ಮಾರ್ಚ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಹೆಚ್.ಪಿ. ಸಂದೇಶ್:

1. ಅರ್ಜಿದಾರರ ವಕೀಲರ ಮತ್ತು ಎದುರುದಾರರ ವಕೀಲರ ವಾದವಿವಾದಗಳನ್ನು ನಾನು ಆಲಿಸಿದ್ದೇನೆ.

2. ಯೋಗೇಶ್ಗೌಡ ಗೌಡರ್ ನ ಹತ್ಯೆಯ ತನಿಖೆ ಮಾಡಲು ಮತ್ತು ವರದಿ ಸಲ್ಲಿಸಲು ಎದುರುದಾರ-ಕೇಂದ್ರತನಿಖಾ ಸಂಸ್ಥೆಗೆ ನಿರ್ದೇಶಿಸುವ ಪರಮಾದೇಶ ರಿಟ್ನ ಪರಿಹಾರ ಕೋರಿ ಮತ್ತು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಮತ್ತು ಅಷ್ಟೇ ಅಲ್ಲದೆ ಯೋಗೇಶ್ಗೌಡ ಗೌಡರ್ನ ಹತ್ಯೆಯ ಒಳಸಂಚಿನಲ್ಲಿ ಭಾಗಿಯಾಗಿದ್ದ ಎದುರುದಾರಸಂಖ್ಯೆ: 10-ವಿನಯ್ಕುಲಕರ್ಣಿ ಹಾಗೂ ಇತರ ಅಪರಾಧಿಗಳನ್ನು ಕಾಪಾಡಿದ ಎಲ್ಲಾ ತಪ್ಪಿತಸ್ಥ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕ್ರಮ ಕೈಗೊಳ್ಳಲು 4 ಹಾಗೂ 5 ನೇ ಎದುರುದಾರರಿಗೆ ನಿರ್ದೇಶಿಸುವ, ಮುಂದಿನ ರಿಟ್ ಪರಮಾದೇಶವನ್ನು ಕೋರಿ ಮತ್ತು ಪ್ರಕರಣದ ಸಂಗತಿಗಳು ಹಾಗೂ ಸನ್ನಿವೇಶಗಳಡಿ ಈ ಗೌರವಾನ್ವಿತ ನ್ಯಾಯಾಲಯವು ಯೋಗ್ಯವೆಂದು ಭಾವಿಸುವ ಯಾವುದೇ ಇತರ ಆದೇಶ ಅಥವಾ ನಿರ್ದೇಶನವನ್ನು ನೀಡಲು ಕೋರಿ, ದಂಡ ಪಕ್ರಿಯಾ ಸಂಹಿತೆಯ 482 ನೇ ಪ್ರಕರಣದೊಂದಿಗೆ ಓದಲಾದ ಭಾರತದ ಸಂವಿಧಾನದ 226 ಮತ್ತು 227 ನೇ ಅನುಚ್ಛೇದಗಳಡಿ ರಿಟ್ ಅಧಿಕಾರವ್ಯಾಪ್ತಿಯನ್ನು ಕೋರಿ, ಮೃತ ಯೋಗೇಶ್ ಗೌಡ ಗೌಡರ್ನ ತಾಯಿ ಮತ್ತು ಸಹೋದರನು ಈ ಎರಡು ಅರ್ಜಿಗಳನ್ನು ಸಲ್ಲಿಸಿದ್ದಾರೆ.

3. ಸಂಕ್ಷಿಪ್ತವಾಗಿ ಹೇಳುವುದಾದರೆ, ಯೋಗೇಶ್ ಗೌಡ ಗೌಡರ್ ಧಾರವಾಡದ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಹೆಬ್ಬಳ್ಳಿ ಚುನಾವಣಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ ಮತ್ತು 10 ನೇ ಎದುರುದಾರರು ಧಾರವಾಡ ಗ್ರಾಮೀಣ ಚುನಾವಣಾ ಕ್ಷೇತ್ರದಿಂದ 0 ಕರ್ನಾಟಕ ವಿಧಾನಸಭೆಯ ಹಾಲಿ ಸದಸ್ಯರಾಗಿದ್ದಾರೆ ಮತ್ತು ಇವರು ಕರ್ನಾಟಕ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿದ್ದಾರೆ ಮತ್ತು ಇವರು ಧಾರವಾಡ ಜಿಲ್ಲೆಯ ಪ್ರಭಾರಿ ಸಚಿವರಾಗಿದ್ದಾರೆ, ಇವರಿಬ್ಬರ ನಡುವೆ ರಾಜಕೀಯ ಶತ್ರುತ್ವವಿತ್ತು.ಅದುದಿನಾಂಕ: 23-04-2016ರ ಸಭೆಯಲ್ಲಿ ಹೊರಬಂದಿತು, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ಸಂಸದೀಯವಲ್ಲದ ಮಾತುಗಳಲ್ಲಿ ಪರಸ್ಪರ ದೂಷಿಸಿಕೊಳ್ಳುವ ಮಟ್ಟಿಗೆ ಅದು ಮುಂದುವರೆಯಿತು.ಇನ್ನೊಂದು ವಾದವೆಂದರೆ, ಆಪಾದಿಸಲಾದ ಮಾರಾಟ ಒಪ್ಪಂದವೊಂದು 1 ನೇ ಆಪಾದಿತ ಮತ್ತು ಆರೋಪಪಟ್ಟಿಯಲ್ಲಿ ಸಾಕ್ಷಿದಾರನಾಗಿರುವ ನಾಗೇಂದ್ರ ತೊಡಕರ್ ನಡುವೆ ಕಾರ್ಯಗತಗೊಂಡಿತ್ತು ಮತ್ತು ಮೃತ ವ್ಯಕ್ತಿಯು ಸದರಿ ಜಮೀನನ್ನು ಖರೀದಿಸುವ ಆಸಕ್ತಿಯನ್ನಾಗಲಿ ಅಥವಾ ಉದ್ದೇಶವನ್ನಾಗಲಿ ಹೊಂದಿರಲಿಲ್ಲ.ತನಿಖಾಧಿಕಾರಿಯು ಈ ವಿಷಯಗಳಲ್ಲಿ ಬೇಕೆಂದೇ ವಿಚಾರಣೆ ನಡೆಸಿಲ್ಲ ಮತ್ತು ದೂರುದಾರನ ಹೇಳಿಕೆಯನ್ನು ದಾಖಲಿಸಿಲ್ಲ ಮತ್ತು ಮಾರಾಟ ಪ್ರತಿಫಲದ ಮೂಲದ ಬಗ್ಗೆ ಕೂಡ ತನಿಖೆಯನ್ನು ಮಾಡಿಲ್ಲ ಹಾಗೂ ಸದರಿ ಆಪಾದಿತ ದಾಖಲೆಯನ್ನು ಸದರಿ ಹತ್ಯೆಗೆ ಕತೆಯನ್ನು ನಿರೂಪಿಸಲು ಪೂರ್ತಿಯಾಗಿ ಸೃಷ್ಟಿಸಲಾಯಿತು ಮತ್ತು ಅದು ಕಾನೂನು ಹಿಡಿತದಿಂದ ತಪ್ಪಿಸಿಕೊಳ್ಳುವ ಸಾಧನವಾಗಿ ಹಾಗೂ ಆರೋಪಿತ ದಾಖಲೆಯಾಗಿ ದಿನಾಂಕ 24-05-2016ರಂದು ಅಸ್ತಿತ್ವಕ್ಕೆ ಬಂದಿತು ಎಂಬುದು ಅರ್ಜಿದಾರರ ವಾದವಾಗಿದೆ.

4. ಅಷ್ಟೇ ಅಲ್ಲದೆ, ಮೃತನ ಸಹೋದರ ಉದಯ್ಗೌಡನನ್ನು ವಿನಯ್ ಕುಲಕರ್ಣಿ ಮತ್ತು ಎಚ್.ಕೆ. ಪಾಟೀಲ್ ಹತ್ಯೆ ಮಾಡಿರುತ್ತಾರೆ ಹಾಗೂ ವಿನಯ್ ಕುಲಕರ್ಣಿ ಕೊಲ್ಲಲು ಕಾದಿದ್ದಾನೆಂದು ಹೇಳುವ ಒಂದು ಪತ್ರವುದಿನಾಂಕ: 6.6.2016 ರಂದು ಅನಾಮಧೇಯ ವ್ಯಕ್ತಿಯಿಂದ ಮೃತನ ವಿಳಾಸಕ್ಕೆ ಧಾರವಾಡದ ಆರ್.ಎಂ.ಎಸ್. ಅಂಚೆ ಕಚೇರಿಯಲ್ಲಿ ಅಂಚೆಗೆ ಹಾಕಲ್ಪಟ್ಟಿತ್ತು ಮತ್ತು ಸದರಿ ಪತ್ರವುದಿನಾಂಕ: 7.6.2016 ರಂದು ಹೆಬ್ಬಳ್ಳಿ ಅಂಚೆ ಕಚೇರಿಗೆ ತಲುಪಿತು.ಅದುದಿನಾಂಕ: 14.6.2016 ರಂದು ಯೋಗೇಶ್ಗೌಡನ ಕುಟುಂಬದಿಂದ

ಸ್ವೀಕರಿಸಲ್ಪಟ್ಟಿತು ಹಾಗೂ ಅದನ್ನು ಯೋಗೇಶ್ಗೌಡ ಗೌಡರ್ನ ಗಮನಕ್ಕೆ ತರಲಾಯಿತು ಹಾಗೂ ಅವನು ಸದರಿ ಪತ್ರದ ಬಗ್ಗೆ ಯಾವುದೇ ಗಂಭೀರತೆಯನ್ನು ತಾಳಲಿಲ್ಲ ಎಂಬುದು ಅರ್ಜಿದಾರರ ವಾದವಾಗಿದೆ.

5. ಯೋಗೇಶ್ಗೌಡ ಗೌಡರ್ನ ಹತ್ಯೆಯ ಘಟನೆಯುದಿನಾಂಕ: 15.06.2016 ರಂದು ಬೆಳಿಗ್ಗೆ 7.37 ರಿಂದ 7.38 ಗಂಟೆಯೊಳಗೆ ನಡೆದಿದೆ.ಆಪಾದಿತ ಸಂಖ್ಯೆ ೧ 1 ರಿಂದ 6 ರವರೆಗಿನ ಆಪಾದಿತರು ಧಾರವಾಡದ ಸಪ್ತಾಪುರದ ಉದಯ್ಜಿಮ್ನ ಮುಂದೆ ಒಟ್ಟುಗೂಡಿದ್ದು, ನಿರ್ದಯವಾಗಿ ಅವನನ್ನು ಕೊಂದಿದ್ದಾರೆ ಹಾಗೂ ಆ ಸ್ಥಳದ ಪಕ್ಕದ ಕಟ್ಟಡದ ಸಿಸಿಟಿವಿ ಫೂಟೇಜ್ನಲ್ಲಿ ಈ ಅಪರಾಧವನ್ನು ಎಸಗಿರುವುದು ದಾಖಲಾಗಿರುತ್ತದೆ.ತನಿಖೆಯು ಕೇವಲ ಮೂರು ನಿಮಿಷದ ಫಟೇಜ್ನ ಮೇಲೆ ಅವಲಂಬಿತವಾಗಿದೆ.ಕೊಲೆಗಾರನು ಸದರಿ ಘಟನೆ ನಡೆಯುವುದಕ್ಕೆ ಮುಂಚೆಯೂ ಆ ಜಾಗದಲ್ಲಿದ್ದಿರಬಹುದು.ಆದರೆ, ಕೆಲನಿಮಿಷಗಳ ಸಿಸಿಟಿವಿ ಫಟೇಜ್ನ್ನು ಗಣನೆಗೆ ತೆಗೆದುಕೊ ಂ ಡರೆ, ಅದು ಸ ಂ ಪೂರ್ಣವಾಗಿ ಸಂಶಯಾತ್ಮಕವಾಗಿದೆ.ಘಟನೆ ನಡೆದ ಸದರಿ ಕಟ್ಟಡದಲ್ಲಿಯೇ ಎಟಿಎಂ ಇದ್ದರೂ ಸಹ, ತನಿಖಾಧಿಕಾರಿಯು ಪಕ್ಕದ ಕಟ್ಟಡದ ಸಿಸಿಟಿವಿ ಮೇಲೆ ಅವಲಂಬಿಸಿರುವುದು ತನಿಖೆಯ ಮೇಲೆ ಸಂದೇಹ ಮೂಡಿಸುತ್ತದೆ.ಪೊಲೀಸ್ ಪ್ರಾಧಿಕಾರಿಯು ಅವಲಂಬಿಸಿದ ಸಿಸಿಟಿವಿ ಫೂಟೇಜ್ನಲ್ಲಿಯೂ ಸಹ ಒಂದು ಹೂಂಡ್ಯೈ ಅಕ್ಸೆಂಟ್ ಕಾರು (ಕಪ್ಪು ಬಣ್ಣದ್ದು) ಸದರಿ ಹತ್ಯೆಯಲ್ಲಿ ಸೇರಿರುತ್ತದೆ. 'ಕೆಸಿಡಿ ' ಕಡೆಯಿಂದ ಸಪ್ತಾಪುರ ಸರ್ಕಲ್ ಕಡೆಗೆ ಬರುತ್ತಿದ್ದ ಸದರಿ ಕಾರಿಗೆ ಆಪಾದಿತ ವ್ಯಕ್ತಿಯು ಸನ್ನೆ ಮಾಡಿ ತೋರಿಸುತ್ತಾನೆ ಮತ್ತು ಆಶ್ಚರ್ಯಕರವಾಗಿ, ಸದರಿ ಕಾರು 70-75 ಸೆಕೆಂಡುಗಳೊಳಗಾಗಿ ಮತ್ತೆ ' ಕೆಸಿಡಿ ' ಸರ್ಕಲ್ ಕಡೆಗೆ ವಾಪಸ್ಸು ಬಂದಿದೆ.ಆದರೆ, ಇದು ಈ ಪ್ರಕರಣದಲ್ಲಿ ಮುಖ್ಯವಾದ ಸುಳಿವಾಗಿದ್ದರೂ ಸಹ ಪೊಲೀಸ್ ಸಿಬ್ಬಂದಿಯು ಸದರಿ ಕಾರಿನ ಬಗ್ಗೆ ವಿಚಾರಣೆ ನಡೆಸಿರುವುದಿಲ್ಲ.ಆಶ್ಚರ್ಯವೆಂದರೆ, " ಬಿಟಿಎಸ್'ಗೆ ಸೇರಿದ ಬಸ್ಸಿನ ಚಾಲಕ ಮತ್ತು ನಿರ್ವಾಹಕನನ್ನು ಪೊಲೀಸರು ವಿಚಾರಣೆ ಮಾಡಿರುತ್ತಾರೆ.ಆದರೆ, ಅವರು ಸದರಿ ಹತ್ಯೆಯ ಭಾಗವಾಗಿರುವ ಕಾರಿನ ಬಗ್ಗೆ ವಿಚಾರಣೆ ಮಾಡಲು ವಿಫಲರಾಗಿದ್ದಾರೆ.

6. ದಿನಾಂಕ 15-06-2016 ರಂದು ಬೆಳಿಗ್ಗೆ 9-30ಕ್ಕೆ ಅಪರಾಧ ಸಂಖ್ಯೆ ೧ 135/2016 ರಲ್ಲಿ ಪ್ರಥಮ ಮಾಹಿತಿ ವರದಿ ದಾಖಲಾಯಿತು ಮತ್ತು ಒಂದು ಗಂಟೆಯ ಅವಧಿಯೊಳಗೇ ಹತ್ಯೆ ನಡೆದಿರುವುದು ಭೂ ವಿವಾದಗಳ ಕಾರಣದಿಂದ ಎಂದು ವಾರ್ತಾವಾಹಿನಿಯಲ್ಲಿ ಕೂಡಲೇ ಗೃಹಮಂತ್ರಿಯ ಹೇಳಿಕೆಯನ್ನು ಪ್ರಕಟಿಸಲಾಯಿತು.ಇದು ರಾಜಕೀಯ ಪ್ರಭಾವದೊಂದಿಗೆ ಪೂರ್ತಿ ಯೋಜಿಸಿ ನಡೆಸಲಾದ ಹತ್ಯೆಯೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಹಾಗೂ ಆಪಾದಿತರನ್ನುದಿನಾಂಕ: 17-07-2016ರವರೆಗೂ ಪತ್ತೆ ಮಾಡಿರಲಿಲ್ಲ.ಪೊಲೀಸ್ ತನಿಖಾಧಿಕಾರಿಯೂ ಸಹ ಹತ್ಯೆಗೆ ಕಾರಣ ಇನ್ನೂ ಕಂಡುಬಂದಿಲ್ಲವೆಂದುದಿನಾಂಕ: 15-06-2016ರಂದು ದೃಢೀಕರಿಸಿದ್ದಾರೆ.ಒಬ್ಬ ಗೃಹಮಂತ್ರಿ ಹೇಗೆ ಅಂಥ ಬ ಹೇಳಿಕೆಯನ್ನು ಕೊಡಬಲ್ಲರು? ಎಂಬುದೇ ಸರಿಯಾದ ತನಿಖೆ ನಡೆದಿರುವ ಬಗ್ಗೆ ಸಂಶಯ ಮೂಡಿಸುತ್ತದೆ ಮತ್ತು 1 ರಿಂದ 5 ರವರೆಗಿನ ಆಪಾದಿತರನ್ನುದಿನಾಂಕ: 17-06-2016ರಂದು ಬೆಳಿಗ್ಗೆ 6-30ಕ್ಕೆ ಬಂಧಿಸಲಾಯಿತು ಹಾಗೂ 6 ನೇ ಆಪಾದಿತನನ್ನುದಿನಾಂಕ: 20-06-2016ರಂದು ಬಂಧಿಸಲಾಯಿತು. ವಸೂಲಿಗಳನ್ನು ಮಾಡಲಾಗಿದೆ ಮತ್ತು ಆಪಾದಿತ ವ್ಯಕ್ತಿಗಳನ್ನು ಬಂಧಿಸಿದ ಜಾಗವನ್ನು ತನಿಖಾಧಿಕಾರಿಯು ಮಹಜರು ಮಾಡಿಲ್ಲ ಅಥವಾ ಅವರನ್ನು ಬಂಧಿಸಿದ ನಿಖರವಾದ ಜಾಗವನ್ನು ಎಲ್ಲಿಯೂ ನಮೂದಿಸಿಲ್ಲ.

7. ಯಾರೂ ಇಲ್ಲದ ಕಪ್ಪು ಬಣ್ಣದ ಹೂಂಡ್ಯೈ ಅಕ್ಸೆಂಟ್ ಕಾರೊಂದನ್ನು ಆ ಸ್ಥಳದಲ್ಲಿ ಒಂದು ವಾರದಿಂದ ನಿಲ್ಲಿಸಲಾಗಿದೆಯೆಂದು ಧಾರವಾಡದ ವಿಕಾಸ ನಗರದ ನಿವಾಸಿಯೊಬ್ಬರು ಪೊಲೀಸರಿಗೆ ಮಾಹಿತಿ ನೀಡಿದ್ದರೆಂದು ಸಹ ಅರ್ಜಿದಾರರು ವಾದಿಸಿದ್ದಾರೆ ಮತ್ತು ಅವರು ಯಾವುದೋ ಕೊಲೆ ನಡೆದಿರಬಹುದೆಂದು ೨ ಸಂಶಯಪಟ್ಟಿದ್ದಾರೆ.ಪೊಲೀಸರು ಆ ಜಾಗಕ್ಕೆ ಬಂದು ಕಾರನ್ನು ತೆಗೆದುಕೊಂಡು ಹೋಗಿ, ಯಾವುದೇ ವಿಚಾರಣೆ ನಡೆಸದೆ ಅದರ ಮಾಲೀಕನಿಗೆ ಸದರಿ ಕಾರನ್ನು ಬಹಳ ಬೇಗನೆ ಹಿಂದಿರುಗಿಸಿದ್ದಾರೆ.

8. ತನಿಖೆಯ ನಂತರ ಪೊಲೀಸರು, ಸಾಕ್ಷಿದಾರರ ಪಟ್ಟಿಯೊಂದಿಗೆ, ಭಾರತದಂಡ ಸಂಹಿತೆಯ 149 ನೇ ಪ್ರಕರಣದೊಂದಿಗೆ ಓದಲಾದ 143, 147, 148, 120 (ಬಿ), 302, 201 ನೇ ಪ್ರಕರಣಗಳಡಿ ಶಿಕ್ಷಾರ್ಹ ಅಪರಾಧಗಳಿಗಾಗಿ 1 ರಿಂದ 6 ರವರೆಗಿನ ಆಪಾದಿತರ ವಿರುದ್ಧದಿನಾಂಕ: 9-9-2016ರಂದು ಆರೋಪಪಟ್ಟಿಯನ್ನು ಸಲ್ಲಿಸಿದರು ಮತ್ತು ಮೃತನ ಪತ್ನಿಯಾದ ದೂರುದಾರಳು ಸದ್ಯದ ಪ್ರಕರಣದಲ್ಲಿ ಇನ್ಯಾರೋ ವ್ಯಕ್ತಿಯು ಭಾಗಿಯಾಗಿರುವ ಬಗ್ಗೆ ಹಾಗೂ ಕಾರೊಂದು ಒಳಗೊಂಡಿರುವ ಬಗ್ಗೆ ವಿಚಾರಣೆಗೆ ಕೋರಿ, ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದಳು ಹಾಗೂದಿನಾಂಕ: 14-06-2016ರಂದು ಆಕೆಯಿಂದ ಸ್ವೀಕೃತವಾದ

ಪತ್ರದ ಆಧಾರದ ಮೇಲೆ ಮೇಲ್ಕಂಡ ಪ್ರಕರಣದಲ್ಲಿ ಮರುವಿಚಾರಣೆ ಹಾಗೂ ನಿಷ್ಪಕ್ಷಪಾತವಾದ ತನಿಖೆಗಾಗಿ ಕೋರಿ ಕರ್ನಾಟಕದ ಮುಖ್ಯಮಂತ್ರಿಯವರಿಗೆ ಸಹ ಮನವಿ ಸಲ್ಲಿಸಿದಳು.ಹಾಗೂದಿನಾಂಕ: 17-02-2017ರ ಮನವಿಯ ಪ್ರಕಾರ ಸದರಿ ದಾವೆಯಲ್ಲಿ ಪ್ರಭಾವಿ ವ್ಯಕ್ತಿಯೊಬ್ಬನು ಒಳಗೊಂಡಿದ್ದಾನೆಂದು ಸಹ ಹೇಳಲಾಗಿದೆ.ಅರ್ಜಿದಾರರ ಮತ್ತೊಂದು ವಾದವೆಂದರೆ, ಅಧಿವಿಚಾರಣೆಯನ್ನು ಪ್ರಾರಂಭಿಸುವುದಕ್ಕಾಗಿ 23-10-2017ರಂದು ದಿನಾಂಕವನ್ನು ನಿಗದಿಪಡಿಸಲಾಗಿದೆ ಮತ್ತು ಸಿಡಬ್ಲ್ಯೂ -1 ಎಂದರೆ, ಮೃತನ ಪತ್ನಿಯ ಸಾಕ್ಷ್ಯವನ್ನು ದಾಖಲಿಸಲಾಯಿತು ಮತ್ತು ಆ ದಿನ ಬೆಳಗಿನ ವೇಳೆಯಲ್ಲಿ ಮಫಿಯಲ್ಲಿದ್ದ ಪೊಲೀಸರೆಂದು ಹೇಳಲಾದ ನಾಲ್ಕು ಜನ ಆಕೆಯ ಮನೆಗೆ ಬಂದು ಸಾಕ್ಷ್ಯವನ್ನು ದಾಖಲಿಸುವುದಕ್ಕಾಗಿ ಆಕೆಯನ್ನು ಬಲವಂತವಾಗಿ ನ್ಯಾಯಾಲಯಕ್ಕೆ ಕರೆದೊಯ್ದರು.ನಾಲ್ಕು ಜನ ಆಪಾದಿತ ಮಫ್ತಿ ಪೊಲೀಸರ ಪೈಕಿ ಒಬ್ಬರು ಆಕೆಯ ಎಂಟು ವರ್ಷದ ಮಗನಾದ ಉದಯಗೌಡನ ಜೊತೆಯಲ್ಲಿ ಆಕೆಯ ಮನೆಯಲ್ಲಿ ಉಳಿದರು.ನ್ಯಾಯಾಲಯಕ್ಕೆ ಹೋಗುವ ಮಾರ್ಗದಲ್ಲಿ, ವಾಹನದಲ್ಲಿ ಆ ಇತರ ವ್ಯಕ್ತಿಗಳು ಆಕೆಯ ಮಗ ತಮ್ಮ ವ್ಯಕ್ತಿಯೊಂದಿಗೆ ಇದ್ದಾನೆಂದೂ ಮತ್ತು ಅವನ ಸುರಕ್ಷತೆಯ ಬಗ್ಗೆ ಯೋಚಿಸುವಂತೆಯೂ, ಮೃತನ ಪತ್ನಿಗೆ ಬೆದರಿಕೆ ಹಾಕಿದ್ದಾರೆ ಮತ್ತು ಅವಳನ್ನು ಸಿಡಬ್ಲ್ಯು -1 ಎಂಬುದಾಗಿ ವಿಚಾರಣೆಗೆ ಒಳಪಡುವಂತೆ ಮಾಡಿದ್ದಾರೆ.ಸರ್ಕಾರಿ ವಕೀಲರೂ ಸಹ ನ್ಯಾಯಾಲಯದ ಮುಂದೆ ಮೃತನ ಪತ್ನಿಯು ನ್ಯಾಯಾಲಯಕ್ಕೆ ಹಾಜರಾಗಲು ಅಸಮರ್ಥಳಾದುದನ್ನು ನಿವೇದಿಸಿದರು.ಆದರೆ, ಆಶ್ಚರ್ಯಕರವೆಂಬಂತೆ ಮೃತನ ಪತ್ನಿ ನ್ಯಾಯಾಲಯಕ್ಕೆ ಹಾಜರಾದಳು ಮತ್ತು ವಿಚಾರಣೆಗೆ ಒಳಪಟ್ಟಳು ಹಾಗೂ ಅಧಿವಿಚಾರಣಾ ನ್ಯಾಯಾಧೀಶರು ವಾಸ್ತವವಾಗಿ ಅದು ಸಾಕ್ಷ್ಯ ಎ ಕೊಡುವುದಾಗಿದ್ದ ಅವಳ ಹೇಳಿಕೆಯನ್ನು ದಾಖಲಿಸಲಿಲ್ಲ ಮತ್ತು ಅಷ್ಟೇ ಅಲ್ಲದೆ, ಆಕೆಯ ಪತಿಯನ್ನು ಹತ್ಯೆ ಮಾಡುವ ಒಳಸಂಚಿನಲ್ಲಿ 10 ನೇ ಎದುರುದಾರನು ಮಾಸ್ಟರ್ ಮೈಂಡ್ ಆಗಿದ್ದಾನೆ ಹಾಗೂ ಅಧಿವಿಚಾರಣಾ ನ್ಯಾಯಾಧೀಶರು ಎಚ್ಚರಿಕೆ ಪತ್ರವನ್ನು ನಿಶಾನೆಯಾಗಿ ಗುರುತು ಮಾಡಲು ಮೊದಲು ನಿರಾಕರಿಸಿದರು ಹಾಗೂ ಸರ್ಕಾರಿ ಪ್ರಾಸಿಕ್ಯೂಟರ್‌ರಿಂದ ಮಾಡಲಾದ ಗಂಭೀರ ಪ್ರಯತ್ನಗಳ ನಂತರ ಆ ಪತ್ರಗಳನ್ನು ನಿಶಾನೆ 1 ಮತ್ತು 2 ಎಂಬುದಾಗಿ ಗುರುತು ಮಾಡಲಾಗಿದೆ.ಹಾಗಿದ್ದರೂ, ಅವರು ಮೃತನ ಪತ್ನಿಯು ತನ್ನ ದೃಷ್ಟಿಯಿಂದ ಘಟನೆಯನ್ನು ಕುರಿತ ಅವಳ ಹೇಳಿಕೆಯನ್ನು ಪೂರ್ತಿಯಾಗಿ ದಾಖಲಿಸಿರುವುದಿಲ್ಲ.

9. ಅರ್ಜಿಯಲ್ಲಿ ಮಾಡಲಾದ ಇತರ ಆಪಾದನೆಯೆಂದರೆ, ಎದುರುದಾರನಾದ ಶ್ರೀ ತುಳಜಪ್ಪ ಸುಬ್ಬಿ ಎಂದರೆ, ಬೆಳಗಾವಿಯ ಇನ್ಸ್ಪೆಕ್ಟರ್ ಜನರಲ್ರವರ ಕಚೇರಿಯಲ್ಲಿ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಆಗಿ ಕಾರ್ಯನಿರ್ವಹಿಸುತ್ತಿರುವ ಎದುರುದಾರ ಸಂಖ್ಯೆ 11ದಿನಾಂಕ: 27-10-2017ರಂದು ಬೆಳಿಗ್ಗೆ 11-15ಕ್ಕೆ 2 ನೇ ಅರ್ಜಿದಾರರ ಮನೆಗೆ ಬಂದು ವಿಷಯವನ್ನು ಸಚಿವ ೧ ವಿನಯ್ಕುಲಕರ್ಣಿಯೊಂದಿಗೆ ಬಗೆಹರಿಸಿಕೊಳ್ಳಲು ಮತ್ತು ಅವನ ಸಹೋದರನ ಹತ್ಯೆ ಕುರಿತಂತೆ ಆಪಾದಿತನ ಪರವಾಗಿ ಸಾಕ್ಷ್ಯ ಲ್ಯು ನೀಡಲು ಅರ್ಜಿದಾರನಿಗೆ ಬೆದರಿಕೆ ಹಾಕಿದರು ಹಾಗೂ ಮತ್ತೊಮ್ಮೆ ಎರಡನೇ ಅರ್ಜಿದಾರರ ಮನೆಗೆ ಸಂಜೆ ಸುಮಾರು 6-00 ಗಂಟೆಗೆ ಬಂದು ತನ್ನ ಮೊಬೈಲ್ನಲ್ಲಿ ಸಚಿವ ವಿನಯ್ಕುಲಕರ್ಣಿಯೊಂದಿಗೆ ಮಾತನಾಡಲು ಹೇಳಿದರು.ಇಷ್ಟವಿಲ್ಲದಿದ್ದರೂ, ಎರಡನೇ ಅರ್ಜಿದಾರನು ವಿನಯ್ಕುಲಕರ್ಣಿಯೊಂದಿಗೆ ಮಾತನಾಡಿದ್ದು, ಎರಡನೇ ಅರ್ಜಿದಾರನು ಅವರನ್ನು ಭೇಟಿಯಾಗುವಂತೆ ಮತ್ತು ಆಪಾದಿತರೊಂದಿಗೆ ರಾಜೀ ಮಾಡಿಕೊಳ್ಳುವ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಹೇಳಿರುತ್ತಾರೆ.ಸದರಿ 11 ನೇ ಎದುರುದಾರ ತುಳಜಪ್ಪ ಸುಲ್ಪಿಯು ಧಾರವಾಡ ಜಿಲ್ಲೆಯ ಪಟ್ಟಣ ಪೊಲೀಸ್ ಠಾಣೆಯಲ್ಲಿ ಸಿ.ಪಿ.ಐ. ಆಗಿ ಸೇವೆ ಸಲ್ಲಿಸಿರುತ್ತಾರೆ ಮತ್ತು ಸದರಿ ಸಚಿವರಿಗೆ ಬಹಳ ನಿಕಟವಾಗಿದ್ದರು.ಅವರು ತಮ್ಮ ಅಧಿಕೃತ ಸಾಮರ್ಥ್ಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿಲ್ಲದಿದ್ದರೂ ಸಹ ಹಾಗೂ ಧಾರವಾಡದಲ್ಲಿ ಸೇವೆ ಸಲ್ಲಿಸುತ್ತಿಲ್ಲವಾದರೂ, 0 ಆಪಾದಿತರ ಪರವಾಗಿ ಸಾಕ್ಷ್ಯ ಎ ನೀಡುವಂತೆ ಸಾಕ್ಷಿದಾರನನ್ನು ಒತ್ತಾಯಿಸುವ ಮೂಲಕ ಕಾನೂನಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಅಪಾದಿತರಿಗೆ ಹಾಗೂ ಸಚಿವರಿಗೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದಾರೆ ಮತ್ತು ಇದು ನ್ಯಾಯಸಮ್ಮತ ಅಧಿವಿಚಾರಣೆಯ ಮೇಲೆ ಹಾಗೂ ನ್ಯಾಯಸಮ್ಮತ ತನಿಖೆಯ ಮೇಲೆ ಸಂಶಯವನ್ನು ಹೆಚ್ಚಿಸಿರುತ್ತದೆ.

10. ಅರ್ಜಿದಾರರು ಸದರಿ ಬೆಳವಣಿಗೆಯ ದೃಷ್ಟಿಯಿಂದದಿನಾಂಕ: 03-11-2017ರಂದು ಅಧಿ ವಿಚಾರಣೆಗಾಗಿ ನ್ಯಾಯಾಲಯದ ಬದಲಾವಣೆಯನ್ನು ಕೋರಿ, ಅದರಲ್ಲೂ ನಿರ್ದಿಷ್ಟವಾಗಿ, ಈ ಅಧಿವಿಚಾರಣಾ ನ್ಯಾಯಾಲಯದ ಬಗ್ಗೆ ನಂಬಿಕೆಯಿಲ್ಲವೆಂದು ಅಫಿಡೆವಿಟ್ನಲ್ಲಿ ತಿಳಿಸಿ, ಕರ್ನಾಟಕ ಉಚ್ಚ ನ್ಯಾಯಾಲಯದ ಚ ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಯವರಿಗೆ ದೂರು ನೀಡಿದ್ದಾರೆ.

11. ಅಷ್ಟೇ ಅಲ್ಲದೆ,ದಿನಾಂಕ: 10-11-2017ರಂದು ಸದರಿ 11 ನೇ ಎದುರುದಾರನಾದ ಪೊಲೀಸ್ ಅಧಿಕಾರಿ ತುಳಜಪ್ಪ ಸುಲ್ಸಿಯು ಮತ್ತೊಮ್ಮೆ ಎರಡನೇ ಅರ್ಜಿದಾರನ ಮನೆಗೆ ಬೆಳಿಗ್ಗೆ ಸುಮಾರು 10-50ಕ್ಕೆ ಭೇಟಿ ನೀಡಿ, ಅವನು ಸಂಜೆ ಸುಮಾರು 6-00 ಗಂಟೆಗೆ ವಿನಯ್ಕುಲಕರ್ಣಿಯನ್ನು ಭೇಟಿಯಾಗಲು ಹೇಳಿದ್ದಾರೆ.ತುಳಜಪ್ಪ ಸುಲ್ಪಿಯು ಎರಡನೇ ಅರ್ಜಿದಾರನನ್ನು ತನ್ನ ಕಾರಿನಲ್ಲಿ ಕರೆದುಕೊಂಡು, ಧಾರವಾಡದ ಡಿ.ಸಿ. ಕಚೇರಿಯ ಬಳಿ ಇರುವ ಇನ್ಸ್ಪೆಕ್ಷನ್ ಬಂಗೊಗೆ ಕರೆದೊಯ್ದರು.ಅಲ್ಲಿಂದ ಅವರು ಎರಡನೇ ಅರ್ಜಿದಾರನನ್ನು ರಾತ್ರಿ ಸುಮಾರು 10-30ಕ್ಕೆ ಮಹೇಶ್ ಶೆಟ್ಟಿ ಎಂಬುವವರ ಮನೆಗೆ ಕರೆದೊಯ್ದರು.ಅಲ್ಲಿ ಎರಡನೇ ಅರ್ಜಿದಾರನು 10 ನೇ ಎದುರುದಾರ ವಿನಯ್ಕುಲಕರ್ಣಿಯನ್ನು ಭೇಟಿ ಮಾಡಲು ಏರ್ಪಾಡಾಗಿತ್ತು ಮತ್ತು 10 ನೇ ಎದುರುದಾರ ವಿನಯ್ಕುಲಕರ್ಣಿಯು ಎರಡನೇ ಅರ್ಜಿದಾರನಿಗೆ ವಿಷಯವನ್ನು ಎಂದರೆ, ಅಪಾದಿತನೊಂದಿಗೆ ಅವನ ಸಹೋದರನ ಕೊಲೆ ಪ್ರಕರಣವನ್ನು ಇತ್ಯರ್ಥಪಡಿಸಲು ಒತ್ತಡ ಹೇರಿದರು ಮತ್ತು ಮಾತುಕತೆಗೆ 1 ನೇ ಆಪಾದಿತನನ್ನು ತಾನು ಕರೆಯುವುದಾಗಿ ಸಹ ಹೇಳಿದರು ಹಾಗೂ ಎರಡನೇ ಅರ್ಜಿದಾರನು ವಿಷಯವನ್ನು ಇತ್ಯರ್ಥಪಡಿಸುವಲ್ಲಿ ಅವನ ವೈಯಕ್ತಿಕ ಹಿತಾಸಕ್ತಿಯ ಬಗ್ಗೆ ಕೇಳಿದಾಗ, ಅಲ್ಲಿ ತಾನೂ ಸಹ ಹಾಜರಿದ್ದ ೧ ಪೊಲೀಸ್ ಉಪ ಅಧೀಕ್ಷಕರಾದ ಶ್ರೀ ಚಂದ್ರಶೇಖರ್‌ರವರು ಸಚಿವರ ಸೂಚನೆಗಳನ್ನು ಎರಡನೇ ಅರ್ಜಿದಾರನು ಅನುಸರಿಸಬೇಕೆಂದು ಹಾಗೂ ಪ್ರಕರಣವನ್ನು ಮುಕ್ತಾಯ ಗೊಳಿಸಬೇಕೆಂದು ಬೆದರಿಕೆ ಒಡ್ಡಿದರು.ಆ ನಂತರ ಎರಡನೇ ಅರ್ಜಿದಾರನು ಆ ಜಾಗದಿಂದ ರಾತ್ರಿ ಸುಮಾರು 11-30ಕ್ಕೆ ಹೊರಟನು.

12. ದಿನಾಂಕ 20-11-2017 ರಂದು ಎಸ್.ಸಿ.ಸಂಖ್ಯೆ: 50/2017 ರಲ್ಲಿ ನ್ಯಾಯಾಲಯದ ವ್ಯವಹರಣೆಗಳ ಪ್ರಮಾಣೀಕೃತ ಪ್ರತಿಗಳನ್ನು ಪಡೆಯಲು ಅರ್ಜಿದಾರರಿಗೆ ಸಹಾಯ ಮಾಡಿದ ವಕೀಲರಾದ ಆನಂದ್ ಎಂಬುವವರಿಗೆ ಫೋನ್ ಮೂಲಕ ಕಠಿಣ ಪರಿಣಾಮಗಳ ಬಗ್ಗೆ 10 ನೇ ಎದುರುದಾರ ವಿನಯ್ಕುಲಕರ್ಣಿ ಬೆದರಿಕೆ ಹಾಕಿದ್ದಾರೆ ಮತ್ತು 23-11-2017 ರಂದು ತುಳಜಪ್ಪ ಸುಲ್ಸಿಯವರು ಗುರುನಾಥ ಗೌಡರ್ ರೊಂದಿಗೆ ಸಭೆ ನಡೆಸಿದ ಸಿಸಿಟಿವಿ ಫೂಟೇಜ್ ಸುವರ್ಣ ವಾರ್ತಾ ವಾಹಿನಿಯಲ್ಲಿ ಪ್ರಸಾರವಾಗಿದೆಯೆಂದು ಹಾಗೂ ಸದ್ಯದ ಪ್ರಕರಣದಲ್ಲಿ ತನಿಖೆಗೆ ಹಾಗೂ ಸರ್ಕಾರಿ ಸಂಸ್ಥೆಗಳ ಹಸ್ತಕ್ಷೇಪಕ್ಕೆ ಸಂಬಂಧಿಸಿದಂತೆ, ವಿಧಾನಸಭೆಯಲ್ಲಿ ವಿಶ್ವೇಶ್ವರ ಹೆಗ್ಡೆ ಕಾಗೇರಿಯವರು ಪ್ರಶ್ನೆಯನ್ನು ಎತ್ತಿರುತ್ತಾರೆ ಎಂದು ಹೇಳಿದ್ದಾರೆ.ಹೀಗಾಗಿ, ಎರಡನೇ ಅರ್ಜಿದಾರನು ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಯವರಿಗೆ ಇನ್ನೊಂದು ಮನವಿಯನ್ನು ಸಲ್ಲಿಸಿದ್ದು, ಅದು ದೂರುದಾರರು ಜೀವ ಬೆದರಿಕೆ ಎದುರಿಸುತ್ತಿದ್ದಾರೆಂಬ ಕಾರಣವನ್ನು ಮತ್ತು ಮೃತನ ಪತ್ನಿಯು 03-11-2017ರಂದು ಅಫಿಡೆವಿಟ್ಟನ್ನು ಬಲವಾಗಿ ಸಮರ್ಥಿಸಲು ಅಸಮರ್ಥಳಾಗಿದ್ದಕ್ಕಾಗಿ ಕಾರಣವನ್ನು ನಿರೂಪಿಸುವ ಅಫಿಡೆವಿಟ್ಟನ್ನು ಹೊಂದಿತ್ತು.ಸದರಿ ಅಫಿಡೆವಿಟ್ನಲ್ಲಿ, 2 ನೇ ಅರ್ಜಿದಾರನುದಿನಾಂಕ: 03-11-2017ರ ದೂರಿನಲ್ಲಿ ಮೃತನ ಪತ್ನಿಯ ಸಹಿಯನ್ನು ಒಪ್ಪಿದ್ದಾನೆ ಮತ್ತು ವಕೀಲ ಆನಂದ್ರವರಿಗೆ ಮಾಡಿದ್ದ ಬೆದರಿಕೆ ಕರೆಯೂ ಸಹದಿನಾಂಕ: 24-11-2017ರಂದು ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ಪ್ರಕಟವಾಗಿರುತ್ತದೆ.ಧಾರವಾಡದ ವಕೀಲರ ಸಂಘ ಮತ್ತು ಸದರಿ ವಕೀಲ ಆನಂದ್ರವರು ವಿನಯ್ಕುಲಕರ್ಣಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಧಾರವಾಡದ ಪೊಲೀಸ್ ಅಧೀಕ್ಷಕರ ಮುಂದೆ ದೂರುಗಳನ್ನು ಒಟ್ಟಿಗೆ ದಾಖಲಿಸಿದ್ದಾರೆ.ಆದರೆ, ಯಾವ ಕ್ರಮವನ್ನೂ ಕೈಗೊಂಡಿಲ್ಲ.ಎರಡನೇ ಅರ್ಜಿದಾರನು ತನ್ನ ಸಹೋದರರನ್ನು ಹತ್ಯೆ ಮಾಡಲು ಪಿತೂರಿ ನಡೆಸಿದ ಶ್ರೀ ತುಳಜಪ್ಪ ಸುರವರ ಮತ್ತು ಇತರ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಕ್ಕಾಗಿ ಕರ್ನಾಟಕದ ಪೊಲೀಸ್ ಮಹಾ ನಿರ್ದೇಶಕರ ಮತ್ತು ಪೊಲೀಸ್ ಮಹಾ ನಿರೀಕ್ಷಕರ ಮುಂದೆ ಹಾಗೂ ಕರ್ನಾಟಕ ಸರ್ಕಾರದ 0 ಒಳಾಡಳಿತ ಇಲಾಖೆಯ ಸಚಿವರ ಮುಂದೆ ದೂರನ್ನು ದಾಖಲಿಸಿದ್ದಾನೆ.ಆದರೆ, ಸದರಿ ದೂರಿನ ವಿಷಯದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ.ಅರ್ಜಿದಾರರ ಇತರ ವಾದವೆಂದರೆ,ದಿನಾಂಕ: 25-11-2017ರಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ವಿನಯ್ಕುಲಕರ್ಣಿಯು ಸದರಿ ವಕೀಲ-ಆನಂದ್ ಜೊತೆ ತಾನು ಮಾತನಾಡಿದ್ದಾಗಿ ಒಪ್ಪಿದ್ದಾರೆ ಮತ್ತುದಿನಾಂಕ: 10-11-2017ರಂದು ಮಹೇಶ್ಶೆಟ್ಟಿಯ ಮನೆಯಲ್ಲಿ ತಾನು ಇದ್ದುದಾಗಿಯೂ ಹಾಗೂ ಎರಡನೇ ಅರ್ಜಿದಾರನೊಂದಿಗೆ ಮಾತನಾಡಿದ್ದಾಗಿಯೂ ಒಪ್ಪಿದ್ದಾರೆ.ಅಂತಿಮವಾಗಿ, ಉನ್ನತ ದರ್ಜೆಯ ಅಧಿಕಾರಿಗಳು ಈ ವಿಷಯದಲ್ಲಿ ಒಳಗೊಂಡಿರುವುದರಿಂದಾಗಿ, ಎರಡನೇ ಅರ್ಜಿದಾರನು ವಿನಯ್ಕುಲಕರ್ಣಿ, ತುಳಜಪ್ಪ ಸುಲ್ಪಿ ಮತ್ತು ಚಂದ್ರಶೇಖರ್ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು 29-11-2017 ರಂದು ಧಾರವಾಡದ ಪೊಲೀಸ್ ಅಧೀಕ್ಷಕರ ಮುಂದೆ ದೂರನ್ನು ದಾಖಲಿಸಿದ್ದಾನೆ.ದಿನಾಂಕ: 30-11-2017ರಂದು ಎರಡನೇ ಅರ್ಜಿದಾರನನು ಅವನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಪೊಲೀಸ್ ಮಹಾ ನಿರೀಕ್ಷಕರ ಮುಂದೆ ಅಫಿಡೆವಿಟ್ಟನ್ನು ಸಲ್ಲಿಸಿದ್ದಾನೆ ಮತ್ತು ಅವರೆಲ್ಲರೂ ತನ್ನ ಸಹೋದರ ಯೋಗೇಶ್ ಗೌಡ ಗೌಡರ್ನ ಹತ್ಯೆಯಲ್ಲಿ

ಭಾಗಿಯಾಗಿರುವುದರಿಂದಾಗಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕಾಗಿ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಒಳಾಡಳಿತ ಸಚಿವರಿಗೆ ಧಾರವಾಡದ ಜಿಲ್ಲಾಧಿಕಾರಿಯ ಮುಖಾಂತರ ಮನವಿ ಸಲ್ಲಿಸಿದ್ದಾನೆ ಮತ್ತು ಸತ್ಯವನ್ನು ಬಹಿರಂಗಪಡಿಸಲು ಹಾಗೂ ಅಪರಾಧಿಗಳನ್ನು ವಿಚಾರಣೆಗೆ ಗುರಿಪಡಿಸಲು ಕೇಂದ್ರ ತನಿಖಾ ಸಂಸ್ಥೆಯಿಂದ ವಿಚಾರಣೆಗಾಗಿ ಒತ್ತಾಯ ಮಾಡಿದ್ದಾನೆ.

13. ಅರ್ಜಿದಾರನು ಈ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದರೂ ಸಹ ಮತ್ತು ಸಂಬಂಧಪಟ್ಟ ಇಲಾಖೆಯ ಸಚಿವರಿಗೆ, ಮುಖ್ಯಮಂತ್ರಿಯವರಿಗೆ ಮನವಿ ಮಾಡಿದರೂ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ ಮತ್ತು ಯಾವುದೇ ಇತರ ಪರ್ಯಾಯವಾದ ಹಾಗೂ ಪರಿಣಾಮಕಾರಿಯಾದ ಪರಿಹಾರವಿಲ್ಲದೆ, ಯೋಗೇಶ್ ಗೌಡ ಗೌಡರ್ನ ಕೊಲೆಯ ತನಿಖೆ ಮಾಡಲು ಮತ್ತು ವರದಿ ಸಲ್ಲಿಸಲು ಎದುರುದಾರ-ಕೇಂದ್ರ ತನಿಖಾ ಸಂಸ್ಥೆಗೆ ನಿರ್ದೇಶಿಸುವ ಪರಿಹಾರ ಕೋರಿ ಮತ್ತು ಅಪರಾಧದಲ್ಲಿ ಭಾಗಿಯಾದ ಎಲ್ಲಾ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳಲು ಕೋರಿ ಹಾಗೂ ಯೋಗೇಶ್ ಗೌಡ ಗೌಡರ್ನ ಕೊಲೆಯ ಒಳಸಂಚಿನಲ್ಲಿ ವಿನಯ್ಕುಲಕರ್ಣಿಯನ್ನು ಕಾಪಾಡಿದ ಎಲ್ಲಾ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು 4 ನೇ ಮತ್ತು 5 ನೇ ಎದುರುದಾರರಿಗೆ ನಿರ್ದೇಶಿಸಲು ಕೋರಿ, ಅರ್ಜಿದಾರರು ರಿಟ್ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸಲು ಕೋರಿ ಈ ನ್ಯಾಯಾಲಯಕ್ಕೆ ಬಂದಿದ್ದಾರೆ.ಹೀಗಾಗಿ, ರಿಟ್ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸಲು ಈ ನ್ಯಾಯಾಲಯವನ್ನು ಪ್ರಾರ್ಥಿಸಿದ್ದಾರೆ.

14. ಅರ್ಜಿದಾರರು ತಮ್ಮ ವಾದವನ್ನು ಸಮರ್ಥಿಸುವಲ್ಲಿ, ಈ ಮುಂದಿನ ದಸ್ತಾವೇಜುಗಳ ಮೇಲೆಯೂ ಸಹ ಅವಲಂಬಿತರಾಗಿದ್ದಾರೆ:-ಎಚ್ಚರಿಕೆ ಪತ್ರದ ಪ್ರತಿ, ದೂರಿನ ಪ್ರತಿ, ಪ್ರಥಮ ಮಾಹಿತಿ ವರದಿ, ದೋಷಾರೋಪಪಟ್ಟಿಯ ಪ್ರತಿ, ಮೃತನ ವಿಧವೆಯು ಪೊಲೀಸ್ ಆಯುಕ್ತರಿಗೆ ನೀಡಿದ ಮನವಿ ಮತ್ತುದಿನಾಂಕ: 16-01-2017 ಹಾಗೂ 17-02-2017ರಂದು ಮುಖ್ಯಮಂತ್ರಿಯವರಿಗೆ ನೀಡಿದ ಮನವಿ, ಸಿಡಬ್ಲ್ಯೂ ೧-1 ರ ಸಾಕ್ಷ್ಯದ ಪ್ರತಿ, ವ್ಯವಹರಣೆಯ ದಾಖಲೆಪತ್ರದ ಪ್ರತಿ ಮತ್ತು ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಯವರಿಗೆ ನೀಡಿದ ಮೃತನ ಪತ್ನಿಯಾದ ಮಲ್ಲಮ್ಮಳ ಅಫಿಡೆವಿಟ್ನೊಂದಿಗೆ ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಯವರಿಗೆ 2 ನೇ ಅರ್ಜಿದಾರರಿಂದ ನೀಡಲಾದ ಮನವಿಯ ಪ್ರತಿ, ಸಂಭಾಷಣೆಯ ಬಗ್ಗೆ ದಾಖಲಿಸಲಾಗಿರುವ ವಿಡಿಯೋ ರೆಕಾರ್ಡಿಂಗ್ ಪ್ರತಿ ಮತ್ತು ಅದರ ಭಾಷಾಂತರಿತ ಪ್ರತಿಗಳು, ಫೋನ್ ಕರೆಯ ದಾಖಲಿತ ಪ್ರತಿ, ಸಂಭಾಷಣೆಯ ಲಿಖಿತರೂಪದ ಪ್ರತಿ, 2 ನೇ ಅರ್ಜಿದಾರನು ಬೆಂಗಳೂರಿನ ಪೊಲೀಸ್ ಮಹಾ ನಿರೀಕ್ಷಕರಿಗೆ ಮತ್ತು ಪೊಲೀಸ್ ಮಹಾ ನಿರ್ದೇಶಕರಿಗೆ, ಒಳಾಡಳಿತ ಸಚಿವರಿಗೆ ಧಾರವಾಡದ ಪೊಲೀಸ್ ಅಧೀಕ್ಷಕರಿಗೆ ಬೆಳಗಾವಿಯ ಹೆಚ್ಚುವರಿ ಪೊಲೀಸ್ ಅಧೀಕ್ಷಕರಿಗೆ ನೀಡಿದ ಮನವಿಯ ಪ್ರತಿ, 2 ನೇ ಅರ್ಜಿದಾರನು ಮುಖ್ಯಮಂತ್ರಿಯವರಿಗೆ ನೀಡಿದ,ದಿನಾಂಕ: 30-11-2017ರ ದೂರು, 2 ನೇ ಅರ್ಜಿದಾರನು ಗೃಹ ಸಚಿವರಿಗೆ ನೀಡಿದದಿನಾಂಕ: 30-11-2017ರ ದೂರು ಪತ್ರ, 2 ನೇ ಅರ್ಜಿದಾರನು ಪೊಲೀಸ್ ಮಹಾ ನಿರೀಕ್ಷಕರಿಗೆ ನೀಡಿದದಿನಾಂಕ: 30-11-2017ರ ಮನವಿಪತ್ರದ ಪ್ರತಿ-ಇವುಗಳನ್ನು ಈ ಅರ್ಜಿಯ ಸಮರ್ಥನೆಯಲ್ಲಿ ಅನುಬಂಧ- ಎ ಯಿಂದ ಎಎ ವರೆಗೆ ಸೇರಿಸಲಾಗಿದೆ.

15. ಈ ಅರ್ಜಿಯ ಅನುಸರಣೆಯಲ್ಲಿ, ಬೆಂಗಳೂರಿನ ಪ್ರಧಾನ ಪೀಠದಿಂದ ಈ ಕಡತವು ಸ್ವೀಕೃತವಾಗಿದೆ ಮತ್ತು ಮೂಲ ದೂರುದಾರರನ್ನು 18 ನೇ ಎದುರುದಾರರನ್ನಾಗಿ ದಾವೆಗೆ ಸೇರಿಸಲು ಅರ್ಜಿಯನ್ನು ಸಹ ಸಲ್ಲಿಸಲಾಗಿದೆ ಮತ್ತು ಈ ನ್ಯಾಯಾಲಯವು ಅರ್ಜಿದಾರರ ಪರ ವಕೀಲರ ಹಾಗೂ ಹೆಚ್ಚುವರಿ ಅಡ್ವಕೇಟ್ ಜನರಲ್ರವರ ವಾದಗಳನ್ನುದಿನಾಂಕ: 30-01-2018ರಂದು ಆಲಿಸಿದೆ ಮತ್ತು ವಿಷಯವನ್ನು ಆದೇಶಗಳಿಗಾಗಿ ಕಾದಿರಿಸಿದೆ ಹಾಗೂ ಅಂತಿಮವಾಗಿ, ಆದೇಶಗಳನ್ನು 1-8-2018 ರಂದು ಬಿಡುಗಡೆ ಮಾಡಲಾಯಿತು ಮತ್ತು ಮಾನ್ಯ ಸ್ಥಾಯೀ ನ್ಯಾಯವಾದಿಯಾದ ಶ್ರೀ ಎಂ.ಬಿ. ಕಣವಿಯವರು 1 ರಿಂದ 3 ರ ವರೆಗಿನ ಎದುರುದಾರರ ಪರವಾಗಿ ನೋಟೀಸು ತೆಗೆದುಕೊಂಡಿರುತ್ತಾರೆ ಮತ್ತು ವಿಷಯವನ್ನು ಈ ನ್ಯಾಯಾಲಯದ ಮುಂದೆದಿನಾಂಕ: 30-01-2019ರಂದು ಮತ್ತೆ ಸುನಾವಣೆ ಮಾಡಿದಾಗ ಪಕ್ಷಕಾರರನ್ನಾಗಿ ಸೇರಿಸುವ ಅರ್ಜಿಯನ್ನು ಆಲಿಸಲಾಯಿತು ಮತ್ತು ಈ ನ್ಯಾಯಾಲಯವು ಅದನ್ನು ಅಂಗೀಕರಿಸಿತು ಹಾಗೂ ಅದರ ಫಲಿತಾಂಶ ಮೂಲ ದೂರುದಾರನು 18 ನೇ ಎದುರುದಾರನಾಗಿ ಕಾನೂನು ಕಾನೂನು ಪ್ರಕಾರ ದಾಖಲೆಯಾಯಿತು ಮತ್ತು ಎರಡೂ ಕಡೆಯ ವಕೀಲರ ವಾದಗಳನ್ನು ಆಲಿಸಿ, ತೀರ್ಪನ್ನು ಕಾದಿರಿಸಲಾಯಿತು.

16. ಅರ್ಜಿದಾರರ ಪರ ಹಾಜರಾದ ವಕೀಲರು ತಮ್ಮ ವಾದಗಳ ಸಮರ್ಥನೆಯಲ್ಲಿ, ಈ ಅರ್ಜಿದಾರರು ಮೃತನ ತಾಯಿ ಮತ್ತು ಸಹೋದರನಾಗಿದ್ದಾರೆ ಮತ್ತು ಕೊಲೆಯುದಿನಾಂಕ: 15-06-2016ರಂದು ಬೆಳಿಗ್ಗೆ 7-37ಕ್ಕೆ ನಡೆದಿರುತ್ತದೆ ೧ ಮತ್ತು 1 ರಿಂದ 3 ರವರೆಗಿನ ಎದುರುದಾರರು ಸಿಬಿಐ ಸಿಬ್ಬಂದಿಗಳಾಗಿದ್ದಾರೆ ಮತ್ತು 4 ರಿಂದ 9 ರ ವರೆಗಿನ ಎದುರುದಾರರು ಪೊಲೀಸ್ ಇಲಾಖೆಯ ಅಧಿಕಾರಿಗಳಾಗಿದ್ದಾರೆ ಹಾಗೂ 10 ಮತ್ತು 11 ನೇ ಎದುರುದಾರರು ಮಾಜಿ ಸಚಿವ ಹಾಗೂ ಪೊಲೀಸ್ ಉಪ-ಅಧೀಕ್ಷಕರಾಗಿದ್ದು, ಸಾಕ್ಷಿದಾರರಿಗೆ ಬೆದರಿಕೆ ಹಾಕುವಲ್ಲಿ ಭಾಗಿಯಾಗಿದ್ದಾರೆ ಮತ್ತು 12 ರಿಂದ 17 ರವರೆಗಿನ ಎದುರುದಾರರು ಕೊಲೆಯ ಅಧಿವಿಚಾರಣೆಯನ್ನು ಎದುರಿಸುತ್ತಿರುವ ಆಪಾದಿತರಾಗಿದ್ದಾರೆಂದು ವಾದಿಸಿದ್ದಾರೆ ಮತ್ತು ಮೃತನ ಪತ್ನಿಯಾದ ಮೂಲ ದೂರುದಾರರು ಬೆಳಿಗ್ಗೆ 9-30 ಗಂಟೆಗೆ ದೂರು ದಾಖಲಿಸಿದ್ದಾರೆ ಮತ್ತು ಅಲ್ಲಿ ರಾಜಕೀಯ ವೈಷಮ್ಯವಿತ್ತು ಹಾಗೂ ಕೊಲೆಯಾಗುವುದಕ್ಕೆ ಮುಂಚೆಯಷ್ಟೇ ಅನಾಮಧೇಯ ಪತ್ರವನ್ನು ಸಹ ಸ್ವೀಕರಿಸಲಾಗಿತ್ತು ಮತ್ತು ಆ ಪತ್ರಗಳನ್ನು ಸಹದಿನಾಂಕ: 16-06-2016ರಂದು ಎಂದರೆ, ಕೊಲೆ ನಡೆದ ಮರುದಿನವೇ ಪೊಲೀಸರಿಗೆ ನೀಡಲಾಗಿದೆ.ಕೂಡಲೇ, ತನಿಖಾಧಿಕಾರಿಯನ್ನು ಎರಡು ದಿನಗಳೊಳಗೆ ವರ್ಗಾವಣೆ ಮಾಡಿರುವುದು ಮತ್ತು ದಾಖಲೆಗಳನ್ನು ನ್ಯಾಯಾಲಯದ ಮುಂದೆ ಮಂಡಿಸಿರುವುದು ಅಲ್ಲಿ ರಾಜಕೀಯ ವೈಮನಸ್ಯವಿತ್ತೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಮತ್ತು ತನಿಖಾಧಿಕಾರಿಯು ರಾಜಕೀಯ ವೈಮನಸ್ಯವನ್ನು ಕಂಡುಹಿಡಿಯುವ ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ ಹಾಗೂ ಇಡೀ ತನಿಖೆಯನ್ನು ಪರಿಶೀಲಿಸಿದಾಗ, ಅದು ಸುಳ್ಳು ತನಿಖೆಯೆಂದು ಸ್ಪಷ್ಟವಾಗಿ ತೋರುತ್ತದೆಂದು ಅವರು ವಾದಿಸಿದ್ದಾರೆ.

17. ಅದೊಂದು ಬರ್ಬರ ಕೊಲೆಯಾಗಿದ್ದು, ಅವನಿಗೆ 35 ಗಾಯಗಳಾಗಿವೆಯೆಂದು ಪಿ.ಎಂ. ವರದಿಯಲ್ಲಿ ಬಿಂಬಿತವಾಗಿದೆ ಮತ್ತು ಸಿಸಿಟಿವಿ ಫೂಟೇಜನ್ನು ಪಕ್ಕದ ಕಟ್ಟಡದಿಂದ ತೆಗೆದುಕೊಂಡರೇ ಹೊರತು ಅದೇ ಕಟ್ಟಡದ ಸಿಸಿಟಿವಿ ಫೂಟೇಜನ್ನು ತೆಗೆದುಕೊಂಡಿಲ್ಲ.ಅದರಲ್ಲಿ ಒಂದು ಬ್ಯಾಂಕು ಸಹ ಇದೆ ಮತ್ತು ಕೇವಲ ತೋರಿಕೆಗಾಗಿ, ಆ ಘಟನೆ ನಡೆದ ಸಮಯದಲ್ಲಿ ಹಾದುಹೋದ ಕೆಎಸ್ಆರ್ಟಿಸಿ ಬಸ್ಸಿನ ಚಾಲಕ ಮತ್ತು ನಿರ್ವಾಹಕರನ್ನು ವಿಚಾರಣೆ ಮಾಡಿರುತ್ತಾರೆ ಮತ್ತು ಘಟನೆಯ ದೃಶ್ಯದಲ್ಲಿ ಕಾಣುವ ಕಪ್ಪು ಕಾರಿಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ ನಡೆಸಿಲ್ಲ ಮತ್ತು ಅದು ನಿಜವಾದ ಅಪರಾಧಿಗಳನ್ನು ಕಾಪಾಡಲು ಉದ್ದೇಶಪೂರ್ವಕ ಪ್ರಯತ್ನವನ್ನಷ್ಟೇ ಮಾಡಲಾಗಿದೆ ಹಾಗೂ ತನಿಖೆಗಾಗಿ ಪತ್ನಿಯು ನೀಡಿದ ಅನುಬಂಧ- ಇ, ಎಫ್ ಮತ್ತು ಜಿ ಗಳನ್ನು ಎದುರುದಾರರು ನಿರಾಕರಿಸಿಲ್ಲ ಮತ್ತು ಕರ್ನಾಟಕದ ಮುಖ್ಯ ನ್ಯಾಯಮೂರ್ತಿಯವರಿಗೆ ಸಹ ಮನವಿಯನ್ನು ನೀಡಲಾಗಿದೆ ಹಾಗೂ ಆಡಿಯೋ ಮತ್ತು ವಿಡಿಯೋಗಳನ್ನು ಸಹ ಹಾಜರುಪಡಿಸಲಾಗಿದೆ ಅಧಿಕಾರಿಯು ಧಾರವಾಡಕ್ಕೆ ಸಂಬಂಧಪಡದಿದ್ದರೂ ಸಹ ಅವರು 2 ನೇ ಅರ್ಜಿದಾರನನ್ನು ಮಾಜಿ ಸಚಿವರ ಬಳಿ ಕರೆತರಲು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ ಮತ್ತು ಇವೆಲ್ಲವೂ, ಇದರ ಹಿಂದೆ ಸಚಿವರಿದ್ದಾರೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಅಥವಾ ಹಾಗಿಲ್ಲದಿದ್ದರೆ, ಅವರು 2 ನೇ ಅರ್ಜಿದಾರನಿಗೆ ಮತ್ತು ಸಾಕ್ಷಿದಾರರಿಗೆ ಸಹ ಬೆದರಿಕೆ ಹಾಕುತ್ತಿರಲಿಲ್ಲ ಹಾಗೂ ಇಲ್ಲಿ ಯಾವುದೇ ನ್ಯಾಯಸಮ್ಮತ ತನಿಖೆ ಆಗಿಲ್ಲ.ಅಲ್ಲದೆ, ಎರಡನೇ ಅರ್ಜಿದಾರನು ಸಹ ಸಂಬಂಧಪಟ್ಟ ಪೊಲೀಸ್ ಇಲಾಖೆಗೆ, ಒಳಾಡಳಿತ ಇಲಾಖೆಯ ಸಚಿವರುಗಳಿಗೆ, ಮುಖ್ಯಮಂತ್ರಿಯವರಿಗೆ ದೂರು ಸಲ್ಲಿಸಿದ್ದಾನೆ ಮತ್ತು ಕರ್ನಾಟಕದ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯವರ ಮುಂದೆ ಅಫಿಡೆವಿಟ್ಟನ್ನು ಸಹ ಸಲ್ಲಿಸಿದ್ದಾರೆ ಹಾಗೂ ಕರ್ತವ್ಯದಲ್ಲಿದ್ದ ಪೊಲೀಸ್ ಅಧಿಕಾರಿಗಳು ನ್ಯಾಯಸಮ್ಮತವಾದ ತನಿಖೆಯನ್ನು ನಡೆಸಿಲ್ಲ ಎಂದು ಸಹ ವಕೀಲರು ವಾದಿಸಿದ್ದಾರೆ ಹಾಗೂ ಪ್ರಾಸಿಕ್ಯೂಷನ್ನ ವಾದವನ್ನು ನಂಬಲು ಸಾಕಷ್ಟು ಸಾಕ್ಷ್ಯಾಧಾರಗಳಿವೆಯೆಂದು ಸಹ ಹೇಳಿದ್ದಾರೆ.ಅವರ ವಾದದ ಸಮರ್ಥನೆಯಲ್ಲಿ, ಅರ್ಜಿದಾರರ ವಕೀಲರು ಈ ಮುಂದಿನ ತೀರ್ಪುಗಳ ಮೇಲೆ ಅವಲಂಬಿತರಾಗಿದ್ದಾರೆ.

| ಕ್ರಸಂ | ಉದ್ಧರಣೆಗಳು |
|---|---|
| 1 | ಹೇಮಾ -ವಿರುದ್ಧ- ರಾಜ್ಯ , ಪೊಲೀಸ್ ನಿರೀಕ್ಷಕರು , 11 12 ಮದ್ರಾಸ್ [2013] 3 ಎಸ್.ಸಿ.ಆರ್ . \| |
| 2 | ಬಾಬು ಭಾಯ್ -ವಿರುದ್ಧ- ಗುಜರಾತ್ ರಾಜ್ಯ ಮತ್ತು ಇತರರು , 2010 (12) ಎಸ್ ಸಿಸಿ -254 |

| | |
|---|---|
| 3 . | ಪಂಜಾಬ್‌ರಾಜ್ಯ ವಿರುದ್ಧ ಕೇಂದ್ರ ತನಿಖಾ ದಳ ಮತ್ತು ಇತರರು [ 2011 ] 11 ಎಸ್.ಸಿ.ಆರ್ . 281 |
| 4 . | ಪೂಜಾಪಾಲ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ |
| 5 . | ಸಮಾಜ ಪರಿವರ್ತನ ಸಮುದಾಯ ಮತ್ತು ಇತರರು -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು ( 2012 ) 7 ಎಸ್‌ಸಿಸಿ 407 |
| 6 . | ನರ್ಮದಾಬಾಯಿ -ವಿರುದ್ಧ- ಗುಜರಾತ್ ರಾಜ್ಯ ಮತ್ತು ಇತರರು ( 2011 ) 5 ಎಸ್‌ಸಿಸಿ 79 |
| 7 . | ಧರಂಪಾಲ್ ವಿರುದ್ಧ ಹರಿಯಾಣ ರಾಜ್ಯ ಮತ್ತು ಇತರರು |
| 8 . | ಕೆ.ವಿ. ರಾಜೇಂದ್ರನ್ ವಿರುದ್ಧ ಪೊಲೀಸ್ ಅಧೀಕ್ಷಕರು ಸಿಬಿಸಿಐಡಿ ದಕ್ಷಿಣ ವಲಯ , ಚೆನ್ನೈ ಮತ್ತು ಇತರರು ( 2013 ) 12 ಎಸ್‌ಸಿಸಿ 480 |
| 9 . | ದೀನುಭಾಯ್ ಬೋಘಬಹಾಯ್ ಸೋಲಂಕಿ -ವಿರುದ್ಧ- ಗುಜರಾತ್ ರಾಜ್ಯ ( 2014 ) 4 ಎಸ್‌ಸಿಸಿ 626 |
| 10 . | ಇ . ಶಿವಕುಮಾರ್ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಎಐಆರ್ 2018 ಎಸ್‌ಸಿ 2486 |
| 11 . | ನರೇಂದ ಗೋಯಲ್ -ವಿರುದ್ಧ ಮಹಾರಾಷ್ಟ್ರ ರಾಜ್ಯ ( 2009 ) ಎಸ್‌ಸಿಸಿ 65 |
| 12 . | ಅಶೋಕ್ ಕುಮಾರ್ ತೋಡಿ -ವಿರುದ್ಧ - ಕಿಶೋರ್ ಜಹಾನ್ ಮತ್ತು ಇತರರು ( 2011 ) 3 ಎಸ್‌ಸಿಸಿ 758 |
| 13 . | ಕೇದಾರ್ ನಾರಾಯಣ್ ಪರೀದ ಮತ್ತು ಇತರರು -ವಿರುದ್ಧ- ಒರಿಸ್ಸಾ ರಾಜ್ಯ ( 2009 ) 9 ಎಸ್‌ಸಿ 538 |
| 14 . | ಮಿಥಿಲೇಶ್‌ಕುಮಾರ್ ಸಿಂಗ್ -ವಿರುದ್ಧ- ರಾಜಸ್ಥಾನ ರಾಜ್ಯ ( 2015 ) 9 ಎಸ್‌ಸಿಸಿ 795 |
| 15 . | ಆರ್‌ಎಸ್ ಸೋಧಿ -ವಿರುದ್ಧ- ಉತ್ತರಪ್ರದೇಶ ರಾಜ್ಯ 1994 ಎಸ್‌ಯುಪಿಪಿ ( 1 ) ಎಸ್‌ಸಿ 143 |
| 16 . | ಸುಬಾರ್ಥ ಚಟ್ಟೋರಾಜ್ -ವಿರುದ್ಧ- ಯೂನಿಯನ್ ಆಫ್ ಇಂಡಿಯಾ ( 2014 ) 8 ಎಸ್‌ಸಿಸಿ 768 |
| 17 . | ಇಂರ್ದಸಿಂಗ್ -ವಿರುದ್ಧ ಪಂಜಾಬ್‌ರಾಜ್ಯ ( 1994 ) 6 ಎಸ್‌ಸಿಸಿ 275 |
| 18 . | ಜಹೀರಾ ಹಬುದುಲ್ಲಾ ಶೇಕ್ -ವಿರುದ್ಧ- ಗುಜರಾತ್ ರಾಜ್ಯ ( 2004 ) 4 ಎಸ್‌ಸಿಸಿ 158 |
| 19 . | ರಮೇಶ್ ಮತ್ತು ಇತರರು -ವಿರುದ್ಧ ಹರಿಯಾಣ ರಾಜ್ಯ ಕ್ರಿಮಿನಲ್ ಅಪೀಲು 2526/2014 |
| 20 . | ಸುನಿಲ್‌ಕುಮಾರ್ ಪಾಲ್ -ವಿರುದ್ಧ- ಫೋಟಾ ಶೇಕ್ ಮತ್ತು ಇತರರು ( 1984 ) 4 ಎಸ್‌ಸಿಸಿ 533 |
| 21 . | ಮೊಹಮ್ಮದ್ ಹುಸೈನ್ @ ಲಿಫಿಕರ್ ಆಲಿ -ವಿರುದ್ಧ- ರಾಜ್ಯ ( 2012 ) 9 ಎಸ್ ಸಿಸಿ 408 |
| 22 . | ದಂಡ ಪ್ರಕ್ರಿಯಾ ತಿದ್ದುಪಡಿ ವಿಧೇಯಕ , 2006 |

18. 4 ರಿಂದ 9 ರವರೆಗಿನ ಎದುರುದಾರರನ್ನು ಪ್ರತಿನಿಧಿಸುವ ಹೆಚ್ಚುವರಿ ಅಡ್ವಕೇಟ್ ಜನರಲ್ರವರು ತಮ್ಮ ವಾದಗಳಲ್ಲಿ ದೋಷಾರೋಪಪಟ್ಟಿಯನ್ನು ದಿನಾಂಕ 9/ 9/2016 ರಂದು ಸಲ್ಲಿಸಲಾಯಿತ್ತೆಂದು ಮತ್ತು 63 ಸಾಕ್ಷಿದಾರರ ಪೈಕಿ 57 ಮಂದಿ ಸಾಕ್ಷಿದಾರರನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆಯೆಂದು ಮತ್ತು ಸಾಕ್ಷಿದಾರರಲ್ಲಿ ಒಬ್ಬ ಅರ್ಜಿದಾರನಾಗಿದ್ದು, ಸಿಡಬ್ಲ್ಯು ಶ -19 ಆಗಿದ್ದಾನೆ ಮತ್ತು ಇನ್ನೊಬ್ಬ ಅರ್ಜಿದಾರರು ಅವನ ತಾಯಿಯಾಗಿದ್ದು, ಅವರು ಸಾಕ್ಷಿದಾರರಾಗಿಲ್ಲ ಮತ್ತು ಅವನಿಗೆ ಸಮನುಗಳನ್ನು ಜಾರಿ ಮಾಡಿದ್ದರೂ ಸಹ ಅವನು ನ್ಯಾಯಾಲಯದ ಮುಂದೆ ಬಂದಿಲ್ಲವೆಂದು ದೋಷಾರೋಪ ಪಟ್ಟಿಯನ್ನು ಸಲ್ಲಿಸುವವರೆಗೂ ಯಾವುದೇ ಆಪಾದನೆ ಅಥವಾ ಮನವಿ ಇರಲಿಲ್ಲ ಮತ್ತು ಅರ್ಜಿದಾರರು ಅಧಿವಿಚಾರಣೆಯಲ್ಲಿ ಭಾಗವಹಿಸಿಲ್ಲವೆಂದೂ ಆದರೆ, ಅಧಿವಿಚಾರಣೆಯು ಪ್ರಾರಂಭವಾದಾಗ, ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆಂದು ವಾದಿಸಿದ್ದಾರೆ.ಇನ್ನೊಂದು ವಾದವೆಂದರೆ, 2 ನೇ ಅರ್ಜಿದಾರನ ವಿರುದ್ಧ 30 ಮೊಕದ್ದಮೆಗಳಿವ ಹಾಗೂ ಮೃತನ ವಿರುದ್ಧವೂ ಹಲವಾರು ಮೊಕದ್ದಮೆಗಳಿವೆ.2 ನೇ ಅರ್ಜಿದಾರನು ಒಬ್ಬ ರೌಡಿ ಶೀಟರ್ ಸಹ ಆಗಿದ್ದಾನೆ ಮತ್ತು 2 ನೇ ಅರ್ಜಿದಾರನ ವಿರುದ್ಧ ಕೊಲೆ ಪ್ರಯತ್ನ ಮಾಡಿರುವ ಮೊಕದ್ದಮೆಯು ದಾಖಲಾಗಿದೆ ಹಾಗೂ 1 ನೇ ಮತ್ತು 2 ನೇ ಆಪಾದಿತರ ವಿರುದ್ಧ ಹಲವಾರು ಮೊಕದ್ದಮೆಗಳೂ ಸಹ ಇವೆ ಮತ್ತು ಪರಸ್ಪರ ವಿರುದ್ಧದ ಪ್ರಯತ್ನಗಳನ್ನು ಮಾಡಲಾಗಿದೆ ಹಾಗೂ ತನಿಖೆಯ ವಿರುದ್ಧ ನೇರವಾಗಿ ಆರೋಪಿಸಲಾಗಿದೆ ಮತ್ತು ಅದಷ್ಟೇ ಅಲ್ಲದೆ, ಪ್ರಿಸ್ಯೆಡಿಂಗ್ ಅಧಿಕಾರಿಯ ವಿರುದ್ಧ ಸಹ ಆರೋಪ ಮಾಡಲಾಗಿದೆ.ಅಷ್ಟೇ ಅಲ್ಲದೆ, ಪೊಲೀಸ್ ಅಧಿಕಾರಿಗಳು ಒಳಗೊಂಡಿದ್ದಾರೆಂದು ಅಪಾದಿಸಿದ್ದಾರೆ ಮತ್ತು ಸಾಕ್ಷಿದಾರರಿಗೆ ಬೆದರಿಕೆ ಹಾಕಿದ್ದಾರೆಂಬ ಮತ್ತೊಂದು ಆರೋಪವಿದೆ ಹಾಗೂ ಬೆದರಿಕೆಯ ಬಗ್ಗೆ ಸೆಷನ್ಸ್ ನ್ಯಾಯಾಧೀಶರಿಗೆ ಅದನ್ನು ವರದಿ ಮಾಡಲು ಮುಂದೆ ಬಂದಿದ್ದಾರೆ.ಆಪಾದಿತ ತನಿಖಾ ತಂಡದವರಾಗಿರದ ಪೊಲೀಸ್ ಅಧಿಕಾರಿಗಳ ವಿರುದ್ಧ ಆಪಾದಿಸಲಾಗಿದೆ ಮತ್ತು ಘಟನೆ ಸಂಭವಿಸಿರುವ ದೃಶ್ಯದಲ್ಲಿ ಕಪ್ಪು ಬಣ್ಣದ ಕಾರೊಂದಿದೆ ಮತ್ತು ಅದರ ಬಗ್ಗೆ ಸಾಕ್ಷ್ಯಾಧಾರಗಳನ್ನು ಎಲ್ಲಿಂದ ಪಡೆದರು ಎಂಬುದನ್ನು ಹೇಳಿಲ್ಲ. ಹೆಚ್ಚುವರಿ ಅಡ್ವಕೇಟ್ ಜನರಲ್ರವರು ತಮ್ಮ ವಾದಗಳಲ್ಲಿ, ಅಲ್ಲಿ ಭೂ ವಿವಾದವಿದ್ದುದರಿಂದಾಗಿ ಕೊಲೆ ಎಸಗುವುದಕ್ಕೆ ಇದ್ದ ಕಾರಣವನ್ನು ಸಾಬೀತುಪಡಿಸಲಾಗಿದೆ ಎಂದು ಸಹ ವಾದಿಸಿದ್ದಾರೆ.1 ರಿಂದ 6 ರವರೆಗಿನ ಆಪಾದಿತರಿಂದ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಪುನರ್ವಶಪಡಿಸಿಕೊಳ್ಳಲಾಗಿದೆ ಹಾಗೂದಿನಾಂಕ: 09-09-2016ರಂದು ನಿಗದಿತ ಸಮಯದೊಳಗಾಗಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿದೆ ಮತ್ತು ನವೆಂಬರ್ 2016 ರ ತಿಂಗಳಿನಿಂದ ಮಾತ್ರವೇ ದೂರನ್ನು ನೀಡಲು ಪ್ರಾರಂಭಿಸಲಾಗಿದೆ ಮತ್ತು 2 ನೇ ಅರ್ಜಿದಾರನು ಯಾವುದೇ ಮನವಿಯನ್ನು ಮಾಡಿಲ್ಲ.ಪತ್ನಿಯು ಮಾತ್ರ ಮನವಿ ಮಾಡಿದ್ದಾರೆ ಮತ್ತು ಸಿಬಿಐಗೆ ವಿಷಯವನ್ನು ತನಿಖೆ ಮಾಡುವಂತೆ ನಿರ್ದೇಶಿಸಲು ರಿಟ್ ಅಧಿಕಾರವ್ಯಾಪ್ತಿಯನ್ನು ಕೋರಲು ಯಾವುದೇ ಆಧಾರವನ್ನು ಸಮರ್ಥಿಸಿಲ್ಲ.ವ್ಯವಹರಣೆಗಳಿಗೆ ಅಡಚಣೆ ಉಂಟುಮಾಡುವ ದೃಷ್ಟಿಯಿಂದ ಮಾತ್ರ ನ್ಯಾಯಾಲಯದ ಮುಂದೆ ಸದ್ಯದ ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು ವಾದಿಸಲಾಗಿದೆ.ಅವರು ಮುಂದುವರೆದು, ಅಧಿವಿಚಾರಣೆಯು 23-10-2017ರಂದು ಪ್ರಾರಂಭವಾಗಿದೆ ಮತ್ತು ಅಧಿವಿಚಾರಣೆಯ ಬಹುತೇಕ ಕಟ್ಟ ಕಡೆಯಲ್ಲಿ ಹಾಗೂ ಕೇವಲ 4-5 ಸಾಕ್ಷಿದಾರರು ಉಳಿದಿದ್ದರು ಹಾಗೂ 2 ನೇ ಅರ್ಜಿದಾರನು ನ್ಯಾಯಾಲಯದ ಮುಂದೆ ಹಾಜರಾಗಿಲ್ಲ, ನ್ಯಾಯಾಲಯದ ಮುಂದೆ ಸಾಕ್ಷ್ಯ ನೀಡುವ ಬದಲಾಗಿ ಅವನು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದನೆಂದು ವಾದಿಸಿದ್ದಾರೆ.ಆದಾಗಲೇ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದಾಗ ಹಾಗೂ ಅಧಿ ವಿಚಾರಣೆಯು ಬಹುತೇಕ ಪೂರ್ಣಗೊಂಡಿದ್ದಾಗ, ವಿಷಯವನ್ನು ಸಿಬಿಐಗೆ ಕಳುಹಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ವಿಷಯವನ್ನು ಸಿಬಿಐಗೆ ಕಳುಹಿಸುವುದು ಅಸಾಧಾರಣ ಸನ್ನಿವೇಶಗಳಲ್ಲಿ ಮಾತ್ರ ಮತ್ತು ಅದನ್ನು ಪ್ರತ್ಯೇಕವಾಗಿ ಕೋರಬೇಕಾಗಿದೆ ಮತ್ತು ಅಲ್ಲಿ ರಿಟ್ ಆಪಾದನೆಯನ್ನು ಹೊರತುಪಡಿಸಿ ಬೇರಾವ ಅಪಾದನೆಯೂ ಇಲ್ಲ ಮತ್ತು ಈ ವಿಷಯದಲ್ಲಿ ವಿಚಾರಣೆ ಮಾಡುವುದಕ್ಕೆ ಏನೂ ಇಲ್ಲ ಮತ್ತು ಯಾವುದೇ ಕುಂದುಕೊರತೆಯಿದ್ದಲ್ಲಿ, ಅದನ್ನು ಜಿಲ್ಲಾ ನ್ಯಾಯಾಧೀಶರ ಮುಂದೆ ಮಂಡಿಸಬಹುದು ಎಂದು ಅವರು ವಾದಿಸಿದ್ದಾರೆ.

19. ಎದುರುದಾರ ಪರ ವಕೀಲರು ತಮ್ಮ ವಾದಗಳಲ್ಲಿ 16 ನೇ ಮತ್ತು 17 ನೇ ಕಂಡಿಕೆಯಲ್ಲಿ 18 ನೇ ಎದುರುದಾರರ ವಿರುದ್ಧ ಸುಳ್ಳು ಆಪಾದನೆ ಮಾಡಲಾಗಿದ್ದು, ಆಕೆಯನ್ನು ಈಗಾಗಲೇ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಲಾಗಿದೆ ಮತ್ತು ಹೀಗಾಗಿ, ಅರ್ಜಿಯನ್ನು ಪುರಸ್ಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ವಾದಿಸಿದ್ದಾರೆ.ಅವರ ವಾದದ ಸಮರ್ಥನೆಯಲ್ಲಿ, 4 ರಿಂದ 10 ರವರೆಗಿನ ಎದುರುದಾರರ ಈ ಮುಂದಿನ ತೀರ್ಪುಗಳ ಮೇಲೆ ಅವಲಂಬಿತರಾಗಿದ್ದಾರೆ:

| ಕಸಂ | ಮೊಕದ್ದಮೆಯ ಹೆಸರು |
|---|---|
| 1 . | ಕೆ.ವಿ. ರಾಜೇಂದ್ರನ್ -ವಿರುದ್ಧ- ಪೊಲೀಸ್ ಅಧೀಕ್ಷಕರು , ಸಿಬಿಸಿಐಡಿ ದಕ್ಷಿಣ ವಲಯ , ಚೆನ್ನೈ ಮತ್ತು ಇತರರು ( 2013 ) 12 ಎಸ್‌ಸಿಸಿ 480 |
| 2 . | ಬ್ರಿಜೇಂದ್ರಸಿಂಗ್ ಹಾಗೂ ಇತರರು -ವಿರುದ್ಧ - ರಾಜಸ್ಥಾನ್ ರಾಜ್ಯ ( 2017 ) 7 ಎಸ್ ಸಿಸಿ 706 |
| 3 . | ಸುಜಾತ ರವಿಕಿರಣ್ -ವಿರುದ್ಧ ಕೇರಳ ರಾಜ್ಯ ಹಾಗೂ ಇತರರು ( 2016 ) 7 ಎಸ್‌ಸಿಸಿ 597 |
| 4 . | ಪಶ್ಚಿಮ ಬಂಗಾಳ ರಾಜ್ಯ ಹಾಗೂ ಇತರರು -ವಿರುದ್ಧ ಪ್ರಜಾಪ್ರಭುತ್ವ ಹಕ್ಕುಗಳ ಸಂರಕ್ಷಣಾ ಸಮಿತಿ , ಪಶ್ಚಿಮ ಬಂಗಾಳ ಹಾಗೂ ಇತರರು |
| 5 . | ಪಂಜಾಬ್ ರಾಜ್ಯ -ವಿರುದ್ಧ- ದಾವಿಂದರ್ ಪಾಲ್ ಸಿಂಗ್ ಭುಲ್ಲಾರ್ ಹಾಗೂ ಇತರರು ( 2011 ) 14 ಎಸ್‌ಸಿಸಿ 770 |

20. ಅರ್ಜಿದಾರರ ಪರ ಹಾಜರಾದ ವಕೀಲರು ತಮ್ಮ ಪ್ರತ್ಯುತ್ತರ ವಾದಗಳಲ್ಲಿ, ಈಗ ನಡೆಸಿರುವ ಈ ತನಿಖೆಯು ಮೂಲ ಅಪರಾಧಿಯನ್ನು ಕಾಪಾಡುವ ಉದ್ದೇಶದಿಂದ ಮಾತ್ರ ಆಗಿದೆ ಹಾಗೂ ಇದು ದುರ್ಭಾವನೆಯಿಂದ ಕೂಡಿದ್ದಾಗಿದೆ ಮತ್ತು (2013) 10 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 192 ರಲ್ಲಿ ವರದಿಯಾದ ಚ ತೀರ್ಪಿನ ಮೇಲೆ ಅವಲಂಬಿತವಾಗಿದೆ.ಪಾಸ್ಪೋರ್ಟನ್ನು ನಕಲು ಮಾಡಿರುವುದಕ್ಕೆ ಸಂಬಂಧಿಸಿದಂತೆ, ಸಿಬಿಐ ವಿಚಾರಣೆಗೆ ಕೋರಲಾಗಿದೆ ಹಾಗೂ 11 ನೇ ಒಳಪುಟದ 10 ನೇ ಮತ್ತು 31 ನೇ ಕಂಡಿಕೆಗಳನ್ನು ಈ ನ್ಯಾಯಾಲಯದ ಗಮನಕ್ಕೆ ತರಲಾಗಿದೆ ಎಂದು ವಾದಿಸಿದ್ದಾರೆ.ವಕೀಲರು (2010) 12 ರಲ್ಲಿ ವರದಿಯಾದ ಸರ್ವೋಚ್ಚ ಚ ನ್ಯಾಯಾಲಯ ಪ್ರಕರಣಗಳು 254, ತೀರ್ಪಿನ 33 ಮತ್ತು 45 ನೇ ಕಂಡಿಕೆಗಳ ಮೇಲೆ ಸಹ ಅವಲಂಬಿತರಾಗಿದ್ದು, ಅರ್ಜಿದಾರನು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿ, ಮಂಡಿಸಿದ ವಾದವನ್ನು ರಾಜ್ಯವು ನಿರಾಕರಿಸಿಲ್ಲವೆಂದು ವಾದಿಸಿದ್ದಾರೆ.ವಕೀಲರು ಎಐಆರ್ 2011 ರಲ್ಲಿ ವರದಿಯಾದ ಸರ್ವೋಚ್ಚ ನ್ಯಾಯಾಲಯ 2962, 15 ನೇ ಕಂಡಿಕೆಯ ಮೇಲೆಯೂ ಸಹ ಅವಲಂಬಿರತಾಗಿದ್ದಾರೆ.ಹಾಗೆಯೇ, (2016) 3 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 135, ಕಂಡಿಕೆಗಳ ಸಂಖ್ಯೆ ಚ 31, 38, 43, 45, 86 ರಿಂದ 89, 90, 100 ಮತ್ತು 102 ರಲ್ಲಿ ವರದಿಯಾದ ತೀರ್ಪಿನ ಮೇಲೂ ಸಹ ಅವಲಂಬಿತರಾಗಿದ್ದಾರೆ.ಅಷ್ಟೇ ಅಲ್ಲದೆ, (2012) 7 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 407 ಕಂಡಿಕೆ ಸಂಖ್ಯೆ 37 ರ ಮೇಲೂ ಅವಲಂಬಿತರಾಗಿದ್ದು, ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸಬೇಕೆಂದು, ತನಿಖೆಯ ಉದ್ದೇಶವೇ ತಪ್ಪಿತಸ್ಥ ವ್ಯಕ್ತಿಯನ್ನು ಶಿಕ್ಷೆಗೊಳಪಡಿಸುವುದೆಂದು ವಾದಿಸಿದ್ದಾರೆ.

21. ವಕೀಲರು (2011) 5 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 79 ರಲ್ಲಿ ವರದಿಯಾದ ತೀರ್ಪಿನ ಮೇಲೆಯೂ ಸಹ ಅವಲಂಬಿತರಾಗಿದ್ದಾರೆ ಮತ್ತು ಕಂಡಿಕೆಗಳ ಸಂಖ್ಯೆ 63,64 ಹಾಗೂ 65 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ವಕೀಲರು (2016) 4 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು ಚ 160 ರಲ್ಲಿ ವರದಿಯಾದ ತೀರ್ಪಿನ ಮೇಲೆ ಅವಲಂಬಿಸಿದ್ದಾರೆ ಮತ್ತು (2013) 12 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 480 ರಲ್ಲಿ ವರದಿಯಾದ ತೀರ್ಪಿನ ಮೇಲೆಯೂ ಸಹ ಅವಲಂಬಿಸಿದ್ದಾರೆ ಹಾಗೂ ಪಕ್ಷಪಾತದ ತನಿಖೆಗೆ ಸಂಬಂಧಿಸಿದಂತೆ ಕಂಡಿಕೆ ಸಂಖ್ಯೆ 17 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಹಾಗೆಯೇ (2014) 4 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 626 ಕಂಡಿಕೆ ಸಂಖ್ಯೆ 48 ರಲ್ಲಿ ವರದಿಯಾದ ತೀರ್ಪಿನ ಮೇಲೂ ಅವಲಂಬಿತರಾಗಿದ್ದಾರೆ.ವಕೀಲರು ಎಐಆರ್ 2018 ಸರ್ವೋಚ್ಚ ನ್ಯಾಯಾಲಯ 2486, ಕಂಡಿಕೆ ಸಂಖ್ಯೆ 8, 9 ಮತ್ತು 10 ರಲ್ಲಿ ವರದಿಯಾದ ತೀರ್ಪಿನ ಮೇಲೆಯೂ ಅವಲಂಬಿಸಿದ್ದಾರೆ.0 ವಕೀಲರು (2009) 6 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 65 ರಲ್ಲಿ ವರದಿಯಾದ ತೀರ್ಪಿನ ಮೇಲೆ ಅವಲಂಬಿಸಿದ್ದು, ಕಂಡಿಕೆ ಸಂಖ್ಯೆ 11 ಮತ್ತು 13 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಸಾಕ್ಷ್ಯ ಅಧಿನಿಯಮದ 65- ಎ ಎಲಾ ಮತ್ತು 65-ಬಿ ಪ್ರಕರಣಕ್ಕೆ ಸಂಬಂಧಿಸಿದಂತೆ (2018) 2 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 801 ರಲ್ಲಿ ವರದಿಯಾದ ಇತ್ತೀಚಿನ ತೀರ್ಪಿನ ಮೇಲೂ ಸಹ ಅವಲಂಬಿಸಿದ್ದು, ಅದು ಕಡ್ಡಾಯವಲ್ಲ ಎಂದು ವಾದಿಸಿ,

ಜೊತೆಗೆ (2014) 10 ಎಸ್ಸಿಸಿ 473 ರಲ್ಲಿ ವರದಿಯಾದ ಅನ್ವರ್ ಪಿ.ವಿ. – ವಿರುದ್ಧ – ಪಿ.ಕೆ ಬಷೀರ್ ಪ್ರಕರಣದ ಹಾಗೂ (2005) 1 ಎಸ್ಸಿಸಿ 600 ರಲ್ಲಿ ವರದಿಯಾದ ರಾಜ್ಯ ದೆಹಲಿಯ (ಎನ್ಸಿಟಿ) ವಿರುದ್ಧ ನವಜೋತ್ ಸಂಧು ಪ್ರಕರಣದ ತೀರ್ಪನ್ನು ಸದರಿ ತೀರ್ಪಿನಲ್ಲಿ ಚರ್ಚಿಸಲಾಗಿದೆಯೆಂಬುದನ್ನು ಸಹ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.

22. ವಕೀಲರು (2011) 3 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 758, ಚ ಕಂಡಿಕೆಸಂಖ್ಯೆ: 52 ರಲ್ಲಿ ವರದಿಯಾದ ತೀರ್ಪಿನ ಮೇಲೆ, ಹಾಗೆಯೇ (2009) 9 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 538, ಕಂಡಿಕೆ ಸಂಖ್ಯೆ 53 ರಲ್ಲಿ ವರದಿಯಾದ ತೀರ್ಪಿನ ಮೇಲೆ ಸಹ ಅವಲಂಬಿಸಿದ್ದಾರೆ.ವಕೀಲರು (2015) 9 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 795 ಹಾಗೆಯೇ, 1994 (ಎಸ್ಯುಪಿಪಿ) ( 1) ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 143 ಕಂಡಿಕೆ ಸಂಖ್ಯೆ 2 ರಲ್ಲಿ ವರದಿಯಾದ ತೀರ್ಪಿನ ಮೇಲೆ ಸಹ ಅವಲಂಬಿಸಿದ್ದಾರೆ.ವಕೀಲರು (2014) 8 ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು 768, ಕಂಡಿಕೆಸಂಖ್ಯೆ: 1 ಮತ್ತು 9 ರಲ್ಲಿ ವರದಿಯಾದ ತೀರ್ಪಿನ ಮೇಲೆ ಮತ್ತು (1984) 4 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 533, ಕಂಡಿಕೆಸಂಖ್ಯೆ: 2 ಹಾಗೂ 9 ರಲ್ಲಿ ವರದಿಯಾದ ತೀರ್ಪಿನ ಮೇಲೆ ಹಾಗೆಯೇ (2004) 4 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 158, ಕಂಡಿಕೆಸಂಖ್ಯೆ: 32,40 ಹಾಗೂ ಕಂಡಿಕೆಸಂಖ್ಯೆ: 36 ರಲ್ಲಿ ವರದಿಯಾದ ತೀರ್ಪಿನ ಮೇಲೆ ಅವಲಂಬಿತರಾಗಿದ್ದಾರೆ.

23. ದಂಡ ಪ್ರಕ್ರಿಯಾ ಸಂಹಿತೆಯ 173 ( 8) ನೇ ಪ್ರಕರಣದ ಮೇಲೆ ಮುಖ್ಯವಾಗಿ ಅವಲಂಬಿತರಾದ ವಕೀಲರು, ತನಿಖಾಧಿಕಾರಿಯ ವಿರುದ್ಧ ಅಪಾದನೆಗೆ ಸಂಬಂಧಿಸಿದಂತೆ, ದಂಡ ಪ್ರಕ್ರಿಯಾ ಸಂಹಿತೆಯ 173 ( 8) ನೇ ಪ್ರಕರಣವು ಉತ್ತರವಲ್ಲ ಮತ್ತು ಭಾರತದ ಸಂವಿಧಾನದ 226 ನೇ ಅನುಚ್ಛೇದದ ವ್ಯಾಪ್ತಿ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣವು ನ್ಯಾಯಾಲಯದ ಅಧಿಕಾರಗಳಿಗೆ ಕಡಿವಾಣ ಹಾಕುವುದಿಲ್ಲ ಮತ್ತು ' ಸಿ.ಡಿ. ' ಯ ಸಿಂಧುತ್ವವನ್ನು ಭಾರತ ಸಾಕ್ಷ್ಯ ಎಲಾ ಅಧಿನಿಯಮದ 65 ಎ ಮತ್ತು ಬಿ ಪ್ರಕರಣದ ಉಪಬಂಧಗಳ ಮಟ್ಟಿಗೆ ಪರಿಗಣಿಸಬೇಕು ಹಾಗೂ ಆ ಸಂಬಂಧ, ನೊಂದ ವ್ಯಕ್ತಿ ಸೀಮಿತ ಅಧಿಕಾರ ಹೊಂದಿದ್ದಾನೆಂದು ವಾದಿಸಿದ್ದಾರೆ.

24. ವಕೀಲರು (2015) 9 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 795 ರಲ್ಲಿ ವರದಿಯಾದ ಮಿಥಿಲೇಶ್ಕುಮಾರ್ ಸಿಂಗ್ -ವಿರುದ್ಧ-ರಾಜಸ್ಥಾನ ರಾಜ್ಯ ಪ್ರಕರಣದಲ್ಲಿನ ತೀರ್ಪಿನ ಮೇಲೆಯೂ ಸಹ ಅವಲಂಬಿತರಾಗಿದ್ದಾರೆ ಮತ್ತು ವಿಷಯವನ್ನು ಕೇವಲ ಕಳುಹಿಸುವುದು ಸರಿಯಲ್ಲಿ ಮತ್ತು ಸಿಬಿಐಗೆ ವಿಷಯವನ್ನು ಕಳುಹಿಸುವಾಗ ಅದರ ಉದ್ದೇಶ ಈಡೇರತಕ್ಕದ್ದು ಮತ್ತು ವಿಷಯವನ್ನು ಪರಿಶೀಲಿಸಬೇಕೆಂಬ ಉದ್ದೇಶದೊಂದಿಗೆ ಕಳುಹಿಸಬೇಕೆಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ವಿಷಯವನ್ನು ಅಧಿವಿಚಾರಣೆಗೆ ಇಟ್ಟಾಗ ಇದೊಂದು ಮಾಜಿ ಸಚಿವರು ಒಳಗೊಂಡಿರುವ ಮತ್ತು ಕೂಡಲೇ ಸಾಕ್ಷಿದಾರರಿಗೆ ಬೆದರಿಕೆ ಒಡ್ಡುವಲ್ಲಿ ನಿರತರಾದ ಉನ್ನತ ಪೊಲೀಸ್ ಅಧಿಕಾರಿಗಳೂ ಸಹ ಭಾಗಿಯಾಗಿರುವ ಬಗ್ಗೆ ಗಂಭೀರ ಸಂಬಂಧ ಇರುವ ವಿಷಯವಾಗಿದೆ ಮತ್ತು ಹೀಗಾಗಿ, ಈ ನ್ಯಾಯಾಲಯವು ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸುವ ಉದ್ದೇಶದೊಂದಿಗೆ ದಂಡ ಪ್ರಕ್ರಿಯಾ ಸಂಹಿತೆ 482 ನೇ ಪ್ರಕರಣದ ವ್ಯಾಪ್ತಿಯನ್ನು ಹಾಗೂ ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬೇಕೆಂದು ವಾದಿಸಿದ್ದಾರೆ.ಆದ್ದರಿಂದ, ಈ ವಿಷಯವನ್ನು ಮುಂಚಿನ ತನಿಖೆಗಾಗಿ ಸಿಬಿಐಗೆ ಕಳುಹಿಸಲು ಈ ನ್ಯಾಯಾಲಯವನ್ನು ಕೋರಿದ್ದಾರೆ.

25. ಈ ನ್ಯಾಯಾಲಯವು ಅರ್ಜಿದಾರರ ವಕೀಲರ ಹಾಗೂ ಎದುರುದಾರರ ವಕೀಲರ ವಾದಗಳನ್ನು ಆಲಿಸಿದ್ದು, ಈ ನ್ಯಾಯಾಲಯವು ವಿಷಯವನ್ನು ಸಿಬಿಐಗೆ ಕಳುಹಿಸಿ ಹಾಗೂ ಕೋರಲಾದಂತೆ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು, ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಗೊಳಪಡಿಸಿ, ರಿಟ್ ಅರ್ಜಿಯಲ್ಲಿ ಕೋರಲಾದಂತೆ ರಿಟ್ ಅಧಿಕಾರವ್ಯಾಪ್ತಿಯನ್ನು ಅನ್ವಯಿಸಬಹುದೇ?ಎಂಬುದನ್ನು ಪರಿಶೀಲಿಸಬೇಕಿದೆ.

26. ಅರ್ಜಿದಾರರ ವಕೀಲರ ಮತ್ತು ಎದುರುದಾರರ ವಕೀಲರ ವಾದಗಳನ್ನು ಆಲಿಸಲಾಗಿದ್ದು, ರಿಟ್ ಅರ್ಜಿಯಲ್ಲಿ ಕೋರಲಾದ ಪರಿಹಾರವನ್ನು ಈ ನ್ಯಾಯಾಲಯವು ನೀಡಬಹುದೆ?ಎಂಬುದನ್ನು ಈ ನ್ಯಾಯಾಲಯವು ಪರಿಶೀಲಿಸಬೇಕಿದೆ.

27. ವಾದಗಳಲ್ಲಿ ಅರ್ಜಿದಾರರ ಮುಖ್ಯ ವಾದವೆಂದರೆ, ಪೊಲೀಸರು ನಡೆಸಿದ ತನಿಖೆಯು ಸುಳ್ಳು ತನಿಖೆಯಲ್ಲದೆ ಬೇರೇನಲ್ಲ ಮತ್ತು ಮುಖ್ಯ ಆಪಾದಿತರನ್ನು D ಕಾಪಾಡುವ ಉದ್ದೇಶದಿಂದ ಇದನ್ನು ನಡೆಸಲಾಗಿದೆ ಮತ್ತು

ದೂರು ಪತ್ರದ ಒಳಾಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಲು ವಿಫಲವಾಗಿದೆ ಮತ್ತು ಅಲ್ಲಿ ರಾಜಕೀಯ ವೈರತ್ವವೂ ಇತ್ತು ಮತ್ತು ಕೊಲೆಯ ಘಟನೆ ನಡೆಯುವುದಕ್ಕೆ ಸ್ವಲ್ಪ ಮುಂಚೆ ಅನಾಮಧೇಯ ಪತ್ರವನ್ನು ಸ್ವೀಕರಿಸಲಾಗಿತ್ತು ಮತ್ತು ಆಪಾದಿಸಲಾದ ಕೊಲೆ ನಡೆದ ಮರುದಿನವೇ ಅದನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿತ್ತು ಮತ್ತು ಅವರು ರಾಜಕೀಯ ದ್ವೇಷವನ್ನು ಹಾಗೂ ಬರ್ಬರ ಕೊಲೆಯ ಸ್ವರೂಪವನ್ನು ಕಂಡುಹಿಡಿಯಲು ಈ ತನಿಖೆಯನ್ನು ನಡೆಸಿಲ್ಲ ಹಾಗೂ ಘಟನೆ ನಡೆದ ಸ್ಥಳದ ಸಿಸಿಟಿವಿ ಫೂಟೇಜನ್ನು ಪರಿಶೀಲಿಸುವಲ್ಲಿ ವಿಫಲರಾಗಿದ್ದಾರೆ ಮತ್ತು ಕೊಲೆಯಲ್ಲಿ 0 ಭಾಗಿಯಾದ ವ್ಯಕ್ತಿಗಳ ಪಾತ್ರಕ್ಕೆ ಸಂಬಂಧಿಸಿದಂತೆ ಯಾವ ವಿಚಾರಣೆಯನ್ನೂ ನಡೆಸಿಲ್ಲ ಹಾಗೂ ನಿಜವಾದ ಅಪರಾಧಿಗಳು ಜಾರಿಕೊಳ್ಳಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸಲಾಗಿದೆ.

28. ಸದರಿ ವಾದದ ಸಮರ್ಥನೆಯಲ್ಲಿ, ಅರ್ಜಿದಾರರ ಪರ ಹಾಜರಾದ ವಕೀಲರು ದೀನೂಭಾಯ್ ಬೋಘಭಾಯ್ ಸೋಲಂಕಿ –ವಿರುದ್ಧ-ಗುಜರಾತ್ ರಾಜ್ಯ ಮತ್ತು ಇತರರು - 2014 (4) ಎಸ್ಸಿಸಿ 626 1278, ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿದ್ದಾರೆ.ಈ ತೀರ್ಪಿನಲ್ಲಿ ಅರ್ಜಿದಾರರ ವಕೀಲರು ಕಂಡಿಕೆ ಸಂಖ್ಯೆ 42 ರ ಮೇಲೆ ಅವಲಂಬಿತರಾಗಿದ್ದು, ಸಿಬಿಐನಿಂದ ತನಿಖೆ ನಡೆಯಲಿ ಎಂದು ನಿರ್ದೇಶಿಸುವುದಕ್ಕೆ ಮುಂಚೆ ಸುನಾವಣೆ ಮಾಡಲಾಗಲೀ ಅಥವಾ ವ್ಯವಹರಣೆಗಳಿಗೆ ಅಪೀಲುದಾರನನ್ನು ಪಕ್ಷಕಾರನನ್ನಾಗಿ ಮಾಡಲಾಗಲೀ ಉಚ್ಚ ನ್ಯಾಯಾಲಯದ ಮುಂದೆ ಯಾವ ಅರ್ಜಿಯೂ ಚ ಬಂದಿರಲಿಲ್ಲವೆಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ಸ್ವತಂತ್ರ ಸಾಕ್ಷಿದಾರರು ನೀಡಿದ ಹೇಳಿಕೆಗಳು ಹಾಗೂ ಮೃತನ ತಂದೆಯು ಮಾಡಿದ ಅಪಾದನೆಗಳು ಇದ್ದಾಗ್ಯೂ ಸಹ, ಪೊಲೀಸರು ಅಪೀಲುದಾರನಿಗೆ " ಕ್ಲೀನ್ಚಿಟ್ ' ನೀಡುವ ಉದ್ದೇಶದಿಂದ ತನಿಖೆಯನ್ನು ನಡೆಸಿದ್ದಾರೆಂದು ಉಚ್ಚ ನ್ಯಾಯಾಲಯವು ಮೇಲ್ನೋಟಕ್ಕೆ ನಿರ್ಣಯ ಕೈಗೊಂಡಿದೆಯೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆಯೆಂದು ಚ ವಾದಿಸಿದ್ದಾರೆ.ಈ ತೀರ್ಪಿನ ಮೇಲೆ ಅವಲಂಬಿಸಿ, ಈ ನ್ಯಾಯಾಲಯದ ಮುಂದಿರುವ ಅರ್ಜಿದಾರರು ಮೃತನ ತಂದೆ ಮತ್ತು ಸಹೋದರರಾಗಿದ್ದು, ಆ ತಂದೆ ಮತ್ತು ಸಹೋದರನ ನ್ಯಾಯಕ್ಕಾಗಿನ ಕೂಗು ಇದಾಗಿದೆ ಮತ್ತು ಅಪರಾಧವನ್ನೆಸಗಿರುವ ವರದಿಯಾದ ಪ್ರತಿಯೊಂದು ಘಟನೆಯಲ್ಲಿ ಕಾನೂನು ಜಾರಿ ಏಜೆನ್ಸಿಯಿಂದ ನ್ಯಾಯಸಮ್ಮತವಾದ, ನಿಷ್ಪಕ್ಷಪಾತವಾದ ಮತ್ತು ಸ್ವತಂತ್ರವಾದ ತನಿಖೆಯಿಂದ 0 ಮಾತ್ರ ಕಾನೂನಿನ ನಿಯಮವನ್ನು ಸಮರ್ಥನೀಯಗೊಳಿಸಬಹುದು ಹಾಗೂ ಮುಂದಿನ ತನಿಖೆಯ ಸಹ ನಿಷ್ಪಕ್ಷಪಾತವಾಗಿಲ್ಲವೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಾಗ ಮಾತ್ರ ಅದನ್ನು ಸಿಬಿಐಗೆ ವರ್ಗಾಯಿಸಲಾಯಿತು ಮತ್ತು ಸರ್ವೋಚ್ಚ ನ್ಯಾಯಾಲಯವು ವಿಷಯವನ್ನು ಸಿಬಿಐಗೆ ಕಳುಹಿಸುವಲ್ಲಿ, ಉಚ್ಚ ಚ ನ್ಯಾಯಾಲಯದ ಆದೇಶವು ಸಮರ್ಥನೀಯವಾಗಿದೆಯೆಂದು ನಿರ್ಣಯಿಸಿದೆ.

29. ಭಾರತ ಸಾಕ್ಷ್ಯ ಅಧಿನಿಯಮದ 65 ಮತ್ತು 65 ಬಿ ಪ್ರಕರಣಗಳ ಅನುಸರಣೆಗೆ ಸಂಬಂಧಿಸಿ, ತಂತ್ರಜ್ಞತೆಯ ಬಗ್ಗೆಯೂ ಸಹ ವಕೀಲರು, ಶಫಿ ಮೊಹಮ್ಮದ್ –ವಿರುದ್ಧ ಹಿಮಾಚಲಪ್ರದೇಶ ರಾಜ್ಯ – (2018) 2 ಸರ್ವೋಚ್ಚ ಚ ನ್ಯಾಯಾಲಯದ ಪ್ರಕರಣ 801, ಪ್ರಕರಣದಲ್ಲಿ ಸರ್ವೋಚ್ಚ ಚ ನ್ಯಾಯಾಲಯದ ಇತ್ತೀಚಿನ ತೀರ್ಪಿನ ಮೇಲೆ ಅವಲಂಬಿಸಿದ್ದಾರೆ ಮತ್ತು ಸಾಕ್ಷ್ಯ ಅಧಿನಿಯಮದ 65-ಬಿ ( 4) ಪ್ರಕರಣದಡಿ ಪ್ರಮಾಣಪತ್ರದ ಅಗತ್ಯತೆಯು ಪ್ರಕ್ರಿಯಾತ್ಮಕವಾಗಿದ್ದು, ನ್ಯಾಯದ ಹಿತಾಸಕ್ತಿಯು ಎಲ್ಲೆಲ್ಲಿ ಹಾಗೆ ಸಮರ್ಥಿತವಾಗುವುದೋ ಅಲ್ಲಲ್ಲಿ ನ್ಯಾಯಾಲಯವು ಅದನ್ನು ಸಡಿಲಿಕೆ ಮಾಡಬಹುದು ಎಂದು ವಾದಿಸಿದ್ದಾರೆ.ಹೀಗಾಗಿ 65-ಬಿ (4) ನೇ ಪ್ರಕರಣದಡಿ ಪ್ರಮಾಣಪತ್ರದ ಅಗತ್ಯತೆಯು ಯಾವಾಗಲೂ ಕಡ್ಡಾಯವೇನಲ್ಲವೆಂದು ವಾದಿಸಿದ್ದಾರೆ ಮತ್ತು ಸರ್ವೋಚ್ಚ ನ್ಯಾಯಾಲಯವು ಈ ತೀರ್ಪಿನಲ್ಲಿ ಅನ್ವರ್ ಪಿ.ವಿ. -ವಿರುದ್ಧ-ಪಿ.ಕೆ.ಬಶೀರ್ ಪ್ರಕರಣದ ತೀರ್ಪನ್ನು, ಹಾಗೆಯೇ ರಾಜ್ಯ (ದೆಹಲಿಯ ಎನ್ಸಿಐ) -ವಿರುದ್ಧ ನವಜೋತ್ ಸಂಧು ಪ್ರಕರಣದ ತೀರ್ಪನ್ನು ಚರ್ಚಿಸಿದೆ ಎಂದೂ ಸಹ ವಕೀಲರು ವಾದಿಸಿದ್ದಾರೆ.

30. ಅರ್ಜಿದಾರರ ಪರ ಹಾಜರಾದ ವಕೀಲರು, ಇ. ಶಿವಕುಮಾರ್ -ವಿರುದ್ಧ ಯೂನಿಯನ್ ಅಫ್ ಇಂಡಿಯಾ ಮತ್ತು ಇತರರು – ಎ.ಐ.ಆರ್. 2018 ಸರ್ವೋಚ್ಚ ನ್ಯಾಯಾಲಯ 2486, ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿದ್ದು, ಸಹಜವಾಗಿ ನಿರೀಕ್ಷಿಸಬಹುದಾದಂತೆ ಆಪಾದಿತನು ಸುನಾವಣೆಯ ಅವಕಾಶಕ್ಕೆ ಹಕ್ಕುಳ್ಳವನಾಗಿರಲಿಲ್ಲ ಎಂದು ವಾದಿಸಿದ್ದಾರೆ.ನಿಷ್ಪಕ್ಷಪಾತವಾದ ತನಿಖೆಯನ್ನು ಕೋರಿರುವ ರಿಟ್ ಅರ್ಜಿಯಲ್ಲಿ ಮತ್ತು ಎಫ್ಐಆರ್ ನಲ್ಲಿ ಆಪಾದಿತನೆಂದು ತೋರಿಸಲಾದಂಥ ವ್ಯಕ್ತಿಯ ಹೆಸರನ್ನು, ತನಿಖೆಯ ಹಂತದಲ್ಲಿ ಕೇಳಿಸುವ ಅಥವಾ ಸಹಜವಾಗಿ ನಿರೀಕ್ಷಿಸಬಹುದಾದಂತೆ ಸುನಾವಣೆಯ ಅವಕಾಶವನ್ನು ಹೊಂದುವ ಹಕ್ಕಿಲ್ಲ, ಸಿಬಿಐಗೆ ತನಿಖೆಯನ್ನು ವರ್ಗಾವಣೆ ಮಾಡಲು ನೀಡಲಾದ ನಿರ್ದೇಶನವು ಅಕ್ರುತತೆಯಾಗಿದೆಯೆಂದು ಹೇಳಲು

ಸುನಾವಣೆ ಮಾಡುವಂತಿಲ್ಲ.ನರೇಂದರ್ ಜಿ. ಗೋಯೆಲ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ ಮತ್ತು ಇನ್ನೊಬ್ಬರು ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿರುವ ವಕೀಲರು ಕಂಡಿಕೆಸಂಖ್ಯೆ: 11 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಹಾಗೂ ಆಪಾದಿತನು ತನಿಖೆಯ ಹಂತದಲ್ಲಿ ಸುನಾವಣೆಯ ಹಕ್ಕನ್ನು ಹೊಂದಿಲ್ಲವೆಂದು ವಾದಿಸಿದ್ದಾರೆ.

31. ಅಶೋಕ್ಕುಮಾರ್ ತೊಡಿ -ವಿರುದ್ಧ-ಕಿಶ್ವರ್ ಜಹಾನ್ ಮತ್ತು ಇತರರು – 2011 (3) ಸರ್ವೋಚ್ಚ ನ್ಯಾಯಾಲಯ ಪ್ರಕರಣ 758, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿರುವ ವಕೀಲರು ಚ ನ್ಯಾಯಾಲಯವು ಸಾಕ್ಷ್ಯಾಧಾರಗಳ ಮೇಲೆ ಆಧರಿಸಿ, ಅದರಲ್ಲೂ ನಿರ್ದಿಷ್ಟವಾಗಿ ರಾಜ್ಯ ಪೊಲೀಸರ ನಡವಳಿಕೆ ಮತ್ತು ರಾಜ್ಯ ಸಿಐಡಿ ವತಿಯಿಂದ ನ್ಯಾಯವನ್ನು ಪಡೆಯುವ ಬಗ್ಗೆ ಮೃತನ ತಾಯಿ ಹಾಗೂ ಸಹೋದರರನ ನಿರೀಕ್ಷೆಗೆ ಸಂಬಂಧಿಸಿ ಮನದಟ್ಟು ಮಾಡಿಕೊಂಡಿದ್ದಾಗ ಮತ್ತು ಸಿಬಿಐನಿಂದ ತನಿಖೆಗೆ ನಿರ್ದೇಶಿಸಿದ್ದಾಗ, ರಾಜ್ಯ ಸಿಐಡಿಯಿಂದ ಯಾವುದೇ ಸಮಾನಾಂತರ ತನಿಖೆಯನ್ನು ಮಾಡಲಾಗದು ಎಂದು ವಾದಿಸಿದ್ದಾರೆ ಮತ್ತು ಈ ತೀರ್ಪನ್ನು ಉಲ್ಲೇಖಿಸಿ ಅವರು ಪೊಲೀಸರಿಂದ ಸುಳ್ಳು ತನಿಖೆಯನ್ನು ನಡೆಸಲಾಗಿದ್ದು, ಮೃತನ ತಾಯಿ ಹಾಗೂ ಸಹೋದರರನಾದ ಈ ಅರ್ಜಿದಾರರು ತಮಗೆ ನ್ಯಾಯ ದೊರೆಯಬಹುದೆಂಬ ನಂಬಿಕೆಯನ್ನು ಹೊಂದಿಲ್ಲ ಎಂದು ವಾದಿಸಿದ್ದಾರೆ.

32. ಕೇದಾರ್ ನಾರಾಯಣ್ ಪಾರಿದ ಮತ್ತು ಇತರರು ವಿರುದ್ಧ ಒರಿಸ್ಸಾ ರಾಜ್ಯ ಹಾಗೂ ಇತರರು - 2009 (9) ಸರ್ವೋಚ್ಚ ನ್ಯಾಯಾಲಯ ಪ್ರಕರಣ 538, ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿ, ಮೃತನ ಪತ್ನಿಯು, ತನ್ನ ಪತಿಯ ಕೊಲೆಯಲ್ಲಿ ಭಾಗಿಯಾದ ಎಲ್ಲಾ ಆಪಾದಿತ ವ್ಯಕ್ತಿಗಳನ್ನು ಬಂಧಿಸದೆ ಪೊಲೀಸರು ನಿಷ್ಕ್ರಿಯರಾಗಿದ್ದರು ಎಂದು ಉಚ್ಚ ನ್ಯಾಯಾಲಯಕ್ಕೆ ಪತ್ರ ಬರೆದು ಚ ಮಾಹಿತಿ ನೀಡಿದ್ದಾರೆ ಮತ್ತು ಮುಖ್ಯ ಅಪರಾಧಿಗಳು ಸ್ವೇಚ್ಛೆಯಾಗಿ ಓಡಾಡಿಕೊಂಡಿದ್ದರು ಎಂದೂ ಸಹ ಹೇಳಿಕೆ ನೀಡಿದ್ದಾರೆ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಎಂಎಲ್ರುವರ ಮಧ್ಯಸ್ಥಿಕೆಯಲ್ಲಿ ಎಲ್ಲಾ ಆಪಾದಿತರನ್ನು ಸಿಕ್ಕಿಸುವ ಮೇಲ್ವಿಚಾರಣಾ ವರದಿಯನ್ನು ಇಲ್ಲವಾಗಿಸಿದ, ಸುಳ್ಳು ಶೋಧಕ ಪರೀಕ್ಷೆಯ ಆಧಾರದ ಮೇಲೆ ಮತ್ತು ಎಂಎಲ್ ಒದಗಿಸಿದ, ಆ ಸಮಯದಲ್ಲಿ ಬೇರೆಕಡೆ ಹಾಜರಿದ್ದ ಸಾಕ್ಷ್ಯದ ಮೇಲೆ ಹೊಸ ವರದಿಯನ್ನು ಮಾಡಿದ ಪರಿಣಾಮ ಉಚ್ಚ ನ್ಯಾಯಾಲಯವು ಹಿರಿಯ ಅಧಿಕಾರಿಗಳ ಎರಡನೇ ಮೇಲ್ವಿಚಾರಣಾ ವರದಿಯನ್ನು ರದ್ದುಪಡಿಸಿದ್ದು ಮೊದಲನೇ ಮೇಲ್ವಿಚಾರಣಾ ವರದಿಯ ಆಧಾರದ ಮೇಲೆ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಬೇಕೆಂದು ನಿರ್ದೇಶಿಸಿತು -482 ನೇ ಪ್ರಕರಣದ ವ್ಯಾಪ್ತಿಯೊಳಗೆ ಸಾಧಾರಣವಾಗಿ ನ್ಯಾಯಾಲಯಗಳು ಮಧ್ಯ ಪ್ರವೇಶ ಮಾಡಬಾರದಿದ್ದಾಗ್ಯೂ, ಉಚ್ಚ ನ್ಯಾಯಾಲಯವು ತನ್ನ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸಿ, 482 ನೇ ಚ ಪ್ರಕರಣದಡಿ ಮಧ್ಯ ಪ್ರವೇಶಿಸಬಹುದೇ?ಎಂಬುದಕ್ಕೆ ಪಕ್ಷಕಾರರಿಗೆ ನ್ಯಾಯವನ್ನು ಮಾಡಲು, ತನಿಖೆ ಮಾಡುವುದರೊಂದಿಗೆ ಮಧ್ಯ ಪ್ರವೇಶಿಸಬಹುದೆಂದು ತೀರ್ಮಾನಿಸಿದೆ ಮತ್ತು ಈ ತೀರ್ಪಿನ ಮೇಲೆ ಅವಲಂಬಿಸಿ, ಈ ಪ್ರಕರಣದ ವಾಸ್ತವಿಕ ಅಂಶವು ಅದೇ ರೀತಿಯದಾಗಿದೆ ಹಾಗೂ ತನಿಖೆಯನ್ನು ನಡೆಸಿದ ಪೊಲೀಸರು ನಿಜವಾದ ಅಪರಾಧಿಯನ್ನು ಕಾಪಾಡಿದ್ದಾರೆ ಎಂದು ಅವರು ವಾದಿಸಿದ್ದಾರೆ.

33. ವಕೀಲರು ಮಿಥಿಲೇಶ್ಕುಮಾರ್ ಸಿಂಗ್ -ವಿರುದ್ಧ-ರಾಜಸ್ಥಾನ ರಾಜ್ಯ ಹಾಗೂ ಇತರರು - 2015 (9) ಸರ್ವೋಚ್ಚ ನ್ಯಾಯಾಲಯ ಪ್ರಕರಣ 795 ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿ, ಸರ್ವೋಚ್ಚ ನ್ಯಾಯಾಲಯವು ವಿಷಯವನ್ನು ಸಿಬಿಐ ತನಿಖೆಗೆ ಕಳುಹಿಸುವುದಕ್ಕೆ ಸಂಬಂಧಿಸಿದಂತೆ ಪರಿಗಣಿಸುವಾಗ, ಅದರ ವ್ಯಾಪ್ತಿ ಮತ್ತು ಆಧಾರಗಳು ಹಾಗೂ ಗಮನಾರ್ಹ ಅ ಂ ಶಗಳನ್ನು ವರದಿ ಮಾಡಿದೆ ಹಾಗೂ ಅಲ್ಲಿ ಕಟ್ಟುನಿಟ್ಟಾದ ನಿಯಮಗಳಿಲ್ಲದಿರಬಹುದೆಂದು ತೀರ್ಮಾನಿಸಿದೆ ಎಂದು ವಾದಿಸಿದ್ದಾರೆ.ಆದರೆ, ಈ ಮುಂದಿನ ಸಂಗತಿಗಳು ಸುಸಂಬದ್ಧವಾಗಿವೆ (ಎ) ನೊಂದವರ ಅಥವಾ ಅವರ ರಕ್ತ ಸಂಬಂಧಿಯ ಸಂವೇದನಾಶೀಲತೆ, (ಬಿ) ಮಾನವ ಜೀವಹಾನಿಯಂಥ ವಿಷಯಗಳ ಸೂಕ್ಷ್ಮತೆ (ಸಿ) ಕೀಳುಮಟ್ಟದ ಮತ್ತು ಪಕ್ಷಪಾತದ ತನಿಖೆ ಇತ್ಯಾದಿ ಅಥವಾ ರಾಜ್ಯ ಪೊಲೀಸರಿಂದ ತನಿಖೆಯು ವಿಶ್ವಾಸವನ್ನು ಪ್ರೇರೇಪಿಸದಿದ್ದಾಗ ಮತ್ತು ಸತ್ಯಾನ್ವೇಷಣೆಯು ಅಂತಿಮ ಉದ್ದೇಶವೆಂದು ತೀರ್ಮಾನಿಸಿದ್ದಾಗ, ಇದನ್ನು ಸ್ವತಂತ್ರ ಏಜೆನ್ಸಿಯಿಂದ ಅತ್ಯುತ್ತಮವಾಗಿ ಮಾಡಬಹುದಿದ್ದಾಗ ಅನುಚಿತವಾದ ತನಿಖೆಯು ಅಧಿವಿಚಾರಣೆಯ ನಿಷ್ಪಕ್ಷಪಾತತೆಯನ್ನು ಬಾಧಿಸುತ್ತದೆ.ನೀಡಲಾದ ತೀರ್ಮಾನಕ್ಕೆ ತನಿಖೆದಾರರನ್ನು ಮುನ್ನಡೆಸಲು ಪಕ್ಷಕಾರನು ಕೋರುತ್ತಾನೆಂಬ ಕಾರಣ ಮಾತ್ರದಿಂದಲೇ ಸುಮ್ಮನೆ ತನಿಖೆಗೆ ಆದೇಶಿಸಲಾಗದು.ಆದರೆ, ತನಿಖೆಯ ವರ್ಗಾವಣೆಗಾಗಿನ ಕೋರಿಕೆಯನ್ನು ಸಂಶಯದಿಂದ ನೋಡತಕ್ಕದ್ದು ಮತ್ತು ನ್ಯಾಯಕಾರಣವನ್ನು ಸಿಬಿಐ ತನಿಖೆಗೆ ನಿರ್ದೇಶಿಸಲು ನ್ಯಾಯಾಲಯವು ಹಿಂಜರಿಯತಕ್ಕದ್ದಲ್ಲ.

34. ಸದರಿ ತೀರ್ಪನ್ನು ಉಲ್ಲೇಖಿಸಿ, ವಕೀಲರು ಕಂಡಿಕೆ 15 ನ್ನು ಸಹ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಸತ್ಯಾನ್ವೇಷಣೆಯ ಪ್ರಕ್ರಿಯೆಯನ್ನು ವಿಶ್ವಾಸಾರ್ಹವನ್ನಾಗಿ ಮಾಡುವುದು ನ್ಯಾಯಾಲಯವು ಅಪರೂಪವಾಗಿ, ಯಾವಾಗಲಾದರೂ ಪ್ರಾರಂಭದಲ್ಲಿ ನೋಡಿದರೆ, ಸಂಶಯದಿಂದ ಸಿಬಿಐಗೆ ತನಿಖೆಯ ವರ್ಗಾವಣೆಗಾಗಿ ಕೋರಿರುವುದು ಅಲ್ಲಿ ಮಧ್ಯಸ್ಥಿಕೆಗಾಗಿ ಕೋರಲಾದಂಥ ಪ್ರಕರಣಗಳಲ್ಲಿ ಬಾಧಿತ ವ್ಯಕ್ತಿಗಳಿಗೆ ಅಥವಾ ಅವರ ಕುಟುಂಬಗಳಿಗೆ ಪರಿಹಾರ ನೀಡಲು ನ್ಯಾಯಾಲಯದ ಕಡೆಯಿಂದ ಯಾವುದೇ ಹಿಂಜರಿಕೆಯಿಲ್ಲ ಅಥವಾ ವರ್ಗಾವಣೆಯನ್ನು ಆದೇಶಿಸುವುದಕ್ಕೆ ಮುಂಚೆ, ರಾಜ್ಯ ಪೊಲೀಸರ ಕಡೆಯಿಂದ ದುರುಪಯೋಗ ಅಥವಾ ನಿರ್ಲಕ್ಷ್ಯದ ಖರ್ಚನ್ನು ವಿಧಿಸುವಂತೆ ಮಾಡಲು ಅರ್ಜಿದಾರನು ವರ್ಗಾವಣೆಗೆ ಕೋರುವ ಅಗತ್ಯವಿದೆಯೇ?ಎಂಬುದು ಮುಖ್ಯವಾಗಿದೆ ಹಾಗೂ ಕಂಡಿಕೆಸಂಖ್ಯೆ: 22 ನ್ನು ಈ ನ್ಯಾಯಾಲಯದ ಗಮನಕ್ಕೆ ತರಲಾಗಿದ್ದು, ಅದರಲ್ಲಿ ರಾಜ್ಯ ಪೊಲೀಸರಿಂದ ಸಿಬಿಐ ' ಗೆ ತನಿಖೆಯ ವರ್ಗಾವಣೆಯನ್ನು ಯಾವುದೇ ಹೊರಗಿನ ಪ್ರಭಾವ ಅಥವಾ ಬೇರೆ ರೀತಿಯ ಕಾರಣದಿಂದ ರಾಜ್ಯ ಪೊಲೀಸರು ನಡೆದ ನ್ಯಾಯಯುತ ತನಿಖೆಯು ವಿಶ್ವಾಸವನ್ನು ಮೂಡಿಸದಿದ್ದಾಗ ಅಪರೂಪದ ಹಾಗೂ ಅಸಾಧಾರಣ ಸನ್ನಿವೇಶಗಳಲ್ಲಿ ಮಾತ್ರ ಅಂಗೀಕರಿಸಬಹುದು ಎಂದು ಅಭಿಪ್ರಾಯಪಡಲಾಗಿದೆ.

35. ವಕೀಲರು ಆರ್. ಎಸ್. ಸೊಧಿ -ವಿರುದ್ಧ-ಉತ್ತರಪ್ರದೇಶ ರಾಜ್ಯ ಹಾಗೂ ಇತರರು - 1994 ಎಸ್ಯುಪಿಪಿ ( 1) ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 143, ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿದ್ದು, ತೀರ್ಪಿನ ಕಂಡಿಕೆ ಸಂಖ್ಯೆ.2 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಅದರಲ್ಲಿ, ಸ್ಥಳೀಯ ಪೊಲೀಸರು ತನಿಖೆ ನಡೆಸಬಹುದಾಗಿದ್ದು, ಆಪಾದನೆಗಳು ಅವರ ವಿರುದ್ಧವೇ ಇರುವುದರಿಂದ ಅದು ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.ತನಿಖೆಯನ್ನು ಕೇಂದ್ರ ತನಿಖಾ ದಳಕ್ಕೆ ವಹಿಸುವುದು ಸೂಕ್ತ ಮತ್ತು ಅಪೇಕ್ಷಣೀಯ ಎರಡೂ ಆಗಿದ್ದು, ಜೊತೆಗೆ ನ್ಯಾಯದ 0 ಹಿತಾಸಕ್ತಿಯಿ ಂ ದಲೂ ಕೂಡಿರುವುದಾಗಿ ನಾವು ಭಾವಿಸಿರುವುದನ್ನು ಗಮನದಲ್ಲಿಟ್ಟುಕೊಂಡು ಅದನ್ನು ಮಾಡಲಾಗಿದೆ ಮತ್ತು ಈ ತೀರ್ಪಿನ ಮೇಲೆ ಅವಲಂಬಿಸಿ, ನಿಜವಾದ ಅಪರಾಧಿಗಳನ್ನು ಕಾಪಾಡಲು ಆಪಾದಿತ ವ್ಯಕ್ತಿಗಳೊಂದಿಗೆ ಅತ್ಯುನ್ನತ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದಾರೆಂದು ವಾದಿಸಿದ್ದಾರೆ.

36. ವಕೀಲರು ಸುಭ್ರತಾ ಚಟ್ಟೋರಾಜ್ -ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು – (2014) 8 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 768, ಪ್ರಕರಣದ ತೀರ್ಪಿನ ಮೇಲೂ ಸಹ ಅವಲಂಬಿಸಿದ್ದು, ತೀರ್ಪಿನ ಕಂಡಿಕೆ ಸಂಖ್ಯೆ 9 ರ ಮೇಲೆ ಅವಲಂಬಿಸುವ ಮೂಲಕ, ಈ ನ್ಯಾಯಾಲಯವು ತನಿಖೆಯನ್ನು ರಾಜ್ಯ ಪೊಲೀಸರಿಂದ ಸಿಬಿಐಗೆ ವರ್ಗಾಯಿಸಲು ಅಧಿಕಾರವನ್ನು ಚಲಾಯಿಸಿದ್ದಕ್ಕಾಗಿ, ಅಂಥ ವರ್ಗಾವಣೆಯನ್ನು ನಿಜವನ್ನು ಕಂಡುಹಿಡಿಯಲು ಮತ್ತು ನ್ಯಾಯೋದ್ದೇಶಗಳನ್ನು ಈಡೇರಿಸಲು ಪರಿಗಣಿಸಿದಂಥ ಪ್ರಕರಣಗಳಲ್ಲಿ, ವಿಷಯದ ಮೇಲೆ ತೀರ್ಮಾನಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋಗುವುದು ಅನಗತ್ಯ ಎಂದು ವಾದಿಸಿದ್ದಾರೆ.

37. ವಕೀಲರು ಜಹೀರಾ ಹಬೀಬುಲ್ಲಾ ಎಚ್. ಶೇಕ್ ಮತ್ತು ಇನ್ನೊಬ್ಬರು -ವಿರುದ್ಧ-ಗುಜರಾತ್ ರಾಜ್ಯ ಹಾಗೂ ಇತರರು – (2004) 4 ಸರ್ವೋಚ್ಚ ನ್ಯಾಯಾಲಯಗಳು 158, ಪ್ರಕರಣದ ತೀರ್ಪನ್ನು ಉಲ್ಲೇಖಿಸುತ್ತಾ, ಈ ತೀರ್ಪಿನಲ್ಲಿ ನಾಗರಿಕರ ಜೀವನ, ಸ್ವಾತಂತ್ರ್ಯಗಳು ಮತ್ತು ಸ್ವತ್ತುಗಳನ್ನು ಸಂರಕ್ಷಿಸಲು ರಾಜ್ಯ ಆಡಳಿತ ಯಂತ್ರದ ವಿಫಲತೆ ಹಾಗೂ ಆಪಾದಿತ ವ್ಯಕ್ತಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ನಡೆದ ತನಿಖೆಯಾಗಿದ್ದು, ನ್ಯಾಯಿಕ ವ್ಯವಸ್ಥೆಯಲ್ಲಿ ಸಾರ್ವಜನಿಕರ ವಿಶ್ವಾಸವನ್ನು ಉಳಿಸಿಕೊಳ್ಳುವುದು.ನ್ಯಾಯಾಲಯಗಳ ಕರ್ತವ್ಯವಾಗಿದೆಯೆಂದು ಸರ್ವೋಚ್ಚ ನ್ಯಾಯಾಲಯವು ತೀರ್ಮಾನಿಸಿದೆ ಎಂದು ಚ ವಾದಿಸಿದ್ದಾರೆ.ಆಪಾದಿತ ವ್ಯಕ್ತಿಗಳನ್ನು ಶಿಕ್ಷಿಸಲಾಗಿದೆಯೆಂದು ನ್ಯಾಯಾಲಯಗಳು ಖಚಿತಪಡಿಸಬೇಕಿದೆ ಮತ್ತು ರಾಜ್ಯದ ಶಕ್ತಿ ಹಾಗೂ ಅಧಿಕಾರಗಳು ರಾಜ್ಯವು ತನ್ನನ್ನು ಅಥವಾ ತನ್ನ ವ್ಯಕ್ತಿಗಳನ್ನು ಕಾಪಾಡಲು ಬಳಕೆಯಾಗಿಲ್ಲ, ತನಿಖೆಯಲ್ಲಿನ ಅಥವಾ ಪ್ರಾಸಿಕ್ಯೂಷನ್ನಲ್ಲಿನ ಕುಂದುಕೊರತೆಗಳನ್ನು ಕಾನೂನಿನ ಚೌಕಟ್ಟಿನೊಳಗೆ ಸೂಕ್ತವಾಗಿ ಪ್ರಬಲ ಹಿಡಿತದೊಂದಿಗೆ ವ್ಯವಹರಿಸಬೇಕಿದೆ, ನ್ಯಾಯಿಕ ಅಪರಾಧ ಆಡಳಿತವನ್ನು ಶುದ್ಧವಾಗಿರಿಸಬೇಕಿದೆ ಮತ್ತು ವಿಚಿತ್ರ ವರ್ತನೆಯ ರಾಜಕೀಯ ಮನಸ್ಸುಗಳ ಅಥವಾ ಸಂವಿಧಾನದಿಂದ ನಿಷೇಧಿಸಲಾದ ಕಾರ್ಯಸೂಚಿಗಳ ಹಿಡಿತಕ್ಕೆ ಸಿಗದಂತೆ ಇರಿಸಬೇಕಿದೆ.ಪ್ರಬಲವಾದ ಪದಗಳಲ್ಲಿ ವಾದವನ್ನು ದಾಖಲಿಸಲು ಅಪರಾಧಿಗಳನ್ನು ಬಿಡದೆ ಇರುವಲ್ಲಿ ರಾಜ್ಯ ಸರ್ಕಾರದ ಪಾತ್ರವನ್ನು, ಮುಗ್ಧ ಮಕ್ಕಳು ಹಾಗೂ ಅಸಹಾಯಕ ಮಹಿಳೆಯರು ಸುಟ್ಟು ಹೋಗುತ್ತಿದ್ದಾಗ ಬೇರೆಲ್ಲೋ ನೋಡುತ್ತಿದ್ದ " ಆಧುನಿಕ-ದಿನದ ' ನೀರೋಸ್ಗಳು ' " ಎಂದು ವರ್ಣಿಸಲಾಗಿದೆ, ಮತ್ತು ಅಷ್ಟೇ ಅಲ್ಲದೆ, ದೂರುದಾರಳಿಗೆ ನ್ಯಾಯವನ್ನು ಪಡೆಯಲು ಪಬ್ಲಿಕ್ ಪ್ರಾಸಿಕ್ಯೂಟರ್ರನ್ನು

ನೇಮಿಸುವಲ್ಲಿ ತನ್ನ ಅನಿಸಿಕೆಯನ್ನು ಹೇಳುವ ಸ್ವಾತಂತ್ರ್ಯವನ್ನು ನೀಡಲಾಗಿದೆ ಮತ್ತು ಹೆಚ್ಚಿನ ತನಿಖೆಗಾಗಿ ಆದೇಶಿಸುವ ಉದ್ದೇಶವೇ, ವಿವಿಧ ಕಾರಣಗಳಿಗಾಗಿ ತನಿಖೆಯು ಕಳಂಕಿತವಾದದ್ದಾಗಿದ್ದರೆ, ಪಕ್ಷಪಾತದ್ದಾಗಿದ್ದರೆ ಮತ್ತು ನ್ಯಾಯಸಮ್ಮತವಲ್ಲದ್ದಾಗಿದ್ದರೆ, ತನಿಖಾ ಏಜೆನ್ಸಿಯು ' ಸಿಆರ್ಪಿಸಿ ' ಯ 173 ( 8) ನೇ ಪ್ರಕರಣದಡಿ ಕಾರ್ಯನಿರ್ವಹಿಸಲು ನಿರ್ದೇಶಿಸಲಾಗಿದೆ.ಸತ್ಯವನ್ನು ನಿಶ್ಚಿತಗೊಳಿಸುವತ್ತ ಪ್ರಾಥಮಿಕವಾಗಿ ಗುರಿಯಿಟ್ಟ ಅಧಿವಿಚಾರಣೆಯು ಸಂಬಂಧಪಟ್ಟ ಎಲ್ಲರಿಗೆ ನ್ಯಾಯ ಸಮ್ಮತವಾಗಿರಬೇಕು ಎಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ, ಈ ತೀರ್ಪನ್ನು ಉಲ್ಲೇಖಿಸಿ, ಅವರು ನ್ಯಾಯಾಲಯವು ಮೂಕ ಪ್ರೇಕ್ಷಕನಾಗತಕ್ಕದ್ದಲ್ಲವೆಂದು ವಾದಿಸಿದ್ದಾರೆ ಮತ್ತು ವಕೀಲರು ಮುಂದುವರೆದು ಅಧಿವಿಚಾರಣೆಯನ್ನು ನಡೆಸುತ್ತಿರುವ ಪ್ರಿಸೈಡಿಂಗ್ ಅಧಿಕಾರಿಯು ಸಾಕ್ಷಿದಾರರು ಹೇಳಿಕೆ ಕೊಟ್ಟಂತೆ, ಸಾಕ್ಷ್ಯವನ್ನು ದಾಖಲಿಸಿಲ್ಲವೆಂದು ವಾದಿಸಿದ್ದಾರೆ ಹಾಗೂ ಈ ತೀರ್ಪನ್ನು ಉಲ್ಲೇಖಿಸುತ್ತಾ, ಪ್ರಿಸೈಡಿಂಗ್ ನ್ಯಾಯಾಧೀಶರು ಪ್ರೇಕ್ಷಕರಾಗುವುದು ಮತ್ತು ಕೇವಲ ಯಂತ್ರದಂತೆ ಸಾಕ್ಷ್ಯವನ್ನು ದಾಖಲಿಸುವುದು ನಿಲ್ಲಬೇಕು ಹಾಗೂ ಅವರು ಬುದ್ಧಿಶಕ್ತಿಯನ್ನು, ಸಕ್ರಿಯ ಹಿತಾಸಕ್ತಿಯನ್ನು ನಿಸ್ಸಂದೇಹವಾಗಿ ಸಾಬೀತು ಮಾಡಿ ಮತ್ತು ಸತ್ಯವನ್ನು ಕಂಡುಹಿಡಿಯುವ ಸರಿಯಾದ ತೀರ್ಮಾನವನ್ನು ತಲುಪಲು ಅಗತ್ಯವಾದ ಎಲ್ಲಾ ಸೂಕ್ತ ಸಾಕ್ಷ್ಯಧಾರಗಳನ್ನು ಬಯಲು ಮಾಡಿ ಅಧಿವಿಚಾರಣೆಯಲ್ಲಿ ಭಾಗವಹಿಸಬೇಕು ಮತ್ತು ಪಕ್ಷಕಾರರಿಗೆ ಹಾಗೂ ಸಮುದಾಯ ಎರಡಕ್ಕೂ ನ್ಯಾಯಸಮ್ಮತವಾಗಿ ಹಾಗೂ ನಿಷ್ಪಕ್ಷಪಾತವಾಗಿ ನ್ಯಾಯವನ್ನು ನೀಡಬೇಕೆಂದು ವಾದಿಸಿದ್ದಾರೆ ಹಾಗೂ ಅದು ಸದ್ಯದ ಪ್ರಕರಣದಲ್ಲಿ ಕಾಣೆಯಾಗಿದೆ.

38. ವಕೀಲರು ಸುನಿಲ್ಕುಮಾರ್ ಪಾಲ್ -ವಿರುದ್ಧ ಫೋಟಾ ಶೇಕ್ ಮತ್ತು ಇತರರು - (1984) 4 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 533, " ಪ್ರಕರಣದ ತೀರ್ಪಿನ ಮೇಲೆಯೂ ಸಹ ಅವಲಂಬಿಸಿದ್ದಾರೆ ಮತ್ತು ಸಾಕ್ಷಿದಾರರಿಗೆ ರಕ್ಷಣೆ ನೀಡುವಂತೆ ಉನ್ನತ ಅಧಿಕಾರಿಗಳಿಗೆ ಮನವಿಗಳನ್ನು ಮಾಡಿದ್ದರೂ, ಸದ್ಯದ ಪ್ರಕರಣದಲ್ಲಿ ಸಹ ನ್ಯಾಯಸಮ್ಮತ ತನಿಖೆಯ ಮೇಲೆಯೇ ಸಂಶಯಪಟ್ಟು, ಪೊಲೀಸ್ ಸಿಬ್ಬಂದಿಯ ಮುಖಾಂತರ ಸಾಕ್ಷಿದಾರರನ್ನು ಬೆದರಿಸಲಾಗಿದೆ ಮತ್ತು ಹಿಂದಿನ ಸಚಿವರೂ ಸಹ ಪೊಲೀಸ್ ಸಿಬ್ಬಂದಿಯ ಮುಖಾಂತರ ಸಾಕ್ಷಿದಾರರನ್ನು ತನ್ನಲ್ಲಿಗೆ ಕರೆಸಿಕೊಳ್ಳುವಲ್ಲಿ ಭಾಗಿಯಾಗಿದ್ದಾರೆಂದು ವಾದಿಸಿ, ತೀರ್ಪಿನ ಕಂಡಿಕೆ ಸಂಖ್ಯೆ 2 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಮೇಲೆ ಹೇಳಲಾದ ತೀರ್ಪು ಸದ್ಯದ ಪ್ರಕರಣಕ್ಕೆ ಯುಕ್ತವಾಗಿ ಅನ್ವಯವಾಗಿದೆ ಮತ್ತು ಅಷ್ಟೇ ಅಲ್ಲದೆ, ವಕೀಲರು ತೀರ್ಪಿನ ಕಂಡಿಕೆಸಂಖ್ಯೆ: 9 ನ್ನು ಉಲ್ಲೇಖಿಸಿ ಅಧಿವಿಚಾರಣೆಯು ನಡೆಯುತ್ತಿದ್ದಾಗ ಮತ್ತು ಸಾಕ್ಷಿದಾರರು ಸಾಕ್ಷ್ಯವನ್ನು ನೀಡುತ್ತಿದ್ದಾಗ, ನ್ಯಾಯಾಲಯದ ಆವರಣದಲ್ಲಿ ಸೇರಲು ಅನುಮತಿ ಪಡೆದ ಮತ್ತು ಪ್ರಾಸಿಕ್ಯೂಷನ್ ವಿರುದ್ಧ ಪ್ರತಿಕೂಲ ವಾತಾವರಣವನ್ನು ಸೃಷ್ಟಿಸಿದ ಕಮ್ಯೂನಿಸ್ಟ್ ಪಕ್ಷದ ಬೆಂಬಲಿಗರು ಎ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರೆಂದು ಅದನ್ನು ವಿವಾದಿಸಲು ಸಾಧ್ಯವಿರಲಿಲ್ಲವೆಂದು ವಾದಿಸಿದ್ದಾರೆ ಮತ್ತು ಸರ್ವೋಚ್ಚ ನ್ಯಾಯಾಲಯವೂ ಸಹ ಪ್ರಾಸಿಕ್ಯೂಷನ್ ಚ ವಿರುದ್ಧ ಪ್ರತಿಕೂಲ ವಾತಾವರಣ ಸೃಷ್ಟಿಯಾಗಿದೆಯೆಂದು ಮತ್ತು ಅದು ಸಾಕ್ಷಿದಾರರ ಪರವಾಗಿದೆಯೆಂದು ತೀರ್ಮಾನಿಸಿದೆ ಎಂದು ವಾದಿಸಿದ್ದಾರೆ ಹಾಗೂ ಆ ತೀರ್ಪು ಸದ್ಯದ ಪ್ರಕರಣಕ್ಕೆ ಯುಕ್ತವಾಗಿ ಅನ್ವಯವಾಗಿದೆ ಹಾಗೂ ಅದೇ ರೀತಿಯ ಸನ್ನಿವೇಶವು ಸದ್ಯದ ಪ್ರಕರಣದಲ್ಲಿ ಉಂಟಾಗಿದೆ ಎಂದು ವಾದಿಸಿದ್ದಾರೆ.

39. ಅರ್ಜಿದಾರರ ಪರ ಹಾಜರಾದ ವಕೀಲರು ಹೇಮ -ವಿರುದ್ಧ ರಾಜ್ಯ, ಮದ್ರಾಸಿನ ಪೊಲೀಸ್ ಇನ್ಸ್ಪೆಕ್ಟರ್ ಮುಖಾಂತರ - (2013) 10 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 192, ಪ್ರಕರಣದ ತೀರ್ಪಿನ ಮೇಲೂ ಸಹ ಅವಲಂಬಿಸಿದ್ದಾರೆ ಮತ್ತು ಆಂತರಿಕ ಪುಟಸಂಖ್ಯೆ.10 ನ್ನು ಉಲ್ಲೇಖಿಸಿದ್ದಾರೆ ಹಾಗೂ ನ್ಯಾಯಸಮ್ಮತ ಅಧಿವಿಚಾರಣೆಯಷ್ಟೇ ಅಲ್ಲದೆ ನ್ಯಾಯಸಮ್ಮತ ತನಿಖೆಯೂ ಸಹ ಭಾರತದ ಸಂವಿಧಾನದ 20 ಮತ್ತು 21 ನೇ ಅನುಚ್ಛೇದಗಳಡಿ ಖಾತರಿಗೊಳಿಸಲಾದ ಸಂವಿಧಾನಾತ್ಮಕ ಹಕ್ಕುಗಳ ಭಾಗವಾಗಿದೆ ಎಂಬುದು ಸ್ಥಾಪಿತ ಕಾನೂನಾಗಿದೆಯೆಂದು ಸರ್ವೋಚ್ಚ ನ್ಯಾಯಾಲಯವು ತೀರ್ಪಿನಲ್ಲಿ ಹೇಳಿದೆಯೆಂದು ವಾದಿಸಿದ್ದಾರೆ.ಚ ತದನುಸಾರವಾಗಿ, ತನಿಖೆಯು ನ್ಯಾಯಸಮ್ಮತ, ಪಾರದರ್ಶಕ ಮತ್ತು ವಿವೇಕಯುತವಾಗಿರಬೇಕು ಹಾಗೂ ಇದು ಕಾನೂನಿನ ನಿಯಮದ ತಕ್ಷಣದ ಅಗತ್ಯತೆಯಾಗಿದೆ.ವಕೀಲರು ತೀರ್ಪಿನ ಕಂಡಿಕೆ ಸಂಖ್ಯೆ 17 ನ್ನು ಸಹ ಉಲ್ಲೇಖಿಸುತ್ತಾ, ಎನ್ಎಚ್ಆರ್ಸಿ ವಿರುದ್ಧ ಗುಜರಾತ್ ರಾಜ್ಯ ಪ್ರಕರಣದಲ್ಲಿ ಚರ್ಚಿಸಲಾದ ತೀರ್ಪಿಗೆ ಸಂಬಂಧಿಸಿದಂತೆ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಸಮಾಜದ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಡೆಗಣಿಸಬಾರದು ಮತ್ತು ಅಂಗೀಕಾರಾರ್ಹನಲ್ಲದ ವ್ಯಕ್ತಿಯಾಗಿ ಪರಿಗಣಿಸಬಾರದೆಂದು ವಾದಿಸಿದ್ದಾರೆ.ಕಾನೂನಿನ ಘನತೆಯನ್ನು ಸಮರ್ಥಿಸುವ ಹಾಗೂ ಅದನ್ನು ಎತ್ತಿಹಿಡಿಯುವ ಕರ್ತವ್ಯವೆಂದು

ಅನೇಕ ಸಂದರ್ಭಗಳಲ್ಲಿ ಉಲ್ಲೇಖಿಸಲಾದಂತೆ ನ್ಯಾಯಾಡಳಿತದಲ್ಲಿ ಸಾರ್ವಜನಿಕರ ವಿಶ್ವಾಸವನ್ನು ಕಾಪಾಡಿಕೊಳ್ಳಲು ನ್ಯಾಯಾಲಯಗಳು ಯಾವಾಗಲೂ ಅಧ್ಯಾರೋಹೀ ಕರ್ತವ್ಯವನ್ನು ಹೊಂದಿರಬೇಕೆಂದು ಪರ್ಯಾಲೋಚಿಸಲಾಗಿದೆ.

40. ವಕೀಲರು ಬಹುಭಾಯಿ -ವಿರುದ್ಧ-ಗುಜರಾತ್ ರಾಜ್ಯ ಮತ್ತು ಇತರರು ಪ್ರಕರಣದ ತೀರ್ಪಿನ ಮೇಲೆಯೂ ಅವಲಂಬಿಸಿದ್ದು, ತೀರ್ಪಿನ ಕಂಡಿಕೆ ಸಂಖ್ಯೆ.33 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಬಿಹಾರ ರಾಜ್ಯ -ವಿರುದ್ಧ-ಪಿ.ಪಿ.ಶರ್ಮ ಪ್ರಕರಣಕ್ಕೆ ಸಂಬಂಧಿಸಿದಂತೆ ಉಲ್ಲೇಖವನ್ನು ಮಾಡಿದ್ದು, ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು ತನಿಖೆ ಎಂಬುದು ಸೂಕ್ಷ್ಮವಾದ ಮತ್ತು ಕಷ್ಟದಿಂದ ಕೂಡಿದ ಹಾಗೂ ಬುದ್ಧಿ ಚಾತುರ್ಯದಿಂದ ಕೂಡಿದ ಪ್ರಕ್ರಿಯೆಯಾಗಿದೆ.ತನಿಖಾ ವೃತ್ತಿಪರತೆಗೆ ನೀತಿಯುತ ನಡವಳಿಕೆಯು ನಿರುಪಾಧಿಕವಾಗಿ ಅತ್ಯಾವಶ್ಯಕವಾಗಿದೆ.ಆದುದರಿಂದ, ದುರ್ಭಾವನೆಗಳ ಅಥವಾ ಪಕ್ಷಪಾತದ ಅಂಥ ಆಪಾದನೆಗಳನ್ನು ಒಪ್ಪಿಕೊಳ್ಳುವ ಮುಂಚೆ ನ್ಯಾಯಾಲಯದ ಸತ್ಪರಿಣಾಮಕಾರಿಯಾದ ಮತ್ತು ಹೊಣೆಯುಳ್ಳ ಕರ್ತವ್ಯ ಹಾಗೂ ಜವಾಬ್ದಾರಿಯು, ತನಿಖೆಯ ಪ್ರಾರಂಭದಲ್ಲಿ ತನಿಖಾಧಿಕಾರಿಯ ವಿರುದ್ಧ ವೈಯಕ್ತಿಕ ಬದ್ಧದ್ವೇಷದ ನಿರ್ದಿಷ್ಟ ಮತ್ತು ಖಚಿತ ಆಪಾದನೆಗಳನ್ನು ಮಾಡಿ ಆಗ್ರಹಪಡಿಸುವುದಷ್ಟೇ ಅಲ್ಲದೆ, ನ್ಯಾಯಾಲಯದ ಮನವರಿಕೆಗಾಗಿ ಸಂಗತಿಗಳು ಮತ್ತು ಸನ್ನಿವೇಶಗಳಿಂದ ಅವುಗಳನ್ನು ಸಾಬೀತುಪಡಿಸಲು ಹಾಗೂ ರುಜುವಾತು ಮಾಡಲೂ ಸಹ ಆಗ್ರಹಪಡಿಸಬೇಕು ಎಂದು ತೀರ್ಮಾನಿಸಿದೆಯೆಂದು ವಾದಿಸಿದ್ದಾರೆ.

41. ವಕೀಲರು ಪಂಜಾಬ್ರಾಜ್ಯ ವಿರುದ್ಧ ಕೇಂದ್ರ ತನಿಖಾ ಸಂಸ್ಥೆ ಹಾಗೂ ಇತರರು ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿದ್ದು, ಕಂಡಿಕೆಸಂಖ್ಯೆ: 15 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ತನಿಖಾ ಏಜೆನ್ಸಿ ಅಥವಾ ಉಚ್ಚ ನ್ಯಾಯಾಲಯದ ಅಧೀನ ನ್ಯಾಯಾಲಯ ಸಿಆರ್‌ಪಿಸಿ ಅಡಿಯಲ್ಲಿನ ಚ ಅಧಿಕಾರಗಳನ್ನು ಚಲಾಯಿಸಿ, ಸಿಆರ್‌ಪಿಸಿಯ ನಾಲ್ಕು ಮೂಲೆಗಳ ವ್ಯಾಪ್ತಿಯೊಳಗೆ ಆ ಅಧಿಕಾರವನ್ನು ಚಲಾಯಿಸಬೇಕು ಮತ್ತು ಹೀಗೆಂದರೆ, ತನಿಖಾ ಏಜೆನ್ಸಿಯು ಹೆಚ್ಚಿನ ತನಿಖೆಯನ್ನು ಕೈಗೊಳ್ಳಬಹುದೆಂದು ಅರ್ಥವಾಗುತ್ತದೆ ಹಾಗೂ ಅಧೀನ ನ್ಯಾಯಾಲಯವು ' ಸಿಆರ್‌ಪಿಸಿ'ಯ 173 ನೇ ಪ್ರಕರಣದ ( 2) ನೇ ಉಪ ಪ್ರಕರಣದಡಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾದ ಪ್ರಕರಣದಲ್ಲಿ ಹೆಚ್ಚಿನ ತನಿಖೆಗಾಗಿ ನಿರ್ದೇಶಿಸಬಹುದು ಹಾಗೂ ಹೆಚ್ಚಿನ ತನಿಖೆಯೆಂದರೆ ಹೊಸದಾಗಿ ತನಿಖೆ ಮಾಡುವುದಲ್ಲ ಅಥವಾ ಮರು-ತನಿಖೆಯೆಂದು ಅರ್ಥವಲ್ಲ.ಆದರೆ, ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ ಪ್ರಕರಣದಲ್ಲಿ ಸಿಆರ್‌ಪಿಸಿ'ಯ 173 ನೇ ಪ್ರಕರಣದ ( 8) ನೇ ಉಪಪ್ರಕರಣದಲ್ಲಿ ನ್ಯಾಯೋದ್ದೇಶಗಳನ್ನು ಸಾಧಿಸಲು ' ಸಿಆರ್‌ಪಿಸಿ'ಯ 482 ನೇ ಪ್ರಕರಣದಡಿ ನ್ಯಾಯಾಲಯದ ಅಂತರ್ಗತ ಅಧಿಕಾರಗಳನ್ನು ಚಲಾಯಿಸಲು ಈ ಪರಿಮಿತಿಗಳು ಅನ್ವಯವಾಗುವುದಿಲ್ಲ.ಅಷ್ಟೇ ಅಲ್ಲದೆ, ವಕೀಲರು ಆ ತೀರ್ಪನ್ನು ಉಲ್ಲೇಖಿಸಿ, ತನಿಖೆಯು ಪೂರ್ಣಗೊಂಡಿದ್ದರೂ, ಮತ್ತು ಪೊಲೀಸರಿಂದ ದೋಷಾರೋಪ ಪಟ್ಟಿಯನ್ನು ಸಲ್ಲಿಸಲಾಗಿದ್ದರೂ ಸಹ, ನ್ಯಾಯೋದ್ದೇಶವನ್ನು ಸಾಧಿಸುವಲ್ಲಿ ' ಸಿಬಿಐ'ಯಿಂದ ಪ್ರಕರಣದ ತನಿಖೆ ನಡೆಯುವುದು ಅತ್ಯಾವಶ್ಯಕವಾಗಿದೆ. 'ಸಿಆರ್‌ಪಿಸಿ 9 ಯ 482 ನೇ ಪ್ರಕರಣವನ್ನು ಭಾರತದ ಸಂವಿಧಾನದ 226 ನೇ ಅನುಚ್ಛೇದದೊಂದಿಗೆ ಸೇರಿಸಿ ಮಿತವಾಗಿ ಎಚ್ಚರಿಕೆಯಿಂದ ಚಲಾಯಿಸಬೇಕಿದೆ ಮತ್ತು ಇದನ್ನು ತನಿಖೆಯಲ್ಲಿ ವಿಶ್ವಾಸಾರ್ಹತೆಯನ್ನು ಮತ್ತು ನಂಬಿಕೆಯನ್ನು ಒದಗಿಸಲು ಅಗತ್ಯವಾಗುವ ಅಥವಾ ಘಟನೆಯು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಶಾಖೋಪಶಾಖೆಗಳನ್ನು ಹೊಂದಿರಬಹುದಾದ ಅಸಾಧಾರಣ ಸನ್ನಿವೇಶಗಳಲ್ಲಿ ಚಲಾಯಿಸಬೇಕಿದೆಯೆಂದು ವಾದಿಸಿದ್ದಾರೆ.

42. ವಕೀಲರು ಪೂಜಾ ಪಾಲ್ -ವಿರುದ್ಧ-ಯೂನಿಯನ್ಆಫ್ ಇಂಡಿಯಾ ಮತ್ತು ಇತರರು - . (2016) 3 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 135, ಪ್ರಕರಣದ ತೀರ್ಪನ್ನು ಸಹ ಉಲ್ಲೇಖಿಸಿ, ಸಂವಿಧಾನಾತ್ಮಕ ನ್ಯಾಯಾಲಯಗಳಲ್ಲಿ ಮಾತ್ರ ನ್ಯಾಯಾಲಯದ ಪೂರ್ವನಿಯಂತ್ರಕ ಪಾತ್ರವು ಹೊಸದಾಗಿ ತನಿಖೆ/ಮರು ತನಿಖೆ ಮತ್ತು ಹೆಚ್ಚಿನ ತನಿಖೆಗಾಗಿ ನಿರ್ದೇಶಿಸಲು ಅಧಿಕಾರ ಹೊಂದಿದ್ದು, ರೆಗ್ಯುಲರ್ ನ್ಯಾಯಾಲಯವು ಹೆಚ್ಚಿನ ತನಿಖೆಗಾಗಿ ನಿರ್ದೇಶಿಸಲು ಮಾತ್ರ ಅಧಿಕಾರ ಹೊಂದಿದೆ ಎಂದು ವಾದಿಸಿದ್ದಾರೆ.ದೋಷಾರೋಪ ಪಟ್ಟಿಯನ್ನು ಈಗಾಗಲೇ ಸಲ್ಲಿಸಿದ್ದಾರೆ ಮತ್ತು ಅಧಿವಿಚಾರಣೆ ಇತ್ಯರ್ಥದಲ್ಲಿದೆಯೆಂಬ ಸಂಗತಿಯು ಹೊಸದಾಗಿ ತನಿಖೆ/ಮರುತನಿಖೆ ಅಥವಾ ಹೆಚ್ಚಿನ ತನಿಖೆಗೆ ಆದೇಶಿಸಬಹುದೇ?ಎಂಬುದಕ್ಕೆ ಸುಸಂಬದ್ಧವಾಗಿದೆ ಮತ್ತು ಅಷ್ಟೇ ಅಲ್ಲದೆ, ವಕೀಲರು ತೀರ್ಪಿನ ಕಂಡಿಕೆ ಸಂಖ್ಯೆ.38 ನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದು, ಪ್ರೈವೇಟ್ ಎದುರುದಾರರು ಆಕೆಯ ವಿರೋಧಿಗಳಾಗಿದ್ದು, ಅವರ ವಿರುದ್ಧ ರಾಜಕೀಯ ಪ್ರೇರಿತವಾದ ದ್ವೇಷವಿದ್ದು, ಸದ್ಯದ ಪ್ರಕರಣದಲ್ಲಿ ರಾಜಕೀಯ ಬದ್ಧ ದ್ವೇಷವಿತ್ತು ಎಂದು ವಾದಿಸಿದ್ದಾರೆ ಮತ್ತು ಹೀಗಾಗಿ, ಅಧಿವಿಚಾರಣೆ

ನಡೆಯುತ್ತಿದ್ದಾಗ ಸಿಬಿಐನಿಂದ ತನಿಖೆಗೆ ನಿರ್ದೇಶಿಸಲು ಕಾನೂನಿನಲ್ಲಿ ಇದು ಸಮರ್ಥನೀಯವಾದ ಕಾರಣವಾಗಿದೆ ಮತ್ತು ಅಧಿವಿಚಾರಣೆಯು ಈಗಾಗಲೇ ಪ್ರಾರಂಭವಾಗಿದೆಯೆಂಬ ವಾದವನ್ನು ಅಂಗೀಕರಿಸಲಾಗದು ಮತ್ತು ತೀರ್ಪಿನ ಕಂಡಿಕೆ ಸಂಖ್ಯೆ.43 ಮತ್ತು 4 ವನ್ನು ಸಹ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಸತ್ಯವನ್ನು ಕಂಡುಹಿಡಿಯುವ ದೃಷ್ಟಿಯಿಂದ ಸಿಬಿಐ ತನಿಖೆಗೆ ಆದೇಶಿಸುವ ಅಗತ್ಯತೆಯಿದೆ ಎಂದು ವಾದಿಸಿದ್ದಾರೆ ಮತ್ತು ತೀರ್ಪಿನ ಕಂಡಿಕೆ ಸಂಖ್ಯೆ .100 ನ್ನು ಸಹ ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ಅಂಥ ಸಾದಿಲ್ವಾರುಗಳಲ್ಲಿ ಸಂಪೂರ್ಣವಾದ ನ್ಯಾಯ ಕಾರಣ ಹಾಗೂ ಮಾನವ ಹಕ್ಕುಗಳ ಸಂರಕ್ಷಣೆ-ಇವು ಸಾಂದರ್ಭಿಕ ಬೇಡಿಕೆಗಳಾಗಿದ್ದಲ್ಲಿ, ಪ್ರಬಲವಾದ ನ್ಯಾಯಕಾರಣದಲ್ಲಿ ಸಿಬಿಐ ' ನಂಥ ನಿಷ್ಪಕ್ಷಪಾತವಾದ ಏಜೆನ್ಸಿಯಿಂದಲೂ ಸಹ ಹೆಚ್ಚಿನ ತನಿಖೆಗೆ ಅಥವಾ ಮರು ತನಿಖೆಗೆ ಆದೇಶಿಸುವುದು ಅನುಲ್ಲಂಘನೀಯ ಕ್ರಮವಾಗಲೇಬೇಕಿದೆಯೆಂದು ವಾದಿಸಿದ್ದಾರೆ.

43. ವಕೀಲರು ಸಮಾಜ ಪರಿವರ್ತನ ಸಮುದಾಯ -ವಿರುದ್ಧ ಕರ್ನಾಟಕ ರಾಜ್ಯ ಹಾಗೂ ಇತರರು ಪ್ರಕರಣದ ತೀರ್ಪಿನ ಮೇಲೆ ಅವಲಂಬಿತರಾಗಿದ್ದು, ತೀರ್ಪಿನ ಕಂಡಿಕೆ ಸಂಖ್ಯೆ.25 ಮತ್ತು 26 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದಾರೆ ಮತ್ತು ಅಪರಾಧ ತನಿಖೆಯ ಸಾಧನೋಪಾಯವನ್ನು ಅಧಿಕಾರವ್ಯಾಪ್ತಿಯ ಪೊಲೀಸರಿಂದ ಅಥವಾ ಬೇರೆ ರೀತಿಯಿಂದ ನಿರ್ದಿಷ್ಟಪಡಿಸಲಾದ ಪೊಲೀಸ್ ಅಧಿಕಾರಿಯಿಂದ ಪ್ರಥಮ ಮಾಹಿತಿ ವರದಿಯನ್ನು (ಎಫ್ಐಆರ್) ನೋಂದಾಯಿಸುವ ಮೂಲಕ ಚಾಲನೆಗೊಳಿಸಲಾಗಿದೆಯೆಂದು ವಾದಿಸಿದ್ದಾರೆ.ಸಿಬಿಐ, ತನ್ನ ಕೈಪಿಡಿಗೆ ಸಂಬಂಧಿಸಿದಂತೆ ಸೀಮಿತ ತನಿಖಾ-ಪೂರ್ವ ವಿಚಾರಣೆಯನ್ನು ನಡೆಸುವ ಪ್ರಕ್ರಿಯೆಯನ್ನು ಸಹ ಅಂಗೀಕರಿಸಿದೆ ಮತ್ತು ಸಿಆರ್‌ಪಿಸಿ'ಯ 154 ನೇ ಪ್ರಕರಣವು ಸ್ವೀಕರಿಸಲಾದ ಮಾಹಿತಿಯ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲು ಪ್ರಾಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ಹೊರಿಸುತ್ತದೆ.ಸಂಜ್ಞೆಯ ಅಪರಾಧವನ್ನು ಎಸಗಿರುವುದಕ್ಕೆ ಸಂಬಂಧಿಸಿದಂತೆ, ಪೊಲೀಸ್ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯಿಂದ ಅಂಥ ಮಾಹಿತಿಯು ಮೌಖಿಕವಾಗಿ ಅಥವಾ ಲಿಖಿತವಾಗಿ ಸ್ವೀಕರಿಸಲ್ಪಟ್ಟಿದೆಯೇ?ಮತ್ತು ಆ ನಂತರ ' ಸಿಆರ್‌ಪಿಸಿ'ಯ 156 ( 3) ನೇ ಪ್ರಕರಣದಡಿ ತನಿಖೆಯನ್ನು ನಡೆಸಲಾಗಿದೆಯೆ?ಮತ್ತು ಅಷ್ಟೇ ಅಲ್ಲದೆ ಅವರು ಕಂಡಿಕೆ ಸಂಖ್ಯೆ.37 ನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಪ್ರಕರಣದ ತನಿಖೆಯು ಅಥವಾ ಪ್ರಕರಣದಲ್ಲಿ ಆರೋಪಪಟ್ಟಿಯನ್ನು ಸಲ್ಲಿಸುವಿಕೆಯು ತನಿಖಾ ಏಜೆನ್ಸಿಯಿಂದ ಅಥವಾ ನ್ಯಾಯಾಲಯದಿಂದ ಅಧಿಕಾರವನ್ನು ಚಲಾಯಿಸುವ ನಿರುಪಾಧಿಕ ಮುಕ್ತಾಯವನ್ನು ತಂತಾನೇ ತರಲಾಗದು ಎಂದು ವಾದಿಸಿದ್ದಾರೆ.

44. ವಕೀಲರು ನರ್ಮದಾಬಾಯಿ -ವಿರುದ್ಧ ಗುಜರಾತ್ ರಾಜ್ಯ ಮತ್ತು ಇತರರು - (2011) 5 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 79, ಪ್ರಕರಣದ ತೀರ್ಪಿನ ಮೇಲೆ ಅವಲಂಬಿತರಾಗಿದ್ದು, ಕಂಡಿಕೆ ಸಂಖ್ಯೆ 63, 64 ಮತ್ತು 65 ನ್ನು ಉಲ್ಲೇಖಿಸಿದ್ದಾರೆ ಮತ್ತು ತನಿಖೆಯನ್ನು ಮುಂದುವರೆಸಲು, 0 ತದನುಸಾರವಾಗಿ ನ್ಯಾಯೋದ್ದೇಶವನ್ನು ಈಡೇರಿಸಲು ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಗುಜರಾತ್ರಾಜ್ಯ ಪೊಲೀಸರಿಗೆ ಅನುಮತಿ ನೀಡುವುದು ಅಪೇಕ್ಷಣೀಯವಾಗಿರುತ್ತದೆ ಎಂದು ವಾದಿಸಿದ್ದಾರೆ ಹಾಗೂ ಅಷ್ಟೇ ಅಲ್ಲದೆ, ಪ್ರಕರಣದ ವಾಸ್ತವಿಕ ಅಂಶಗಳನ್ನು ಪರಿಗಣಿಸಿ, ತನಿಖೆಯನ್ನು ಕೈಗೊಳ್ಳಲು ' ಸಿಬಿಐ'ಗೆ ನಿರ್ದೇಶಿಸತಕ್ಕದ್ದೆಂದು ಅವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ.

45. ವಕೀಲರು ಕೆ.ವಿ. ರಾಜೇಂದ್ರನ್ -ವಿರುದ್ಧ ಪೊಲೀಸ್ ಅಧೀಕ್ಷಕರು, ಸಿಐಸಿಐಡಿ ದಕ್ಷಿಣ ವಲಯ, ಚೆನ್ನೈ ಮತ್ತು ಇತರರು - (2013) 12 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 480, 18 ಪ್ರಕರಣದ ತೀರ್ಪಿನ ಮೇಲೆ ಅವಲಂಬಿಸಿದ್ದು, ತೀರ್ಪಿನ ಕಂಡಿಕೆ ಸಂಖ್ಯೆ.7 ರಲ್ಲಿ ನೀಡಲಾದ ಅಭಿಪ್ರಾಯೋಕ್ತಿಯನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದು, ನ್ಯಾಯಾಲಯಕ್ಕೆ ತನಿಖೆಯು ಮೇಲ್ನೋಟಕ್ಕೆ ಕಳಂಕಿತವಾದದ್ದೆಂದು ಅಥವಾ ಪಕ್ಷಪಾತದಿಂದ ಕೂಡಿದ್ದೆಂದು ಕಂಡುಬಂದಂಥ ಅಪರೂಪದ ಹಾಗೂ ಅಸಾಧಾರಣವಾದ ಪ್ರಕರಣಗಳಲ್ಲಿ ಮಾತ್ರ ರಾಜ್ಯ ತನಿಖಾ ಏಜೆನ್ಸಿಯಿಂದ ಸಿಬಿಐನಂಥ ಯಾವುದೇ ಇತರ ಸ್ವತಂತ್ರ ಏಜೆನ್ಸಿಗೆ ವರ್ಗಾವಣೆ ಮಾಡುವ ಮತ್ತು ತನಿಖೆ ಮಾಡುವ ತನ್ನ ಸಂವಿಧಾನಾತ್ಮಕ ಅಧಿಕಾರಗಳನ್ನು ನ್ಯಾಯಾಲಯವು ಚಲಾಯಿಸಬಹುದು ಎಂಬಷ್ಟರ ಮಟ್ಟಿಗೆ ಕಾನೂನನ್ನು ಸಂಕ್ಷಿಪ್ತಗೊಳಿಸಬಹುದು ಎಂದು ವಾದಿಸಿದ್ದಾರೆ.

46. ವಕೀಲರು ಹೊರಡಿಸಲಾದ, ಎಂ.ಕೆ. ಕುಶಾಲಪ್ಪ ಮತ್ತು ಇನ್ನೊಬ್ಬರು -ವಿರುದ್ಧ-ಶ್ರೀ ಕೆ.ಜೆ. ಜಾರ್ಜ್ ಹಾಗೂ ಇತರರು ಪ್ರಕರಣದ ತೀರ್ಪನ್ನು ಸಹ ಉಲ್ಲೇಖಿಸಿ; ತೀರ್ಪಿನ ಕಂಡಿಕೆ ಸಂಖ್ಯೆ.ಇನ್ನು ನ್ಯಾಯಾಲಯದ ಗಮನಕ್ಕೆ

ತಂದಿದ್ದು, ರಾಜ್ಯದಿಂದ ಸಿಬಿಐಗೆ ತನಿಖೆಗಾಗಿ ಪ್ರಕರಣವನ್ನು ಕಳುಹಿಸಲು ಅಂಥ ಅಸಾಧಾರಣ ಸನ್ನಿವೇಶಗಳನ್ನು ನಿರ್ಧರಿಸಲು ಯಾವುದೇ ನಿಗದಿತ ಮಾನದಂಡಗಳಿಲ್ಲವೆಂದು ವಾದಿಸಿದ್ದಾರೆ.ಸಂವಿಧಾನಾತ್ಮಕ ನ್ಯಾಯಾಲಯವು ನಿರ್ದಿಷ್ಟ ಪ್ರಕರಣದ ಸಂಗತಿ ಸನ್ನಿವೇಶದ ಎಲ್ಲಾ ದೃಷ್ಟಿಯಿಂದ, ಸಿಬಿಐ ತನಿಖೆಗೆ ನಿರ್ದೇಶಿಸುವುದು ನ್ಯಾಯಸಮ್ಮತವಾಗಿದೆ ಹಾಗೂ ಸೂಕ್ತವಾಗಿದೆಯೆಂದು ಭಾವಿಸಬಹುದು.

47. ವಕೀಲರು ಈ ತೀರ್ಪನ್ನು ಉಲ್ಲೇಖಿಸುವ ಮೂಲಕ, ಈ ನ್ಯಾಯಾಲಯವು ಸತ್ಯವನ್ನು ಕಂಡುಹಿಡಿಯುವ ಮತ್ತು ತಪ್ಪಿತಸ್ಥನನ್ನು ಶಿಕ್ಷಿಸುವ ದೃಷ್ಟಿಯಿಂದ ವಿಫುಲ ಅಧಿಕಾರವನ್ನು ಹೊಂದಿದ್ದು, ಈ ತನಿಖೆಯೇ ಒಂದು ಸುಳ್ಳು ತನಿಖೆಯಾಗಿದೆ ಮತ್ತು ಇದನ್ನು ಪ್ರಭಾವೀ ವ್ಯಕ್ತಿಯಾದ ನಿಜವಾದ ಅಪರಾಧಿಯನ್ನು ಕಾಪಾಡುವ ಉದ್ದೇಶದಿಂದ ಮಾಡಲಾಗಿದೆ ಹಾಗೂ ಉನ್ನತ ಪೊಲೀಸ್ ಅಧಿಕಾರಿಗಳೂ ಸಹ ಸುಳ್ಳು ತನಿಖೆ ನಡೆಸುವಲ್ಲಿ ಮಾತ್ರವಲ್ಲದೆ, ಆರೋಪಪಟ್ಟಿಯನ್ನು ದಾಖಲಿಸಿದ ನಂತರವೂ ಸಹ ಪೊಲೀಸ್ ಅಧಿಕಾರಿಗಳು ಸಾಕ್ಷಿದಾರರನ್ನು ಬೆದರಿಸುವ ಪ್ರಯತ್ನ ಮಾಡಿದ್ದಾರೆಂಬ ಈ ಪ್ರಕರಣದ ವಾಸ್ತವಿಕ ಅಂಶಗಳನ್ನು ಪರಿಗಣಿಸಿದ್ದು ಸಿಬಿಐ ತನಿಖೆಗೆ ಆದೇಶಿಸಿದೆಯೆಂದು ವಾದಿಸಿದ್ದಾರೆ.

48. ಇದಕ್ಕೆ ವಿರೋಧವಾಗಿ, ಎದುರುದಾರ ರಾಜ್ಯದ ಪರ ಹಾಜರಾದ ಹೆಚ್ಚುವರಿ ಅಡ್ವಕೇಟ್ ಜನರಲ್ರವರು ತಮ್ಮ ವಾದಗಳಲ್ಲಿ, ವ್ಯವಹರಣೆಗಳನ್ನು ನಿಧಾನವಾಗಿ ಎಳೆಯುತ್ತಾ ಸಾಗುವ ಉದ್ದೇಶದಿಂದಲೇ ವ್ಯವಹರಣೆಗಳನ್ನು ದೀರ್ಘಗೊಳಿಸುವ ಪ್ರಯತ್ನವನ್ನು ಮಾಡಿದ್ದಾರೆ ಮತ್ತು 63 ಮಂದಿ ಸಾಕ್ಷಿದಾರರ ಪೈಕಿ ಬಹುತೇಕ 57 ಮಂದಿ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದಾರೆ.ಈ ಅರ್ಜಿದಾರರು, ಅದರಲ್ಲೂ ನಿರ್ದಿಷ್ಟವಾಗಿ ಈ ಪ್ರಕರಣದಲ್ಲಿ ಸಿಡಬ್ಲ್ಯು -19 ಸಹ ಆಗಿರುವ 2 ನೇ ಅರ್ಜಿದಾರನು ನ್ಯಾಯಾಲಯಕ್ಕೆ ಬಂದು ಹಾಜರಾಗಲು ಇಚ್ಛಿಸಿಲ್ಲ ಹಾಗೂ ವ್ಯವಹರಣೆಗಳನ್ನು ಸ್ಥಗಿತಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆಂದು, ಇನ್ನೊಬ್ಬ ಅರ್ಜಿದಾರನು ಸಾಕ್ಷಿದಾರನಲ್ಲ ಮತ್ತು 2 ನೇ ಅರ್ಜಿದಾರನು ಪಾತ್ರದ ಮತ್ತು ನಿಜವಾದ ಅಪರಾಧಿಗೆ ಸಂಬಂಧಿಸಿದ ಯಾವುದೇ ಸಾಕ್ಷ್ಯಾಧಾರವನ್ನು ನಿಜವಾಗಿಯೂ ಹೊಂದಿದ್ದಲ್ಲಿ ಮತ್ತು ಅದನ್ನು ಅಧಿವಿಚಾರಣೆ ನಡೆಯುತ್ತಿರುವ ನ್ಯಾಯಾಲಯದ ಮುಂದೆ ಮಂಡಿಸಬಹುದಾಗಿದೆ ಹಾಗೂ ತನಿಖಾಧಿಕಾರಿಯು ಅದಾಗಲೇ ಸಾಕ್ಷ್ಯಾಧಾರವನ್ನು ಸಂಗ್ರಹಿಸಿದ್ದು, ಮೇಲ್ನೋಟಕ್ಕೆ ಸಾಕ್ಷ್ಯಾಧಾರವನ್ನು ಕಂಡುಹಿಡಿದಿದ್ದಾರೆ ಹಾಗೂ ಆರೋಪಪಟ್ಟಿಯನ್ನು ಸಲ್ಲಿಸಿದ್ದಾರೆ, ಆರೋಪಪಟ್ಟಿಯನ್ನು ಸಲ್ಲಿಸುವಾಗ ಹತ್ಯೆಯನ್ನು ಎಸಗುವುದಕ್ಕಾಗಿನ ಕಾರಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರವನ್ನೂ ಸಹ ಮಂಡಿಸಿದ್ದಾರೆಂದು ಕೆಲವು ತೀರ್ಪುಗಳನ್ನು ಉಲ್ಲೇಖಿಸಿ, ವಾದಿಸಿದ್ದಾರೆ.

49. ವಕೀಲರು ಕೆ.ವಿ. ರಾಜೇಂದ್ರನ್ ವಿರುದ್ಧ ಪೊಲೀಸ್ ಅಧೀಕ್ಷಕರು, ಸಿಐಸಿಐಡಿ ದಕ್ಷಿಣ ವಲಯ, ಚೆನ್ನೈ ಹಾಗೂ ಇತರರು - (2013) 12 ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳು 480, ಪ್ರಕರಣದ ತೀರ್ಪಿನ ಮೇಲೂ ಸಹ ಅವಲಂಬಿತರಾಗಿದ್ದು ಮತ್ತು ತೀರ್ಪನ್ನು ಉಲ್ಲೇಖಿಸಿ, ದೂರುದಾರರು ಪೊಲೀಸ್ ಅಧಿಕಾರಿಗಳ ವಿರುದ್ಧ ದುರ್ಭಾವನೆಗಳ ಆಪಾದನೆ ಮಾಡಿದ್ದರೂ, ಸದರಿ ಆಪಾದನೆಗಳು ಅನಿರ್ದಿಷ್ಟವಾಗಿದ್ದವು-ದೂರುದಾರರು ಅದೇ ರೀತಿಯ ಕೋರಿಕೆಯು ಸರ್ವೋಚ್ಚ ನ್ಯಾಯಾಲಯದಿಂದ ತಿರಸ್ಕೃತವಾದ ನಂತರ ಸಿಬಿಐಗೆ ಪ್ರಕರಣದ ವರ್ಗಾವಣೆಯನ್ನು ಸಮರ್ಥಿಸುವ ಯಾವುದೇ ತರುವಾಯದ ಬೆಳವಣಿಗೆಯನ್ನು ಹಾಜರುಪಡಿಸಲು ಸಾಧ್ಯವಾಗಿರಲಿಲ್ಲವೆಂದು ವಾದಿಸಿದ್ದಾರೆ.ತನಿಖೆಯನ್ನು ರಾಜ್ಯ ಪೊಲೀಸರಿಂದ ಸಿಬಿಐಗೆ ವರ್ಗಾಯಿಸಬಹುದಾದ ಅಪರೂಪದ ಮತ್ತು ಅಸಾಧಾರಣವಾದ ಪ್ರಕರಣಗಳ ತೀರ್ಪಿನಲ್ಲಿ ಮಾತ್ರ ಪುನರುಚ್ಚರಿಸಲಾಗಿದೆಯೆಂಬುದನ್ನೂ ಸಹ ವಕೀಲರು ನನ್ನ ಗಮನಕ್ಕೆ ತಂದಿದ್ದಾರೆ ಮತ್ತು ಅಷ್ಟೇ ಅಲ್ಲದೆ, ಅಸಾಧಾರಣ ಅಧಿಕಾರವನ್ನು ಮಿತವಾಗಿ, ಎಚ್ಚರಿಕೆಯಿಂದ ಮತ್ತು ತನಿಖೆಯು ಅದಾಗಲೇ ಪೂರ್ಣಗೊಂಡಿರುವ ಮತ್ತು ಆರೋಪಪಟ್ಟಿಯನ್ನು ಸಲ್ಲಿಸಲಾಗಿರುವ ಅಸಾಧಾರಣ ಸನ್ನಿವೇಶಗಳಲ್ಲಿ ಚಲಾಯಿಸಬೇಕು ಎಂಬುದನ್ನು ವಕೀಲರು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ.ಸಾಮಾನ್ಯವಾಗಿ ಉನ್ನತ ನ್ಯಾಯಾಲಯಗಳು ತನಿಖೆಯನ್ನು ಮರುಪ್ರಾರಂಭಿಸತಕ್ಕದ್ದು ಮತ್ತು ಆರೋಪಪಟ್ಟಿಯನ್ನು ಸಲ್ಲಿಸಲಾಗಿರುವಲ್ಲಿ ತನಿಖೆಗೆ ಅವಕಾಶವಿರತಕ್ಕದ್ದಾಗಿದ್ದು, ಕಾನೂನಿಗೆ ಅನುಸಾರವಾಗಿ ವಿಷಯದೊಂದಿಗೆ ಮುಂದುವರೆಯಲು ಯಾವುದೇ ಸಂದರ್ಭಗಳಲ್ಲಿ ಉನ್ನತ ನ್ಯಾಯಾಲಯಗಳು ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ಆಪಾದನೆಗೆ ಸಂಬಂಧಿಸಿ, ಗುಣಾರ್ಹತೆಗಳ ಆಧಾರದ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕದ್ದು ಮತ್ತು ಅದರಲ್ಲಿ ಒಳಗೊಂಡಿರುವ ವಿವಾದಕ್ಕೆ ಸಂಬಂಧಿಸಿದಂತೆ, ತೀರ್ಪಿನ 13 ನೇ

ಕಂಡಿಕೆಯನ್ನು ಸಹ ನನ್ನ ಗಮನಕ್ಕೆ ತಂದಿದ್ದಾರೆ ಹಾಗೂ ಅಷ್ಟೇ ಅಲ್ಲದೆ, ಸರ್ವೋಚ್ಚ ನ್ಯಾಯಾಲಯವು ಚ ಅನೇಕ ಸಂದರ್ಭಗಳಲ್ಲಿ ರಾಜ್ಯ ತನಿಖಾ ಏಜೆನ್ಸಿಯಿಂದ ಸಿಬಿಐನಂಥ ಯಾವುದೇ ಇತರ ಸ್ವತಂತ್ರ ತನಿಖಾ ಏಜೆನ್ಸಿಗೆ ತನಿಖೆಯನ್ನು ಎಂಥ ಸನ್ನಿವೇಶಗಳಡಿ ವರ್ಗಾಯಿಸಲಾಯಿತೋ ಅಂಥ ವಿವಾದದೊಂದಿಗೆ ವ್ಯವಹರಿಸಿದೆಯೆಂದು ನಿವೇದಿಸಿದ್ದಾರೆ.

50. ಹೆಚ್ಚುವರಿ ಅಡ್ವಕೇಟ್ ಜನರಲ್ರವರು, ಬ್ರಿಜೇಂದ್ರಸಿಂಗ್ ಮತ್ತು ಇತರರು -ವಿರುದ್ಧ-ರಾಜಸ್ಥಾನ ರಾಜ್ಯ 21 ಪ್ರಕರಣದ ತೀರ್ಪಿನ ಮೇಲೆ ಅವಲಂಬಿತರಾಗಿದ್ದು, ತೀರ್ಪಿನ ಕಂಡಿಕೆಸಂಖ್ಯೆ: ನ್ನು ನನ್ನ ಗಮನಕ್ಕೆ ತಂದಿದ್ದಾರೆ ಮತ್ತು ಆರೋಪಿಯೆಂದು ದೋಷಾರೋಪಣೆ ಮಾಡಲಾದಂಥ ವ್ಯಕ್ತಿಗಳ ವಿರುದ್ಧವೂ ಸಹ ಸಿಆರ್‌ಪಿಸಿ'ಯ 319 ನೇ ಪ್ರಕರಣದಡಿ ಮುಂದುವರೆಯಲು ನ್ಯಾಯಾಲಯದ ಅಧಿಕಾರಗಳನ್ನು ವಿವಾದಿಸಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ.ನಿಜವಾದ ಅಪರಾಧಿಯು ಶಿಕ್ಷೆಗೊಳಪಡದೆ ತಪ್ಪಿಸಿಕೊಳ್ಳಬಾರದೆಂಬ ಉದ್ದೇಶವನ್ನು ಸಾಧಿಸಲೆಂದೇ ಈ ಉಪಬಂಧವನ್ನು ಮಾಡಲಾಗಿದೆ ಮತ್ತು ಹರದೀಪ್ಸಿಂಗ್ -ವಿರುದ್ಧ-ಪಂಜಾಬ್ ರಾಜ್ಯ ಹಾಗೂ ಇತರರು ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಚ ಪೀಠದ ತೀರ್ಪನ್ನು ಸಹ ನನ್ನ ಗಮನಕ್ಕೆ ತಂದಿದ್ದಾರೆ. 'ಸಿಆರ್‌ಪಿಸಿ'ಯ 319 ನೇ ಪ್ರಕರಣದ ವ್ಯಾಪ್ತಿಗೆ ಸಂಬಂಧಿಸಿದಂತೆ, ಸದರಿ ತೀರ್ಪಿನ ಸುಸಂಬದ್ಧವಾದ 8 ನೇ ಕಂಡಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ ಮತ್ತು ಅಷ್ಟೇ ಅಲ್ಲದೆ, ' ಸಿಆರ್‌ಪಿಸಿ'ಯ 319 ನೇ ಪ್ರಕರಣದ ವ್ಯಾಪ್ತಿಗೆ ಸಂಬಂಧಿಸಿ, ತೀರ್ಪಿನ 12 ನೇ ಕಂಡಿಕೆಯನ್ನು ನನ್ನ naint Joan, uw doctrine judex damnatur cum nocens absolvilur (ತಪ್ಪಿತಸ್ಥರನ್ನು ನಿರಪರಾಧಿಯೆಂದು ನಿರ್ಣಯಿಸಿದಾಗ ನ್ಯಾಯಾಧೀಶರನ್ನು ದೂಷಿಸಲಾಗಿದೆ) ಎಂಬ ಸಿದ್ಧಾಂತದಿಂದ ಹೊರಹೊಮ್ಮುತ್ತದೆ ಮತ್ತು ಈ ಸಿದ್ಧಾಂತವನ್ನು ಸಿಆರ್‌ಪಿಸಿ'ಯ 319 ನೇ ಪ್ರಕರಣದ ಅಧಿನಿಯಮಿತಿಯು ಒಳಗೊಂಡಿರುವ ವಲಯ ಹಾಗೂ ಭಾವವನ್ನು ವಿವರಿಸುವಾಗ ದೀಪಸ್ತಂಭದಂತೆ ಬಳಸಬೇಕಾಗುತ್ತದೆ ಹಾಗೂ ನಿಜವಾದ ಅಪರಾಧಿಯನ್ನು ಶಿಕ್ಷಿಸುವ ಮೂಲಕ ನ್ಯಾಯವನ್ನು ಮಾಡುವುದು ನ್ಯಾಯಾಲಯದ ಕರ್ತವ್ಯವಾಗಿದೆ.ತನಿಖಾ ಏಜೆನ್ಸಿಯು ಯಾವುದೇ ಕಾರಣಕ್ಕಾಗಿ ನಿಜವಾದ ಅಪರಾಧಿಗಳಲ್ಲಿ ಒಬ್ಬರನ್ನು ಆಪಾದಿತನೆಂದು ಬಿಂಬಿಸದಿದ್ದಲ್ಲಿ, ಸದರಿ ಆಪಾದಿತನನ್ನು ಅಧಿವಿಚಾರಣೆ ಎದುರಿಸಲು ಕರೆಯುವಲ್ಲಿ ನ್ಯಾಯಾಲಯವು ಅಧಿಕಾರ ರಹಿತವಾದುದೇನಲ್ಲ.

51. ವಕೀಲರು ಸುಜಾತಾ ರವಿಕಿರಣ್ ಅಲಿಯಾಸ್ ಸುಜಾತಾ ಸಾಹು -ವಿರುದ್ಧ ಕೇರಳ ರಾಜ್ಯ ಮತ್ತು ಇತರರು - (2016) 7 ಎಸ್‌ಎಸ್ 597, ಪ್ರಕರಣದ ತೀರ್ಪಿನ ಮೇಲೆಯೂ ಸಹ ಅವಲಂಬಿತರಾಗಿದ್ದಾರೆ ಮತ್ತು ಆ ತೀರ್ಪನ್ನು ಉಲ್ಲೇಖಿಸಿ, 9 ನೇ ಕಂಡಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ ಹಾಗೂ ಒಂದು ಪ್ರಕರಣದಲ್ಲಿ ತನಿಖೆ ನಡೆಸಲು ಸಿಬಿಐಗೆ ನಿರ್ದೇಶಿಸುವಲ್ಲಿ ಸಂವಿಧಾನಾತ್ಮಕ ನ್ಯಾಯಾಲಯಗಳ ಅಸಾಧಾರಣವಾದ ಅಧಿಕಾರವನ್ನು ಅಸಾಧಾರಣವಾದ ಸಂದರ್ಭಗಳಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ, ತನಿಖಾ ಏಜೆನ್ಸಿಯಲ್ಲಿ ನಂಬಿಕೆ ಕಳೆದುಕೊಂಡಾಗ ಅಥವಾ ದೇಶದ ಹಿತಾಸಕ್ತಿಯಲ್ಲಿ ಹಾಗೂ ಆ ವಿಷಯದಲ್ಲಿ ಸಂಪೂರ್ಣ ನ್ಯಾಯ ಮಾಡುವುದಕ್ಕಾಗಿ ಅಪರೂಪವಾಗಿ ಚಲಾಯಿಸಬೇಕು ಎಂಬುದು ಸುಸ್ಥಾಪಿತವಾಗಿದೆಯೆಂದು ವಾದಿಸಿದ್ದಾರೆ.ಪಶ್ಚಿಮ ಬಂಗಾಳ ರಾಜ್ಯ -ವಿರುದ್ಧ ಪ್ರಜಾಪ್ರಭುತ್ವದ ಹಕ್ಕುಗಳ ಸಂರಕ್ಷಣಾ ಸಮಿತಿ ಪ್ರಕರಣದಲ್ಲಿ ಸಂವಿಧಾನ ಪೀಠದಲ್ಲಿ ತೀರ್ಮಾನಿಸಲಾದ ನಿಯಮಗಳನ್ನು ಸಹ ಅವರು ನನ್ನ ಗಮನಕ್ಕೆ ತಂದಿದ್ದಾರೆ ಮತ್ತು ತೀರ್ಪಿನ 69 ನೇ, 70 ನೇ ಹಾಗೂ 71 ನೇ ಕಂಡಿಕೆಗಳನ್ನು ಗಮನಕ್ಕೆ ತಂದಿದ್ದಾರೆ.

52. ವಕೀಲರು ಪಶ್ಚಿಮ ಬಂಗಾಳ ರಾಜ್ಯ ಮತ್ತು ಇತರರು -ವಿರುದ್ಧ ಪಶ್ಚಿಮ ಬಂಗಾಳದ ಪ್ರಜಾಪ್ರಭುತ್ವದ ಹಕ್ಕುಗಳ ಸಂರಕ್ಷಣಾ ಸಮಿತಿ ಹಾಗೂ ಇತರರು - (2010) 3 ಎಸ್ಸಿಸಿ 571, ರಾಜ್ಯ ಸರ್ಕಾರದ ಒಪ್ಪಿಗೆಯಿಲ್ಲದೆ ರಾಜ್ಯದಲ್ಲಿ ಸಂಜ್ಞೇಯವಾದ ಅಪರಾಧವನ್ನು ತನಿಖೆ ಮಾಡಲು ಉಚ್ಚ ನ್ಯಾಯಾಲಯದ 226 ನೇ ಅನುಚ್ಛೇದದಡಿ ಅಥವಾ ಸರ್ವೋಚ್ಚ ನ್ಯಾಯಾಲಯದ -32 ನೇ ಅನುಚ್ಛೇದದಡಿ ನೇರವಾಗಿ ಸಿಬಿಐಗೆ ನಿರ್ದೇಶಿಸಲು ಸಂಬಂಧಿಸಿದಂತೆ 32, 226, 21 ಹಾಗೂ ಭಾಗ-III ಕ್ಕೆ ಸಂಬಂಧಿಸಿದಂತೆ ತೀರ್ಪಿನ ಮೇಲೆ ಸಹ ಅವಲಂಬಿತರಾಗಿದ್ದಾರೆ ಮತ್ತು ಈ ಸಂವಿಧಾನಾತ್ಮಕ ಅಧಿಕಾರಗಳನ್ನು ಚಲಾಯಿಸುವಲ್ಲಿ ಕೆಲವು ಸ್ವಯಂ ವಿಧಿಸಿಕೊಂಡ ಪರಿಮಿತಿಗಳನ್ನು ನ್ಯಾಯಾಲಯಗಳು ಗಮನದಲ್ಲಿಟ್ಟುಕೊಂಡಿರಬೇಕೆಂಬ, ತೀರ್ಪಿನ 70 ನೇ ಕಂಡಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ.ಸದರಿ ಅನುಚ್ಛೇದಗಳ ಮೇರೆಗಿನ ಅಧಿಕಾರದ ಸಂಪೂರ್ಣತೆಯೇ ಅದನ್ನು ಚಲಾಯಿಸುವಲ್ಲಿ ಅತ್ಯಂತಎಚ್ಚರಿಕೆಯನ್ನು ಅಗತ್ಯಪಡಿಸುತ್ತದೆ.ಒಂದು ಪ್ರಕರಣದಲ್ಲಿ ತನಿಖೆ ನಡೆಸಲು ಸಿಬಿಐಗೆ ನಿರ್ದೇಶನ ನೀಡುವ ಪ್ರಶ್ನೆಗೆ ಸಂಬಂಧಪಡುವಷ್ಟರಮಟ್ಟಿಗೆ, ಅಂಥ ಅಧಿಕಾರವನ್ನು ಚಲಾಯಿಸತಕ್ಕದ್ದೆ?ಅಥವಾ ಅಲ್ಲವೆ?ಎಂಬುದನ್ನು ನಿರ್ಧರಿಸಲು ಸಡಿಲಿಸಲಾಗದ ಮಾರ್ಗಸೂಚಿಗಳನ್ನು

ವಿಧಿಸಿರದಿದ್ದರೂ, ಅನೇಕ ಸಂದರ್ಭಗಳಲ್ಲಿ ದೈನಂದಿನ ವಿಷಯವಾಗಿ ಅಥವಾ ಪಕ್ಷಕಾರನು ಸ್ಥಳೀಯ ಪೊಲೀಸರ ವಿರುದ್ಧ ಕೆಲವು ಆಪಾದನೆಗಳನ್ನು ತಿರುಗಿಸಿದ ಕಾರಣ ಮಾತ್ರಕ್ಕೆ ಅಂಥ ಆದೇಶವನ್ನು ಹೊರಡಿಸಕೂಡದು ಎಂಬುದನ್ನು ಹಲವು ಸಂದರ್ಭಗಳಲ್ಲಿ ಪುನರುಚ್ಚರಿಸಲಾಗಿದೆ.ಈ ಅಸಾಧಾರಣವಾದ ಅಧಿಕಾರವನ್ನು ತನಿಖೆಗಳಲ್ಲಿ ವಿಶ್ವಾಸಾರ್ಹತೆಯನ್ನು ಒದಗಿಸಲು ಮತ್ತು ಗಾಢ ನಂಬಿಕೆಯನ್ನು ತುಂಬಲು ಅಗತ್ಯವಾಗುವ ಕಡೆಯಲ್ಲಿ ಮಿತವಾಗಿ, ಎಚ್ಚರಿಕೆಯಿಂದ ಹಾಗೂ ಅಸಾಧಾರಣ ಸನ್ನಿವೇಶಗಳಲ್ಲಿ ಚಲಾಯಿಸಬೇಕು.

53. ವಕೀಲರು ಪಂಜಾಬ್‌ರಾಜ್ಯ ವಿರುದ್ಧ ದಾವಿಂದರ್ ಪಾಲ್ ಸಿಂಗ್ ಭುಲ್ಲಾರ್ ಹಾಗೂ ಇತರರು ಪ್ರಕರಣದ ತೀರ್ಪಿನ ಮೇಲೂ ಸಹ ಅವಲಂಬಿತರಾಗಿದ್ದಾರೆ ಮತ್ತು ತೀರ್ಪಿನ 75 ನೇ ಕಂಡಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ ಹಾಗೂ ನ್ಯಾಯಾಲಯವು ದೂರಿನಲ್ಲಿ ಆಪಾದನೆಗಳನ್ನು ಪರಿಶೀಲಿಸಿದ ನಂತರ ದೂರುದಾರನು ಆಪಾದಿತನ ವಿರುದ್ಧ ಮೇಲ್ನೋಟಕ್ಕೆ ಕಂಡುಬರುವಂತೆ ಪ್ರಕರಣ ದಾಖಲಿಸಿರಬಹುದೆಂಬ ತೀರ್ಮಾನಕ್ಕೆ ಬಂದ ಹೊರತು ಆ ಪ್ರಕರಣದ ತನಿಖೆ ನಡೆಸಲು ಸಂವಿಧಾನಾತ್ಮಕ ನ್ಯಾಯಾಲಯವು ' ಸಿಬಿಐ'ಗೆ ನಿರ್ದೇಶಿಸಬಲ್ಲುದು ಎಂಬುದು ಸ್ಪಷ್ಟವಾಗಿದೆಯೆಂದು ಈ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ತೀರ್ಮಾನಿಸಿದೆ.ಹಾಗಿದ್ದರೂ, ಚ ಯಾವ ವ್ಯಕ್ತಿಯ ವಿರುದ್ಧ ತನಿಖೆ ನಡೆಸಲು ಕೋರಲಾಗಿದೆಯೋ ಆ ವ್ಯಕ್ತಿಯನ್ನು ಪಕ್ಷಕಾರನನ್ನಾಗಿ ಸೇರಿಸಿಕೊಳ್ಳಬೇಕಾಗುತ್ತದೆ ಮತ್ತು ಸುನಾವಣೆ ಮಾಡುವ ಸಕಾರಣವಾದ ಅವಕಾಶವನ್ನು ನೀಡಬೇಕಿರುತ್ತದೆ.ಒಬ್ಬ ವ್ಯಕ್ತಿಯು ಆಪಾದಿಸಲಾದ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದನೆ?ಎಂಬುದಕ್ಕೆ ಸಂಬಂಧಿಸಿ, ಸಂಚಾರಿ ವಿಚಾರಣೆಯನ್ನು ಮಾಡುವಂತೆ ಸಿಬಿಐ'ಗೆ ನಿರ್ದೇಶಿಸಲಾಗದು.ಒಬ್ಬ ವ್ಯಕ್ತಿಯ ವಿರುದ್ಧ ಆಪಾದನೆಯಿದ್ದು, ಅವನ ಹುದ್ದೆಯ ಕಾರಣದಿಂದಾಗಿ ತನಿಖೆಯ ಮೇಲೆ ಪ್ರಭಾವವನ್ನು ಬೀರಬಹುದು ಮತ್ತು ದೂರುದಾರರ ವ್ಯಾಜ್ಯವನ್ನು ಬಾಧಿಸಬಹುದು, ಮತ್ತು ನ್ಯಾಯವನ್ನು ಪೂರ್ಣಗೊಳಿಸುವ ಹಾಗೂ ತನಿಖೆಯನ್ನು ವಿಶ್ವಾಸಾರ್ಹಗೊಳಿಸುವ ದೃಷ್ಟಿಯಿಂದ ಹಾಗೆ ಮಾಡುವ ಅಗತ್ಯವಿದೆ ಎಂಬ ಅಭಿಪ್ರಾಯವನ್ನು ನ್ಯಾಯಾಲಯವು ಹೊಂದಿದ್ದಲ್ಲಿ, ಅಸಾಧಾರಣವಾದ ಸನ್ನಿವೇಶಗಳಲ್ಲಿ ಮಾತ್ರ ನ್ಯಾಯಾಲಯವು ಸಿಬಿಐ ತನಿಖೆಗೆ ನಿರ್ದೇಶಿಸಬಹುದು.

54. ವಕೀಲರು ತಮ್ಮ ವಾದಗಳಲ್ಲಿ ಮೇಲ್ಕಂಡ ತೀರ್ಪುಗಳ ಮೇಲೆ ಅವಲಂಬಿತರಾಗಿದ್ದು, ವಿಷಯವನ್ನು ಸಿಬಿಐಗೆ ಕಳುಹಿಸುವಿಕೆಯನ್ನು ಮಿತವಾಗಿ ಮತ್ತು ಅಸಾಧಾರಣ ಸನ್ನಿವೇಶಗಳಲ್ಲಿ ಮಾತ್ರ ಬಳಸಬೇಕಿದ್ದು, ಅದರ ಸಂವಿಧಾನಾತ್ಮಕ ಅಧಿಕಾರವನ್ನು ತನಿಖೆಯ ವಿಶ್ವಾರ್ಹತೆಯನ್ನು ಸಾಬೀತುಗೊಳಿಸುವ ದೃಷ್ಟಿಯಿಂದ ಮಾತ್ರ ಚಲಾಯಿಸಬೇಕೇ ಹೊರತು ದೂರಿನಲ್ಲಿ ಮಾಡಲಾದ ಆಪಾದನೆಯಿಂದ ಮಾತ್ರವಲ್ಲ ಮತ್ತು ಆಪಾದನೆಯಲ್ಲಿ ಹುರುಳಿದ್ದ ಹೊರತು ಯಾವ ನ್ಯಾಯಾಲಯವೂ ಸಿಬಿಐ ತನಿಖೆಗೆ ಆದೇಶಿಸಲಾಗದು ಹಾಗೂ ಈ ಕಾರಣದಿಂದ, ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸಲು ಈ ನ್ಯಾಯಾಲಯವನ್ನು ಕೋರಲಾಗಿದೆಯೆಂದು ತೀವ್ರವಾಗಿ ವಾದಿಸಿದ್ದಾರೆ.

55. ಅರ್ಜಿದಾರರ ವಕೀಲರ ಹಾಗೂ ಎದುರುದಾರರ ವಕೀಲರ ವಾದಗಳನ್ನು ಆಲಿಸಿದ ನಂತರ, ಅರ್ಜಿದಾರರು ಕೋರಿದಂತೆ ತನಿಖೆಯನ್ನು ಸಿಬಿಐಗೆ ವಹಿಸಿ, ಭಾರತದ ಸಂವಿಧಾನದ 226 ಮತ್ತು 227 ನೇ ಅನುಚ್ಛೇದಗಳ ಅನ್ವಯ ರಿಟ್ ಅಧಿಕಾರವ್ಯಾಪ್ತಿಯನ್ನು ಈ ನ್ಯಾಯಾಲಯವು ಚಲಾಯಿಸಬಹುದೆ?ಎಂಬುದನ್ನು ಈ ನ್ಯಾಯಾಲಯವು ಪರಿಶೀಲಿಸಬೇಕಿದೆ.

56. ಅರ್ಜಿದಾರರ ವಕೀಲರು ಹಾಗೂ ಎದುರುದಾರರ ವಕೀಲರು ಮಂಡಿಸಿದ ವಾದಗಳನ್ನು ಪರಿಶೀಲಿಸಲಾಗಿದ್ದು ಮತ್ತು ರಿಟ್ ಅಧಿಕಾರ ವ್ಯಾಪ್ತಿಯ ಅನ್ವಯ ಪರಿಹಾರವನ್ನು ಅರ್ಜಿಗಳಲ್ಲಿ ಕೋರಲಾಗಿದ್ದು ಮತ್ತು ತನಿಖೆಯನ್ನು ' ಸಿಬಿಐ'ಗೆ ವಹಿಸಲು ಈ ನ್ಯಾಯಾಲಯವನ್ನು ಕೋರಿದ್ದು, ಇದರಲ್ಲಿ ಪಕ್ಷಕಾರರಿಂದ ಉಲ್ಲೇಖಿಸಲಾದ ತೀರ್ಪುಗಳಲ್ಲಿ ವಿಧಿಸಲಾದ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು, ಕೋರಲಾದಂತೆ ಪರಿಹಾರವನ್ನು ನೀಡುವ ದೃಷ್ಟಿಯಿಂದ ಯಾವುದೇ ಹುರುಳಿದೆಯೆ?ಎಂಬುದನ್ನು ಈ ನ್ಯಾಯಾಲಯವು ಪರಿಶೀಲಿಸಬೇಕಿದೆ.

57. ಈಗ ನಾನು ಸಂಕ್ಷಿಪ್ತವಾಗಿ ಹೇಳಲು ಇಚ್ಛಿಸುವುದೇನೆಂದರೆ, ಯೋಗೇಶ್ ಗೌಡ ಗೌಡರ್ನ ಕೊಲೆಯ ತನಿಖೆ ನಡೆಸಲು ಮತ್ತು ವರದಿಯನ್ನು ಸಲ್ಲಿಸಲು ಹಾಗೂ ಕಾನೂನಿಗೆ ಅನುಸಾರವಾಗಿ ಕ್ರಮ ಕೈಗೊಳ್ಳಲು ಹಾಗೂ ಯೋಗೇಶ್ ಗೌಡ ಗೌಡರ್ನ ಕೊಲೆಯ ಒಳಸಂಚಿನಲ್ಲಿ ಎದುರುದಾರ ವಿನಯ್ ಕುಲಕರ್ಣಿಯನ್ನು ಹಾಗೂ

ಇತರ ಅಪರಾಧಿಗಳನ್ನು ಕಾಪಾಡಿದ ಎಲ್ಲಾ ತಪ್ಪಿತಸ್ಥ ಪೊಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು 4 ಮತ್ತು 5 ನೇ ಎದುರುದಾರರಿಗೆ ನಿರ್ದೇಶಿಸುವ ರಿಟ್ ಮ್ಯಾಂಡಮಸ್ ನೀಡಲು ಹಾಗೂ ಅಂಥ ಇತರ ಪರಿಹಾರವನ್ನು ನೀಡಲು ಎದುರುದಾರ-ಕೇಂದ್ರ ತನಿಖಾ ಸಂಸ್ಥೆಗೆ ನಿರ್ದೇಶಿಸಿ ಮ್ಯಾಂಡಮಸ್ನ ಸ್ವರೂಪದಲ್ಲಿ ರಿಟ್ ಆದೇಶವನ್ನು ಕೋರಿ ಅರ್ಜಿಗಳಲ್ಲಿ ಆಧಾರಗಳ ತಿರುಳನ್ನು ಮಂಡಿಸಿದ್ದಾರೆ.ಅರ್ಜಿಗಳಲ್ಲಿ ಮಂಡಿಸಿದ ಆಧಾರಗಳ ಸಾರವು ಈ ಮುಂದಿನಂತಿವೆ:

1. ಮೃತ ವ್ಯಕ್ತಿ ಮತ್ತು ಈ ಅರ್ಜಿಯಲ್ಲಿ 10 ನೇ ಎದುರುದಾರನನ್ನಾಗಿ ಮಾಡಲಾಗಿರುವ ಮಾಜಿ ಸಚಿವ ವಿನಯ್ ಕುಲಕರ್ಣಿ ಇಬ್ಬರೂ ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದವರೆಂದು ಮತ್ತು ವಿವಿಧ ರಾಷ್ಟ್ರೀಯ ಪಕ್ಷಗಳಿಗೆ ಸೇರಿದವರೆಂದು ವಾದಿಸಿದ್ದು, ಆ ಇಬ್ಬರ ನಡುವಿನ ರಾಜಕೀಯ ದ್ವೇಷ.

2. ಆಪಾದಿತ ವ್ಯಕ್ತಿಗಳು ಮತ್ತು ಸ್ವತ್ತುಗಳ ಮಾಲೀಕರ ನಡುವೆ ಆದ ಮಾರಾಟ ಒಪ್ಪಂದ ಹಾಗೂ ಸದರಿ ವ್ಯವಹಾರಕ್ಕೆ ಸ ಂ ಬ ಂ ಧಿಸಿದ ಂ ತೆ ಗಮನಾರ್ಹ ಅ ಂ ಶದ ಮೂಲವನ್ನು ತನಿಖಾಧಿಕಾರಿಯು ತನಿಖೆ ಮಾಡದಿರುವುದು.

3. ಕೊಲೆಯಾಗುವ ಎರಡು ದಿನಗಳ ಮುಂಚೆ ಮೃತ ವ್ಯಕ್ತಿಯ ವಿಳಾಸಕ್ಕೆ ಬಂದ ಪತ್ರ ಮತ್ತು ಸದರಿ ಪತ್ರದಲ್ಲಿ 10 ನೇ ಎದುರುದಾರನ ಹೆಸರು ನಮೂದಾಗಿದ್ದದ್ದು ಹಾಗೂ ಅದು ಅನಾಮಧೇಯ ವ್ಯಕ್ತಿಯಿಂದ ಬಂದದ್ದು.

4. ಘಟನೆ ನಡೆದ ಕಟ್ಟಡದ ಸಿಸಿಟಿವಿ ಫೂಟೇಜನ್ನು ಸಂಗ್ರಹಿಸಿಲ್ಲದೆ ಮತ್ತು ಪಕ್ಕದ ಕಟ್ಟಡದ ಸಿಸಿಟಿವಿ ಫಟೇಜನ್ನು ಮಾತ್ರ ಸಂಗ್ರಹಿಸಿರುವುದು.

5. ಕೆಸಿಡಿ ವೃತ್ತದಿಂದ ಸಪ್ತಾಪುರ ವೃತ್ತದ ಕಡೆಕಪ್ಪು ಬಣ್ಣದ ಆಕ್ಸೆಂಟ್ ಾರು ಬರುತ್ತಿದ್ದುದು ಮತ್ತು ಸದರಿಕಾರು ಪುನಃ ಸದರಿ ವೃತ್ತಕ್ಕೆ ಹಿಂತಿರುಗಿ ಬಂದದ್ದು ಮತ್ತು ಆಪಾದಿತ ವ್ಯಕ್ತಿಗಳು ಸನ್ನೆ ಮಾಡುತ್ತಿದ್ದುದು ಹಾಗೂ ವಿಕಾಸ್ ನಗರದ ನಿವಾಸಿಗಳು ಘಟನೆ ನಡೆದ ಸ್ಥಳದ ಸಮೀಪದಲ್ಲಿದ್ದ ಯಾರೂ ಇಲ್ಲದ ಕಪ್ಪು ಬಣ್ಣದ ಕಾರಿನ ಬಗ್ಗೆ ಮಾಹಿತಿ ನೀಡಿದ್ದು.

6. ಸದರಿ ಕೊಲೆಯು ಭೂ ವಿವಾದದಿಂದ ಉಂಟಾಗಿದೆಯೆಂದು ಹೇಳಿ, ಸದರಿ ಕೊಲೆ ನಡೆದ ಒಂದು ಗಂಟೆ ಒಳಗಾಗಿ ಗೃಹ ಸಚಿವರು ಹೇಳಿಕೆ ನೀಡಿರುವುದು ಹಾಗೂ ಆಪಾದಿತ ವ್ಯಕ್ತಿಗಳನ್ನು ಘಟನೆಯಾದ ಎರಡು ದಿನಗಳ ನಂತರ ಬಂಧಿಸಿರುವುದು.

7. ಅಪರಾಧವನ್ನೆಸಗುವಲ್ಲಿ ಆ ವ್ಯಕ್ತಿಗಳು ಭಾಗಿಯಾಗಿರುವ ಬಗ್ಗೆ ಮತ್ತುದಿನಾಂಕ: 09-11-2016ರಂದು ಕಾರಿನಲ್ಲಿ ಇದ್ದವರ ಬಗ್ಗೆ ೧ ಮೃತನ ಪತ್ನಿಯು ಪೊಲೀಸ್ ಕಮೀಷನರ್ಗೆ ಮನವಿ ನೀಡಿರುವುದು ಹಾಗೂ 17-02-2017ರ ದಿನಾಂಕದ ಮನವಿಯ ಪ್ರಕಾರ ತನಿಖೆಯನ್ನು ಹೊಸದಾಗಿ ನಡೆಸಲು ಮುಖ್ಯಮಂತ್ರಿಗೆ ಮನವಿ ಕೊಟ್ಟಿರುವುದು.

8. ಪಿ.ಡಬ್ಲ್ಯು .1 ಹೇಳಿಕೆಯಂತೆ ಸಾಕ್ಷ್ಯವನ್ನು ಸರಿಯಾಗಿ ದಾಖಲಿಸದಿರುವಲ್ಲಿ ಪ್ರಿಸೈಡಿಂಗ್ ಅಧಿಕಾರಿಯ ಮನೋಭಾವ ಮತ್ತು ಅನಾಮಧೇಯ ಪತ್ರವನ್ನು ಗುರುತು ಮಾಡಲು ನಿರಾಕರಿಸಿದ್ದು ಹಾಗೂ ಮಾನ್ಯ ಸರ್ಕಾರಿ ವಕೀಲರ ಒತ್ತಾಯದಿಂದ ಪ್ರಿಸೈಡಿಂಗ್ ಅಧಿಕಾರಿಯು ಅದನ್ನು ಗುರುತಿಸಿದ್ದು.

9 ಆಪಾದಿತ ವ್ಯಕ್ತಿಗಳ ಪರವಾಗಿ ಸುಳ್ಳು ಸಾಕ್ಷ್ಯ ಎ ನೀಡುವಂತೆ ಸಾಕ್ಷಿದಾರರಿಗೆ ಪೊಲೀಸ್ ಅಧಿಕಾರಿಗಳು ಬೆದರಿಕೆ ಹಾಕಿದ್ದು ಮತ್ತು ಸಿ.ಡಬ್ಲ್ಯು .19 ನ್ನು 10 ನೇ ಎದುರುದಾರನ ಬಳಿಗೆ ಕರೆದೊಯ್ದದ್ದು ಹಾಗೂ 10 ನೇ ಎದುರುದಾರನು ಆಪಾದಿತ ವ್ಯಕ್ತಿಗಳ ಪರವಾಗಿ ಸಾಕ್ಷ್ಯ ಲ್ಯು ನೀಡುವಂತೆ ಬೆದರಿಕೆ ಹಾಕಿದ್ದು.

58. ನಿಜವಾದ ಅಪರಾಧಿಯನ್ನು ಕಾಪಾಡುವ ಸಲುವಾಗಿ ಪೊಲೀಸರಿಂದ ಸುಳ್ಳು ತನಿಖೆ ನಡೆಸಲಾಗಿದೆ ಮತ್ತು ಮೃತನು ರಾಜ್ಯ ಸರ್ಕಾರದ ಮಾಜಿ ಸಚಿವನಾಗಿದ್ದು, ಅವನನ್ನು ಹತ್ಯೆ ಮಾಡುವ ಕೃತ್ಯದಲ್ಲಿ 10 ನೇ ಎದುರುದಾರನ ಕೈವಾಡವಿದೆಯೆಂಬ ಆಧಾರದ ಮೇಲೆ ಈ ವಿಷಯವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಅರ್ಜಿದಾರರು ಈ ಎಲ್ಲಾ ಕಾರಣಗಳನ್ನು ನೀಡಿ, ಈ ನ್ಯಾಯಾಲಯವನ್ನು ಕೋರಿದ್ದಾರೆ.ಈ ಎಲ್ಲಾ ಅಂಶಗಳು ತನಿಖೆಯನ್ನು ಸರಿಯಾಗಿ ನಡೆಸಿಲ್ಲವೆಂದು ಮತ್ತು ನಿಜವಾದ ಅಪರಾಧಿಯನ್ನು ಕಾಪಾಡುವ ಉದ್ದೇಶದಿಂದ

ಅದನ್ನು ಮಾಡಲಾಗಿದೆ ಎಂಬುದನ್ನು ತೋರಿಸುತ್ತವೆ ಮತ್ತು ತಪ್ಪಿತಸ್ಥರನ್ನು ಶಿಕ್ಷಿಸುವ ದೃಷ್ಟಿಯಿಂದ ನ್ಯಾಯಯುತವಾಗಿ ತನಿಖೆಯಾಗಬೇಕು ಹಾಗೂ ಅದನ್ನು ಮಾಡಿರುವುದಿಲ್ಲ.

59. ಈ ನ್ಯಾಯಾಲಯವು ಅರ್ಜಿಗಳಲ್ಲಿ ಮಂಡಿಸಲಾದ ಆಧಾರಗಳನ್ನು ಪರಿಗಣಿಸಲಿ ಮತ್ತು ಅರ್ಜಿಗಳಲ್ಲಿ ಮಂಡಿಸಲಾದ ಆಧಾರಗಳನ್ನು ಪರಿಗಣಿಸುವುದಕ್ಕೆ ಮುಂಚೆ ಈ ವಿಷಯವನ್ನು ಸಿಬಿಐ ತನಿಖೆಗೆ ಒಪ್ಪಿಸುವ ಸಂಬಂಧ, ತೀರ್ಪುಗಳಲ್ಲಿ ವಿಧಿಸಲಾದ ನಿಯಮಗಳನ್ನು ನಾನು ಉಲ್ಲೇಖಿಸಬಯಸುತ್ತೇನೆ.ಇ. ಶಿವಕುಮಾರ್ ವಿರುದ್ಧ ಯೂನಿಯನ್ ಆಫ್‌ಇಂಡಿಯಾ ಮತ್ತು ಇತರರು - ಎಐಆರ್ 2018 ಎಸ್ಸಿ 2486, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ, ಪ್ರಥಮ ಮಾಹಿತಿ ವರದಿಯಲ್ಲಿ ಆಪಾದಿತನೆಂದು ಹೆಸರಿಸಲಾದ, ಹಾಗಿಲ್ಲದಿದ್ದಲ್ಲಿ ತನಿಖಾ ಹಂತದಲ್ಲಿ ಸುನಾವಣೆಯ ಹಕ್ಕನ್ನು ಹೊಂದಿರದ ಅಥವಾ ಸಹಜವಾಗಿ ಸುನಾವಣೆಯ ಅವಕಾಶ ಹೊಂದಿರುವ ವ್ಯಕ್ತಿಯನ್ನು, ತನಿಖೆಗಾಗಿ ಸಿಬಿಐಗೆ ವರ್ಗಾಯಿಸಲು ನೀಡಿದ ನಿರ್ದೇಶನವು ಕಾನೂನು ಬಲವಿಲ್ಲದ್ದಾಗಿದೆಯೆಂದು ಹೇಳಲು ಸುನಾವಣೆ ಮಾಡಲಾಗದು ಹಾಗೂ ಈ ಕಾರಣದಿಂದ, ತನಿಖಾ ಹಂತದಲ್ಲಿನ ವ್ಯವಹರಣೆಗಳಲ್ಲಿ ತೋರಿಸಲಾದಂತೆ ಅಂಥ ಆಪಾದಿತನನ್ನು ಸುನಾವಣೆ ಮಾಡುವ ಅಗತ್ಯವಿಲ್ಲವೆಂದು ಸ್ಪಷ್ಟವಾಗಿದೆ.

60. ಸರ್ವೋಚ್ಚ ನ್ಯಾಯಾಲಯವು, ಮಿಥಿಲೇಶ್ ಕುಮಾರ್ ಸಿಂಗ್ ಮತ್ತು ಇತರರು -ವಿರುದ್ಧ ರಾಜಸ್ಥಾನ ರಾಜ್ಯ ಹಾಗೂ ಇತರರು ಪ್ರಕರಣದಲ್ಲಿ ಸಿಬಿಐಗೆ ವಿಷಯವನ್ನು ಒಪ್ಪಿಸುವಾಗ ಅಥವಾ ರಾಜ್ಯ ಪೊಲೀಸರು ನಡೆಸಿದ ತನಿಖೆಯು ವಿಶ್ವಾಸವನ್ನು ಮೂಡಿಸದಿದ್ದಾಗ ನ್ಯಾಯಾಲಯವು ಈ ಮುಂದಿನ ಸೂಕ್ತ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳ ಬೇಕಿದೆಯೆಂದು ತೀರ್ಮಾನಿಸಿದೆ:( ಎ) ಬಾಧಿತ ವ್ಯಕ್ತಿಗಳ ಅಥವಾ ಅವರ ಸಮೀಪದ ರಕ್ತ ಸಂಬಂಧಿಗಳ ಸೂಕ್ಷ್ಮ ಎ್ರ ಭಾವನೆ (ಬಿ) ಜೀವ ಹಾನಿಯಂಥ ವಿಷಯಗಳ ಸೂಕ್ಷ್ಮತೆ (ಸಿ) ಕೀಳುಮಟ್ಟದ ಮತ್ತು ಪಕ್ಷಪಾತದಿಂದ ಕೂಡಿದ ತನಿಖೆ ಇತ್ಯಾದಿ ಮತ್ತು ಸತ್ಯವನ್ನು ಕಂಡುಹಿಡಿಯುವುದು ಅಂತಿಮ ಉದ್ದೇಶವಾಗಿದೆ ಮತ್ತು ಇದನ್ನು ಸ್ವತಂತ್ರ ಏಜೆನ್ಸಿಯಿಂದ ಮಾಡಿಸುವುದು ಬಹಳ ಉತ್ತಮ ಎಂದು ನಿರ್ಧರಿಸಿದೆ ಮತ್ತು ಅಷ್ಟೇ ಅಲ್ಲದೆ, ಅನುಚಿತವಾದ ತನಿಖೆಯು, ನ್ಯಾಯೋಚಿತ ಅಧಿವಿಚಾರಣೆಯನ್ನು ಬಾಧಿಸುತ್ತದೆ, ಪಕ್ಷಕಾರನು ತನಿಖೆದಾರನನ್ನು, ನೀಡಲಾದ ನಿರ್ಣಯಕ್ಕೆ ಬರುವಂತೆ ಕೋರಿದ ಮಾತ್ರಕ್ಕೆ ತನಿಖೆಯನ್ನು ಸುಮ್ಮನೆ ಆದೇಶಿಸಲಾಗದು ಎಂದು ಅಭಿಪ್ರಾಯಪಡಲಾಗಿದೆ ಮತ್ತು ಮುಂದುವರೆದು, ಇದರಲ್ಲಿ ಮುಖ್ಯವಾದುದೇನೆಂದರೆ, ಸತ್ಯವನ್ನು ಕಂಡುಹಿಡಿಯುವ ವಿಶ್ವಾಸಾರ್ಹತೆಯು, ನ್ಯಾಯಾಲಯವು ಅಪರೂಪವಾಗಿ, ಸಂಶಯಪಟ್ಟು ತನಿಖೆಯ ವರ್ಗಾವಣೆಗಾಗಿ ಸಿಬಿಐಗೆ ಕೋರಿದ್ದನ್ನು ಪ್ರಾರಂಭದಲ್ಲಿ ಎಂದಾದರೂ ಪರಿಶೀಲಿಸಿದ್ದಲ್ಲಿ, ಪರಿಹಾರವನ್ನು ನೀಡಲು ನ್ಯಾಯಾಲಯದ ಕಡೆಯಿಂದ ಯಾವುದೇ ಆಕ್ಷೇಪವಿಲ್ಲ ಎಂದು ಅಭಿಪ್ರಾಯಪಟ್ಟಿದೆ ಮತ್ತು ಮುಂದುವರೆದು, ಪೊಲೀಸರು ನಡೆಸಿದ ನ್ಯಾಯಸಮ್ಮತವಾದ ತನಿಖೆಯು ವಿಶ್ವಾಸ ಮೂಡಿಸದಿದ್ದಾಗ ಅಪರೂಪವಾಗಿ ಹಾಗೂ ಅಸಾಧಾರಣ ಸನ್ನಿವೇಶಗಳಲ್ಲಿ ಮಾತ್ರ ಸಿಬಿಐ ತನಿಖೆಗೆ ಅನುಮತಿಸಬಹುದು ಎಂದು ಅಭಿಪ್ರಾಯಪಟ್ಟಿದೆ.

61. ಮೇಲೆ ಉಲ್ಲೇಖಿಸಿರುವ ತೀರ್ಪುಗಳಲ್ಲಿ ವಿಧಿಸಲಾದ ನಿಯಮಗಳನ್ನು ಪರಿಶೀಲಿಸಲಾಗಿದ್ದು, ನ್ಯಾಯಸಮ್ಮತವಾದ ತನಿಖೆಯನ್ನು ನಡೆಸಿಲ್ಲವೆಂಬ ಆಪಾದನೆಯನ್ನು ಮಾಡುವುದು ಒಂದು ಕಾರಣವೂ ಅಲ್ಲ ಮತ್ತು ಅದನ್ನು ಸಂದೇಹಪಟ್ಟು ಸಿಬಿಐ ತನಿಖೆಗೆ ಒಪ್ಪಿಸುವುದು ಸಾಧ್ಯವೂ ಅಲ್ಲ ಮತ್ತು ಅಲ್ಲಿ ಸುಳ್ಳು ತನಿಖೆ ನಡೆದಿದೆಯೆಂಬುದಕ್ಕೆ ಮೇಲ್ನೋಟದ ಸಾಕ್ಷ್ಯಾಧಾರವಿರಲೇಬೇಕು ಹಾಗೂ ಅಲ್ಲಿ ಅಸಾಧಾರಣವಾದ ಸನ್ನಿವೇಶಗಳಿರಲೇಬೇಕು-ಎಂದರೆ, ಪೊಲೀಸರಿಂದ ನ್ಯಾಯಸಮ್ಮತವಾದ ತನಿಖೆಯಾಗಿದ್ದರೆ ಹಾಗೂ ಅದು ವಿಶ್ವಾಸವನ್ನು ಮೂಡಿಸಿದ್ದರೆ, ಆಗ ಮಾತ್ರ ವಿಷಯವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕಾಗುತ್ತದೆ ಎಂಬುದು ಸ್ಪಷ್ಟವಾಗಿದೆ.

62. ಹೇಮಾ -ವಿರುದ್ಧ– ರಾಜ್ಯ ಮದ್ರಾಸಿನ ಪೊಲೀಸ್ ಇನ್ಸ್‌ಪೆಕ್ಟರ್ ಮುಖಾಂತರ ಪ್ರಕರಣದ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವೂ ಸಹ ನ್ಯಾಯಸಮ್ಮತ ಚ ಅಧಿವಿಚಾರಣೆಯಷ್ಟೇ ಅಲ್ಲದೆ, ನ್ಯಾಯಸಮ್ಮತ ತನಿಖೆಯೂ ಸಹ ಭಾರತದ ಸಂವಿಧಾನದ ಅನುಚ್ಛೇದ 20 ಮತ್ತು 21 ಡಿ ಖಾತರಿ ಪಡಿಸಲಾದ ಸಂವಿಧಾನಾತ್ಮಕ ಹಕ್ಕುಗಳ ಒಂದು ಭಾಗವೂ ಆಗಿದೆ ಎಂದು ತೀರ್ಮಾನಿಸಿದೆ.ತನಿಖೆಯು ನ್ಯಾಯಸಮ್ಮತವಾಗಿ, ಪಾರದರ್ಶಕವಾಗಿ ಮತ್ತು ವಿವೇಕಯುತವಾಗಿ ಇರಬೇಕು ಹಾಗೂ ಇದು ಕಾನೂನಿನ ನಿಯಮದ ತಕ್ಷಣದ ಅಗತ್ಯತೆಯಾಗಿದೆ ಮತ್ತು ಈ ಮೇಲೆ ಉಲ್ಲೇಖಿಸಲಾದ ತೀರ್ಪಿನಲ್ಲಿನ ಈ ನಿಯಮವನ್ನು ಅನ್ವಯಿಸಿ, ಈ

ನ್ಯಾಯಾಲಯವು, ಸದ್ಯದ ಪ್ರಕರಣದಲ್ಲಿ ಸಿಬಿಐ ತನಿಖೆ ಅಗತ್ಯವಿದೆಯೆ?ಮತ್ತು ಆಧಾರದಲ್ಲಿ ವ್ಯಕ್ತಿಗಳ ವಿರುದ್ಧ ರಾಜಕೀಯ ದ್ವೇಷವಿದೆಯೆಂದು ಸಹ ಆರೋಪಿಸಿರುವುದರಿಂದಾಗಿ, ಪೂಜಾ ಪಾಲ್ -ವಿರುದ್ಧ-ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ನಿರ್ಧರಿಸಲಾದಂತೆ ತನಿಖೆಗೆ ಆದೇಶಿಸಲು ಅಸಾಧಾರಣವಾದ ಸನ್ನಿವೇಶಗಳಿರುವ ಪ್ರಕರಣ ಇದಾಗಿದೆಯೆ?ಮತ್ತು ಸಿಬಿಐ ತನಿಖೆಗೆ ನಿರ್ದೇಶಿಸಲು ಅದರಲ್ಲೂ ಅಧಿವಿಚಾರಣೆ ನಡೆಯುತ್ತಿದ್ದಾಗ ಮತ್ತು ಅಧಿವಿಚಾರಣೆಯು ಈಗಾಗಲೇ ಪ್ರಾರಂಭವಾಗಿದೆಯೆಂಬ ವಾದವಿದ್ದಾಗ ಅದಕ್ಕೆ ಕಾನೂನಿನಲ್ಲಿ ಯಾವುದೇ ಸಮರ್ಥನೀಯವಾದ ಕಾರಣವಿದೆಯೆ?ಎಂಬುದನ್ನು ಪರಿಶೀಲಿಸಬೇಕಾಗುತ್ತದೆ ಹಾಗೂ ಸತ್ಯವನ್ನು ಕಂಡುಹಿಡಿಯುವ ದೃಷ್ಟಿಯಿಂದ ಸಿಬಿಐ ತನಿಖೆಗೆ ಆದೇಶಿಸುವ ಅಗತ್ಯವಿದ್ದು ಮತ್ತು ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಈ ನ್ಯಾಯಾಲಯವು ಅರ್ಜಿಯಲ್ಲಿ ಮಂಡಿಸಲಾದ ಆಧಾರಗಳನ್ನು ವಿಶ್ಲೇಷಿಸಬೇಕಾಗುತ್ತದೆ.

63. ಸಿಬಿಐ ನಿರ್ದೇಶನದ ಆದೇಶ ಕೋರುವಲ್ಲಿ ನಾನು ಈಗಾಗಲೇ ಆಧಾರಗಳ ಪಟ್ಟಿಯನ್ನು ಮಾಡಿದ್ದೇನೆ ಮತ್ತು ಆ ಆಧಾರಗಳನ್ನು ಪರಿಗಣಿಸುವ ಮು ೦ ಚೆ, ಸದರಿ ಪ್ರಕರಣದಲ್ಲಿ ಘಟನೆಯು ಸಂಭವಿಸಿದ್ದನ್ನು ಅನುಕ್ರಮವಾಗಿ ಹೇಳಬಯಸುತ್ತೇನೆ.ಹತ್ಯೆಯುದಿನಾಂಕ: 15-06-2016ರಂದು ಬೆಳಿಗ್ಗೆ 7.37 ರಿಂದ 7.38 ರೊಳಗೆ ಸಂಭವಿಸಿತು ಮತ್ತು ಹತ್ಯೆಗೆ ಬಲಿಯಾದ ವ್ಯಕ್ತಿಯ ಪತ್ನಿಯ ದೂರಿನ ಆಧಾರದ ಮೇಲೆ ಬೆಳಿಗ್ಗೆ ಸುಮಾರು ಪ್ರಕರಣ ದಾಖಲಿಸಲಾಯಿತು ಮತ್ತು ೧ದಿನಾಂಕ: 17-06-2016 ರಂದು ಆಪಾದಿತ ಸಂಖ್ಯೆ.1 ರಿಂದ 5 ರ ವರೆಗಿನ ವ್ಯಕ್ತಿಗಳನ್ನು ಬಂಧಿಸಲಾಯಿತು ಮತ್ತುದಿನಾಂಕ: 20-06-2016 ರಂದು ಆಪಾದಿತ ಸಂಖ್ಯೆ.6 ರ ವ್ಯಕ್ತಿಯನ್ನು ಬಂಧಿಸಲಾಯಿತು ಮತ್ತು ವಸೂಲಾತಿಗಳನ್ನು ಮಾಡಲಾಗಿದ್ದು ತನಿಖೆಯನ್ನು ಪೂರ್ಣಗೊಳಿಸಲಾಗಿದೆ ಮತ್ತು ದೋಷಾರೋಪ ಪಟ್ಟಿಯನ್ನುದಿನಾಂಕ: 09-09-2016ರಂದು ಸಲ್ಲಿಸಲಾಗಿದೆ ಮತ್ತು ತನಿಖೆ ನಡೆಯುತ್ತಿದ್ದ ಸಮಯದಲ್ಲಿ ಮೃತನ ಪತ್ನಿಯು ಒಂದು ಪತ್ರವನ್ನು ನೀಡಿದ್ದು, ಅದನ್ನು ಹತ್ಯೆಯ ಘಟನೆಗೆ ಎರಡು ದಿನ ಮುಂಚೆ ಸ್ವೀಕರಿಸಲಾಗಿತ್ತು ಮತ್ತು ಆ ಕೂಡಲೇ ಸದರಿ ಪತ್ರವನ್ನು ಪೊಲೀಸರಿಗೆ ಒಪ್ಪಿಸಲಾಗಿತ್ತು ಮತ್ತು ಸದರಿ ಪತ್ರವನ್ನು ಪೊಲೀಸರಿಗೆ ನೀಡಿದ್ದರೂ ಸಹ ಪೊಲೀಸರು ಅದನ್ನು ಸರಿಯಾಗಿ ತನಿಖೆ ಮಾಡಿಲ್ಲವೆಂಬುದು ಮುಖ್ಯ ವಾದವಾಗಿದೆ.ನ್ಯಾಯಾಲಯವು ಆ ದಸ್ತಾವೇಜುಗಳನ್ನು ಗುರುತು ಮಾಡಲು ನಿರಾಸಕ್ತಿ ತೋರಿದ್ದು ಸಹ ಆಪಾದನೆಯಾಗಿದೆ ಮತ್ತು ಮಾನ್ಯ ಸರ್ಕಾರಿ ವಕೀಲರ ಆಗ್ರಹದ ಮೇರೆಗೆ ಮಾತ್ರ ಅವುಗಳನ್ನು ನಿಶಾನೆ ಪಿ .2 ಮತ್ತು ಪಿ .3 ಎಂದು ಗುರುತು ಮಾಡಲಾಯಿತು ಮತ್ತು ಈ ನ್ಯಾಯಾಲಯವು ಅಂಥ ಪತ್ರಗಳ ಆಧಾರದ ಮೇಲೆ ತನಿಖೆಗೆ ಆದೇಶಿಸಬಹುದೆ?ಎಂಬುದನ್ನು ಗಮನಿಸಬೇಕಿದೆ ಮತ್ತು ಪತ್ರಗಳು ಅನಾಮಧೇಯ ಪತ್ರಗಳಾಗಿವೆ ಮತ್ತು ಆ ಪತ್ರವನ್ನು ಬರೆದ ವ್ಯಕ್ತಿಯ ಹೆಸರನ್ನು ತಿಳಿಸಿಲ್ಲ ಹಾಗೂ ಆ ಪತ್ರದಲ್ಲಿ 10 ನೇ ಎದುರುದಾರರ ಹೆಸರನ್ನು ನಮೂದಿಸಿರುವುದು ಅರ್ಜಿದಾರರು ವಾದಿಸಿದಂತೆ ಅವನನ್ನು ಆಪಾದಿತನೆಂದು ಸಿಕ್ಕಿಹಾಕಿಸಲು ಆಧಾರವಾಗಬಹುದು ಮತ್ತು ಒಬ್ಬ ವ್ಯಕ್ತಿಯನ್ನು ಆಪಾದಿತನೆಂದು ಸಿಕ್ಕಿ ಹಾಕಿಸಲು ಸಾಕ್ಷ್ಯಾಧಾರವಿರಲೇಬೇಕು ಮತ್ತು ಹೀಗಾಗಿ, ಸಿಬಿಐಗೆ ಒಂದು ಆಧಾರವಾಗಿ ಈ ವಿಷಯವನ್ನು ಒಪ್ಪಿಸಲು ಈ ಆಧಾರವನ್ನು ಕೋರಿದ್ದು, ಈ ವಾದದಲ್ಲಿ ಯಾವುದೇ ಒತ್ತಾಯವಿರುವುದು ನನಗೆ ಕಂಡು ಬಂದಿಲ್ಲ ಮತ್ತು ಅಂಥ ಪತ್ರವನ್ನು ಹತ್ಯೆಯನ್ನು ಎಸಗಿರುವ ವ್ಯಕ್ತಿಯೇ ಬರೆದಿದ್ದಾನೆಂದು ನ್ಯಾಯಾಲಯವು ಸಹ ನಿರೀಕ್ಷಿಸಲಾಗದು ಹಾಗೂ ತನಿಖೆಯನ್ನು ದಾರಿ ತಪ್ಪಿಸಲೆಂದೇ ಅಂಥ ಪತ್ರವನ್ನು ಯಾರೋ ಬರೆದಿರುವ ಸಾಧ್ಯತೆಗಳಿವೆ.

64. ಇನ್ನೊಂದು ಆಧಾರವೆಂದರೆ, ಮೃತನ ಮತ್ತು 10 ನೇ ಎದುರುದಾರನ ನಡುವೆ ರಾಜಕೀಯ ದ್ವೇಷವಿತ್ತು ಮತ್ತು ಜಿಲ್ಲಾ ಪಂಚಾಯತ್ನಲ್ಲಿ ನಡೆದ ಸಭೆಯಲ್ಲಿ ಅದು ಬಹಿರಂಗವಾಗಿದೆ ಮತ್ತು ಅಂಗೀಕರಿಸಲಾದಂತೆ ಮೃತ ವ್ಯಕ್ತಿ ಹಾಗೂ 10 ನೇ ಎದುರುದಾರ ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಸೇರಿದ್ದರೆಂಬುದರಲ್ಲಿ ಯಾವುದೇ ಸಂಶಯವಿಲ್ಲ ಮತ್ತು ಅವರು ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಸೇರಿದ್ದಾರೆ ಮತ್ತು ಸಭೆಯಲ್ಲಿ ಯಾವುದೇ ಗಂಭೀರ ಚರ್ಚೆ ನಡೆದಿದ್ದಲ್ಲಿ, ಅದು ಎದುರುದಾರನನ್ನು ಆಪಾದಿತನೆಂದು ಬಿಂಬಿಸಲು ಆಧಾರವಾಗಿದೆ ಮತ್ತು ಅವರ ನಡುವಿನ ವೈರತ್ವವು ಸಭೆಯಲ್ಲಿ ವ್ಯಕ್ತವಾಗಿದೆಯೆಂದು ವಾದಿಸಲಾಗಿದೆ ಎಂಬುದರಲ್ಲಿ ಸಂಶಯವಿಲ್ಲ ಮತ್ತು ಅದು, ಪೊಲೀಸರು ಸರಿಯಾಗಿ ತನಿಖೆ ನಡೆಸಿಲ್ಲವೆಂದು ತೀರ್ಮಾನಕ್ಕೆ ಬರುವಲ್ಲಿ ಸಿಬಿಐಗೆ ವಿಷಯವನ್ನು ಒಪ್ಪಿಸುವುದಕ್ಕೆ ಆಧಾರವಾಗದು ಮತ್ತು ಬೇರೆ ರೀತಿಯಲ್ಲಿ ಪರಿಶೀಲಿಸುವುದು ತನಿಖಾಧಿಕಾರಿಯ ಕರ್ತವ್ಯವಾಗಿದೆ ಮತ್ತು ಈ ಪ್ರಕರಣದಲ್ಲಿ ಆಪಾದಿತ ವ್ಯಕ್ತಿಗಳನ್ನು ಎರಡು ದಿನಗಳೊಳಗೆ ಬಂಧಿಸಲಾಗಿದೆ ಮತ್ತು ತಮ್ಮ ಸುಪರ್ದಿಗೆ ತೆಗೆದುಕೊಳ್ಳಲಾಗಿದೆ ಹಾಗೂ ಹತ್ಯೆಗೆ ಪ್ರೇರಣೆಯನ್ನು ಕಂಡುಹಿಡಿಯಲಾಗಿದೆ.

65. ಇನ್ನೊಂದು ವಾದವೆಂದರೆ, ಅದೊಂದು ಮಾರಾಟದ ಒಪ್ಪಂದವಾಗಿದ್ದು, ಮಾರಾಟದ ಆದಾಯದ ಮೂಲವನ್ನು ತನಿಖೆ ಮಾಡಿರಲಿಲ್ಲ ಮತ್ತು ಮಾರಾಟದ ಒಪ್ಪಂದ ಮಾಡಿಕೊಂಡಿದ್ದಕ್ಕಾಗಿ ಮಾರಾಟದ ಆದಾಯ ಮೂಲಕ್ಕೆ ಸಂಬಂಧಿಸಿದಂತೆ ತನಿಖೆ ಮಾಡುವುದು ತನಿಖಾಧಿಕಾರಿಯ ಕೆಲಸವಲ್ಲ ಮತ್ತು ಆಪಾದಿಸಲಾದ ಈ ಮಾರಾಟದ ಒಪ್ಪಂದವನ್ನೇ ಪ್ರಕರಣದ ಉದ್ದೇಶಕ್ಕಾಗಿ ಸೃಷ್ಟಿಸಲಾಗಿದೆ ಎಂಬುದು ಅರ್ಜಿದಾರರ ವಾದವಾಗಿದೆ ಹಾಗೂ ಆಪಾದಿತ ವ್ಯಕ್ತಿಗಳು ಮಾಡಿಕೊಂಡ ಸದರಿ ಮಾರಾಟ ವ್ಯವಹಾರದಲ್ಲಿ ಆ ವ್ಯಕ್ತಿ ಅಡ್ಡಿಪಡಿಸಿದ್ದಾನೆಂಬುದು ಆತನ ಹತ್ಯೆ ಮಾಡಲು ಪ್ರೇರಣೆಯಾಗಿದೆಯೆಂಬುದು ಪ್ರಾಸಿಕ್ಯೂಷನ್ನ ವಾದವಾಗಿದೆ ಮತ್ತು ಮಾರಾಟದ ಆದಾಯ ಮೂಲಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸುವುದು ತನಿಖಾಧಿಕಾರಿಯ ಕೆಲಸವಲ್ಲ ಎಂಬುದನ್ನು ನಾನು ಈಗಾಗಲೇ ಸೂಚಿಸಿದ್ದೇನೆ.ಮತ್ತು ಸದರಿ ಆಧಾರವನ್ನು ಸಹ ಈ ವಿಷಯವನ್ನು ಸಿಬಿಐ ತನಿಖೆಗೆ ಒಪ್ಪಿಸುವುದಕ್ಕಾಗಿ ಅಂಗೀಕರಿಸಲಾಗದು ಹಾಗೂ ಅವರು ಮೂಲವನ್ನು ಹೊಂದಿದ್ದರೋ ಅಥವಾ ಇಲ್ಲವೋ ಎಂಬುದು ಈ ಅಪರಾಧದಲ್ಲಿ ಒಳಗೊಂಡಿರುವ ವಿಷಯವಲ್ಲ.

66. ಮತ್ತೊಂದು ವಾದವೆಂದರೆ, ಆ ಕಟ್ಟಡದ ಸಿಸಿಟಿವಿ ಫೂಟೇಜನ್ನು ಸಂಗ್ರಹಿಸಿಲ್ಲ ಮತ್ತು ಪಕ್ಕದ ಕಟ್ಟಡದ ಸಿಸಿಟಿವಿ ಫೂಟೇಜನ್ನು ಮಾತ್ರ ಸಂಗ್ರಹಿಸಿದ್ದಾರೆ ಮತ್ತು ಅಷ್ಟೇ ಅಲ್ಲದೆ, ಒಂದು ಕಪ್ಪು ಹುಂಡೈ ಅಕ್ಸೆಂಟ್ ಕಾರು ಕೆಸಿಡಿ ವೃತ್ತದಿಂದ ಸಪ್ತಾಪುರ ವೃತ್ತದ ಕಡೆಗೆ ಚಲಿಸಿ, ಸದರಿ ವೃತ್ತಕ್ಕೆ ಮತ್ತೆ ಹಿಂದಿರುಗಿದೆ ಹಾಗೂ ಹೇಳಲಾದ ಕಾರಿನಲ್ಲಿ ಕುಳಿತಿದ್ದ ಕೆಲ ವ್ಯಕ್ತಿಗಳು ಸನ್ನೆ ಮಾಡುತ್ತಿದ್ದರು ಮತ್ತು ವಿಕಾಸ ನಗರದ ನಿವಾಸಿಗಳು ಯಾರೂ ಇಲ್ಲದ ಕಪ್ಪು ಕಾರಿನ ಬಗ್ಗೆ ಮಾಹಿತಿ ನೀಡಿದರು ಎಂಬುದಾಗಿದೆ.ವಕೀಲರು ತಮ್ಮ ವಾದದಲ್ಲಿ, ಪೊಲೀಸರ ವಶಕ್ಕೆ ತೆಗೆದುಕೊಳ್ಳಲಾಗಿದ್ದ ಅದೇ ಕಾರನ್ನು ಕಾರಿನ ಮಾಲೀಕರಿಗೆ ಅನುಕೂಲವಾಗುವಂತೆ ಬಿಡುಗಡೆ ಮಾಡಲಾಗಿತ್ತು ಎಂದು ತೀವ್ರವಾಗಿ ವಾದಿಸಿದ್ದಾರೆ ಮತ್ತು ಸದರಿ ವಾದದ ಸಮರ್ಥನೆಯಲ್ಲಿ ವಾಹನವನ್ನು ಬಿಡುಗಡೆ ಮಾಡಿದ್ದಕ್ಕಾಗಿ ಮತ್ತು ತನಿಖಾಧಿಕಾರಿಯ ವಶಕ್ಕೆ ತೆಗೆದುಕೊಂಡಿದ್ದಕ್ಕಾಗಿ, ಘಟನೆಯ ಸಮಯದಲ್ಲಿ ಹುಂಡೈಕಾರು ಬಂದಿತೆಂದು ಹೇಳುವುದನ್ನು ಬಿಟ್ಟು ಬೇರಾವ ಸಾಕ್ಷ್ಯಾಧಾರವನ್ನೂ ಒದಗಿಸಿಲ್ಲ ಮತ್ತು ಅರ್ಜಿದಾರರು ಈ ಎಲ್ಲ ಮಾಹಿತಿಯನ್ನು ಹೊಂದಿದ್ದು ಪಕ್ಕದ ಕಟ್ಟಡದ ಸಿಸಿಟಿವಿ ಫುಟೇಜನ್ನು ಹೊರತುಪಡಿಸಿ, ಮಾಹಿತಿಯ ಮೂಲವನ್ನು ಸಹ ತಿಳಿಸಿದ್ದಾರೆ ಮತ್ತು ಸದರಿ ಸಮಯದಲ್ಲಿ ಒಂದು ಕೆಎಸ್ಆರ್ಟಿಸಿ ಬಸ್ಸು ಬಂದಿದ್ದನ್ನು ಅದು ಬಹಿರಂಗ ಪಡಿಸಿದೆ ಹಾಗೂ ಬಸ್ಸಿನ ಚಾಲಕ ಮತ್ತು ನಿರ್ವಾಹಕನನ್ನು ವಿಚಾರಣೆ ಮಾಡಲಾಗಿದೆ ಹಾಗೂ ತನಿಖಾಧಿಕಾರಿಯು ಕಾರಿನ ಬಗ್ಗೆ ವಿಚಾರಣೆ ಮಾಡಿಲ್ಲವೆಂಬ ಮುಖ್ಯ ವಾದವಿದ್ದು, ಕಾರನ್ನು ವಶಪಡಿಸಿಕೊಂಡಿದ್ದಕ್ಕೆ ೧ ಮತ್ತು ಮಾಲೀಕನಿಗೆ ಹಿಂದಿರುಗಿಸಿದ್ದಕ್ಕೆ ಯಾವ ಸಾಕ್ಷ್ಯಾಧಾರವೂ ಇಲ್ಲದಿದ್ದು, ಆ ವಾದವನ್ನು ಅಂಗೀಕರಿಸಲಾಗದು ಮತ್ತು ನ್ಯಾಯಾಲಯವೂ ಸಹ ಕೇವಲ ಕಲ್ಪನೆಯ ಆಧಾರದ ಮೇಲೆ ತೀರ್ಮಾನಿಸಲಾಗದು ಮತ್ತು ಯಾವುದಾದರೂ ಮೇಲ್ನೋಟದ ಸಾಕ್ಷ್ಯಾಧಾರವಿರಲೇಬೇಕಿದ್ದು, ಈ ಸಂಬಂಧವಾಗಿ ಅಂಥ ಯಾವುದೂ ನನಗೆ ಕಂಡುಬಂದಿಲ್ಲ.

67. ಗೃಹ ಸಚಿವರು ಘಟನೆ ಜರುಗಿದ ಒಂದು ಗಂಟೆಯೊಳಗೆ ಅದೊಂದು ಭೂ ವಿವಾದದಿಂದಾದ ಕೊಲೆಯೆಂದು ಹೇಳಿಕೆ ನೀಡಿದ್ದಾರೆ ಮತ್ತು ಘಟನೆ ನಡೆದ ಎರಡು ದಿನಗಳ ನಂತರದಿನಾಂಕ: 17-6-2016ರಂದು ಆಪಾದಿತ ವ್ಯಕ್ತಿಗಳನ್ನು ಬಂಧಿಸಲಾಯಿತು ಎಂಬುದು ಇನ್ನೊಂದು ವಾದವಾಗಿದೆ ಹಾಗೂ ಅದು ಹೇಗೆ ಗೃಹಮಂತ್ರಿಯು ಹತ್ಯೆಗೆ ಕಾರಣದ ಬಗ್ಗೆ ತಿಳಿದುಕೊಂಡರು ಎಂಬುದು ಅರ್ಜಿದಾರರ ವಕೀಲರ ವಾದವಾಗಿದೆ ಮತ್ತು ಒಂದು ಭಯಾನಕ ಕೊಲೆ ನಡೆದಾಗ, ಸಾಮಾನ್ಯವಾಗಿ ಪತ್ರಿಕಾ ವರದಿಗಾರರು ಗೃಹಸಚಿವರನ್ನು ಭೇಟಿಯಾಗುತ್ತಾರೆ ಮತ್ತು ಅಂಥ ಹೇಳಿಕೆಯನ್ನು ನೀಡಿದಾಗ, ಅದು ಕಲ್ಪನೆಯ ಆಧಾರದ ಮೇಲೆ ಹೇಳಿರಬಹುದು ಮತ್ತು ಕೇವಲ ಅಂಥ ಹೇಳಿಕೆಯನ್ನು ಗೃಹ ಸಚಿವರು ನೀಡುವುದು ಸಿಬಿಐ ತನಿಖೆಗೆ ಆದೇಶಿಸಲು ಆಧಾರವಾಗಿಲ್ಲ ಮತ್ತು ಪೊಲೀಸರು ಸಹ ಒಪ್ಪಂದ ಪತ್ರದ ಸಾಕ್ಷ್ಯಾಧಾರವನ್ನು ಸಂಗ್ರಹಿಸಿದ್ದಾರೆ ಮತ್ತು ಹತ್ಯೆ ಎಸಗಲು ಪ್ರೇರಣೆಯನ್ನು ಸಹ ಕಂಡುಹಿಡಿದಿದ್ದಾರೆ ಹಾಗೂ ತನಿಖೆಯ ಸಮಯದಲ್ಲಿ ಆಪಾದಿತ ವ್ಯಕ್ತಿಗಳನ್ನು ಬಂಧಿಸಿ, ಆಪಾದಿತ ವ್ಯಕ್ತಿಗಳ ಸಂದರ್ಭದಲ್ಲಿ ವಸೂಲಾತಿಯನ್ನು ಸಹ ಮಾಡಿದ್ದಾರೆ ಹಾಗೂ ಸನ್ನಿವೇಶಗಳು ಹೀಗಿದ್ದಾಗ, ತನಿಖಾಧಿಕಾರಿಯ ಕಡೆಯಿಂದ ಯಾವುದೇ ಲೋಪ ನನಗೆ ಕಂಡು ಬಂದಿಲ್ಲ.

68. ಮತ್ತೊಂದು ಆಧಾರವೆಂದರೆ, ಮೃತನ ಪತ್ನಿಯು ಆ ವ್ಯಕ್ತಿಗಳು ಮತ್ತು ಕಾರಿನಲ್ಲಿದ್ದ ಕೆಲ ವ್ಯಕ್ತಿಗಳು ಘಟನೆಯಲ್ಲಿ ಭಾಗಿಯಾಗಿರುವುದಕ್ಕೆ ಸಂಬಂಧಿಸಿದಂತೆ, ಪೊಲೀಸ್ ಕಮೀಷನರ್ಗೆ ಮನವಿ ಪತ್ರವನ್ನು ನೀಡಿದ್ದಾರೆ ಮತ್ತು ಅಷ್ಟೇ ಅಲ್ಲದೆ, ಅನುಕ್ರಮವಾಗಿದಿನಾಂಕ: 09-11-2016 ಮತ್ತು 17-02-2017ರಂದು

ಮುಖ್ಯಮಂತ್ರಿಯವರಿಗೆ ಮನವಿಪತ್ರವನ್ನು ನೀಡಿದ್ದಾರೆ ಮತ್ತು ಸದ್ಯದ ಪ್ರಕರಣದಲ್ಲಿ ದೋಷಾರೋಪ ಪಟ್ಟಿಯನ್ನುದಿನಾಂಕ: 09-09-2016ರಂದೇ ಸಲ್ಲಿಸಲಾಗಿತ್ತೆಂಬುದನ್ನು ಗಮನಿಸಬೇಕಾಗುತ್ತದೆ ಮತ್ತು ತನಿಖೆಯ ಸಮಯದಲ್ಲಿ ತನಿಖೆಯನ್ನು ನಡೆಸಿದ ತನಿಖಾಧಿಕಾರಿಯ ವಿರುದ್ಧವಾಗಿ ಯಾವುದೇ ದೂರುಗಳಿರಲಿಲ್ಲ ಮತ್ತು ಈ ಎಲ್ಲಾ ಸಮಸ್ಯೆಗಳು ನವೆಂಬರ್ -2016 ರ ತಿಂಗಳಿನಲ್ಲಿಯೇ ಅದರಲ್ಲೂ, ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ ಎರಡು ತಿಂಗಳ ನಂತರ ಪ್ರಾರಂಭವಾದವು ಮತ್ತು ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿ ಏನೆಂದರೆ, ಮೃತ ವ್ಯಕ್ತಿಯ ಪತ್ನಿಯೇ ತನ್ನ ರಾಜಕೀಯ ಸೇರ್ಪಡೆಯನ್ನು ಬದಲಾಯಿಸಿದ್ದಾರೆ.ಕೊಲೆಯಾದ ಆಕೆಯ ಪತಿಯು ಜಿಲ್ಲಾ ಪಂಚಾಯತಿ ಸದಸ್ಯರಾಗಿದ್ದು, ಬಿಜೆಪಿ ಅಭ್ಯರ್ಥಿಯಾಗಿ ಚುನಾಯಿತರಾಗಿದ್ದರು ಮತ್ತು ಈಗ ಆಕೆ ತನ್ನ ರಾಜಕೀಯ ಸೇರ್ಪಡೆಯನ್ನು ಕಾಂಗ್ರೆಸ್ ರಾಜಕೀಯ ಪಕ್ಷಕ್ಕೆ ಬದಲಾಯಿಸಿದ್ದಾರೆ ಮತ್ತು ಒಂದು ನಿರ್ದಿಷ್ಟ ಪಕ್ಷದ ಮಾಜಿ ಸಚಿವರೂ ಆಗಿರುವ 10 ನೇ ಎದುರುದಾರರ ವಿರುದ್ಧ ಆಪಾದನೆಯನ್ನು ಮಾಡಲಾಗಿದೆ ಮತ್ತು ಬೇರೆ ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿದ್ದರಿಂದ ಮತ್ತು ಬೇರೆ ರಾಜಕೀಯ ಪಕ್ಷಗಳಿಗೆ ಸೇರ್ಪಡೆಯಾಗಿದ್ದರಿಂದ ಅಲ್ಲಿ ಬದಲಾದ ದೃಶ್ಯಾವಳಿಯಿದೆ ಮತ್ತು ಈಗ, ಮೃತನ ಪತ್ನಿಯು ಕಮಿಷನರ್ಗೆ ಹಾಗೂ ಮುಖ್ಯ ಮಂತ್ರಿಯವರಿಗೆ ತಾನೇ ನೀಡಿದ ಮನವಿ ಪತ್ರಗಳಲ್ಲಿನ ತನ್ನದೇ ಸಹಿಯನ್ನು ನಿರಾಕರಿಸುತ್ತಿದ್ದಾರೆ ಮತ್ತು ಅಷ್ಟೇ ಅಲ್ಲದೆ, ಈ ಎಲ್ಲಾ ತೊಂದರೆಗಳು ನವೆಂಬರ್ 2016 ರ ತಿಂಗಳಿನಿಂದ ಮಾತ್ರ ಪ್ರಾರಂಭವಾಗಿವೆ ಮತ್ತು ತನಿಖೆಯ ಸಮಯದಲ್ಲಿ ತನಿಖಾಧಿಕಾರಿಯ ವಿರುದ್ಧ ಯಾವುದೇ ಆಪಾದನೆಯಿರಲಿಲ್ಲ ಹಾಗೂ ತನಿಖೆ ನಡೆಸಿದ ತನಿಖಾಧಿಕಾರಿಯ ವಿರುದ್ಧ ಅರ್ಜಿದಾರರು ಯಾವುದೇ ಆಪಾದನೆ ಮಾಡಿಲ್ಲವೆಂದು ನಾನು ಈಗಾಗಲೇ ಎತ್ತಿ ತೋರಿಸಿದ್ದೇನೆ ಮತ್ತು ಮುಖ್ಯ ವಾದವೆಂದರೆ, ಕೊಲೆಯಲ್ಲಿ 10 ನೇ ಎದುರುದಾರನ ಪಾತ್ರವಿದೆ ಎಂಬುದಷ್ಟೇ ಆಗಿದೆ ಮತ್ತು ನಾನು ಈಗಾಗಲೇ ಎತ್ತಿ ತೋರಿಸಿರುವಂತೆ, ಪಕ್ಷಕಾರರು ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಸೇರ್ಪಡೆಯಾದಾಗ ಆಪಾದನೆಯನ್ನು ಮಾಡಲಾಗಿದೆ ಹಾಗೂ ಕೇವಲ ಆಪಾದನೆ ಮಾಡುವುದು ಒಂದು ಆಧಾರವಾಗಿಲ್ಲ ಮತ್ತು ಹೊಸದಾಗಿ ತನಿಖೆಗೆ ಅದರಲ್ಲೂ ಸಿಬಿಐ ತನಿಖೆಗೆ ಆದೇಶಿಸುವ ದೃಷ್ಟಿಯಿಂದ ಅರ್ಜಿದಾರರು ಪ್ರಕರಣವನ್ನು ಸಿಬಿಐ ತನಿಖೆಗೆ ಆದೇಶಿಸಲು ಅಸಾಧಾರಣ ವಾದವನ್ನು ಮಾಡಬೇಕಾಗುತ್ತದೆ.ನಾನು ಈಗಾಗಲೇ ಸೂಚಿಸಿರುವಂತೆ, ಕೊಲೆಯು ಜೂನ್ 2016 ರಲ್ಲಿ ನಡೆದಿದ್ದರೂ, ನವೆಂಬರ್ -2016 ರ ವರೆಗೆ ಸುಮಾರು ಆರು ತಿಂಗಳು ತನಿಖೆಯ ಬಗ್ಗೆ ಯಾವುದೇ ಸಂಶಯವಿರಲಿಲ್ಲ ಮತ್ತು ಅದು ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ ಎರಡು ತಿಂಗಳ ನಂತರ ಪ್ರಾರಂಭವಾಯಿತು ಮತ್ತು ಸಂದರ್ಭ ಹಾಗಿದ್ದಾಗ, ನನ್ನ ಅಭಿಪ್ರಾಯದಲ್ಲಿ ಇದು ಸಿಬಿಐ ತನಿಖೆಗೆ ಆದೇಶಿಸುವ ಪ್ರಕರಣ ವಾಗಿಲ್ಲ ಮತ್ತು ತನಿಖೆ ನಡೆಸುವಲ್ಲಿ ತನಿಖಾಧಿಕಾರಿಯು ತಪ್ಪೆಸಗಿದ್ದಾನೆಂದು ಮತ್ತು ಸುಳ್ಳು ತನಿಖೆ ನಡೆಸಲಾಗಿದೆಯೆಂದು ತೋರಿಸುವ ಯಾವುದಾದರೂ ಸಾಕ್ಷ್ಯಾಧಾರವು ದಾಖಲೆಯಲ್ಲಿ ಇರಲೇಬೇಕು ಮತ್ತು ಅದು ನ್ಯಾಯಸಮ್ಮತವಲ್ಲದ 0 ತನಿಖೆಯೆಂಬ ತೀರ್ಮಾನಕ್ಕೆ ಬರಲು ಮೇಲ್ನೋಟದ ಸಾಕ್ಷ್ಯಾಧಾರ ಇಲ್ಲದಿದ್ದಾಗ, ಈ ನ್ಯಾಯಾಲಯವು ಸಿಬಿಐ ತನಿಖೆಗೆ ಆದೇಶಿಸುವ ತನ್ನ ರಿಟ್ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲಾಗದು.

69. ಅರ್ಜಿದಾರರ ಮುಖ್ಯ ವಾದವು, 2 ನೇ ಅರ್ಜಿದಾರನು ಸಿ.ಡಬ್ಲ್ಯು .19 ಆಗಿದ್ದು, ದೋಷಾರೋಪ ಪಟ್ಟಿ ಸಾಕ್ಷಿದಾರರೂ ಆಗಿದ್ದಾರೆಂಬುದು ಸಹ ಆಗಿದೆ ಮತ್ತು 1 ನೇ ಅರ್ಜಿದಾರರು ಸಾಕ್ಷಿದಾರರಾಗಿಲ್ಲ ಹಾಗಿದ್ದರೂ, ಅವರು ಮೃತ ವ್ಯಕ್ತಿಯ ತಾಯಿ ಹಾಗೂ ಸಹೋದರನಾಗಿದ್ದಾರೆ, ಜೊತೆಗೆ ಈ ಅರ್ಜಿಗಳಲ್ಲಿ 11 ನೇ ಮತ್ತು 12 ನೇ ಎದುರುದಾರರನ್ನಾಗಿ ನಿಯಮಿಸಲಾದ ಇಬ್ಬರು ಪೊಲೀಸ್ ಅಧಿಕಾರಿಗಳ ವಿರುದ್ಧ ಆಪಾದನೆಯನ್ನು ಮಾಡಲಾಗಿದೆ ಮತ್ತು ಅವರ ವಿರುದ್ಧದ ನಿರ್ದಿಷ್ಟ ಆಪಾದನೆಯೇನೆಂದರೆ, ಅವರು ವ್ಯವಹರಣೆಗಳಿಗೆ ಅಡ್ಡಿಪಡಿಸಿದ್ದಾರೆ ಮತ್ತು 10 ನೇ ಎದುರುದಾರರ ಸಂದರ್ಭದಲ್ಲಿ ಅವರು ಧಾರವಾಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲದಿದ್ದರೂ, ಸಿ.ಡಬ್ಲ್ಯು .19 ರನ್ನು ಭೇಟಿಯಾಗಿ ಬೆದರಿಕೆ ಹಾಕಿದ್ದಾರೆ ಹಾಗೂ ಸಿ.ಡಬ್ಲ್ಯು .19 ರನ್ನು 10 ನೇ ಎದುರುದಾರರ ಬಳಿ ಕರೆದೊಯ್ದಿದ್ದಾರೆ ಮತ್ತು ಬೆದರಿಕೆಗೆ ಸಂಬಂಧಿಸಿದಂತೆ ಅಲ್ಲೊಂದು ಮಾತುಕತೆ ನಡೆದಿತ್ತು ಮತ್ತು ಅವರ ನಡುವೆ ನಡೆದ ಮಾತುಕತೆಯ ಬಗ್ಗೆ ಸಾಕ್ಷ್ಯಾಧಾರವನ್ನು ನ್ಯಾಯಾಲಯದ ಮುಂದೆ ಮಂಡಿಸಲಾಗಿದೆ ಮತ್ತು ದೋಷಾರೋಪ ಪಟ್ಟಿಯನ್ನು ಸಲ್ಲಿಸಿರುವುದು ಅದರಲ್ಲೂ ಅಧಿವಿಚಾರಣೆಯು ಪ್ರಾರಂಭವಾಗಿದ್ದಾಗ ಸಲ್ಲಿಸುವುದು ಇವು ತರುವಾಯದ ಬೆಳವಣಿಗೆಗಳಾಗಿವೆ ಮತ್ತು ಈಗ ಅವರ ವಿರುದ್ಧ ಕ್ರಮ ಕೈಗೊಳ್ಳಲು ಅಧಿವಿಚಾರಣಾ ನ್ಯಾಯಾಧೀಶರ ಮುಂದೆ ಅರ್ಜಿ ಸಲ್ಲಿಸಲಾಗಿದೆ ಮತ್ತು ವಿಷಯವನ್ನು ಸಂಬಂಧಪಟ್ಟ ಅಧಿಕಾರವ್ಯಾಪ್ತಿಯ ಮ್ಯಾಜಿಸ್ಟ್ರೇಟರಿಗೆ ಕಳುಹಿಸಲಾಗಿದೆ ಮತ್ತು ಅದನ್ನು ಕೆಳ ನ್ಯಾಯಾಲಯವು ಪರಿಶೀಲಿಸಿದೆ ಹಾಗೂ ಅರ್ಜಿಯನ್ನು ತಿರಸ್ಕರಿಸಿದೆ ಮತ್ತು ಈ ನ್ಯಾಯಾಲಯವು ಈ ದಿನ ಅದನ್ನು ಗುಣಾರ್ಹತೆಗಳ ಆಧಾರದ ಮೇಲೆ ಪರಿಗಣಿಸಬೇಕೇ ಹೊರತು ತಾಂತ್ರಿಕತೆಯ ಆಧಾರದ ಮೇಲೆ

ಅಲ್ಲವೆಂದು ಕೆಳ ನ್ಯಾಯಾಲಯಕ್ಕೆ ನಿರ್ದೇಶಿಸಿ, ಆದೇಶವನ್ನು ರದ್ದು ಮಾಡಿದೆ ಮತ್ತು ನಾನು ಈಗಾಗಲೇ ಎತ್ತಿ ತೋರಿಸಿರುವಂತೆ, ಇವು ತರುವಾಯದ ಬೆಳವಣಿಗೆಗಳಾಗಿವೆ ಮತ್ತು ಈ ಬೆಳವಣಿಗೆಗಳ ಆಧಾರದ ಮೇಲೆ ಈ ನ್ಯಾಯಾಲಯವು ಈ ವಿಷಯವನ್ನು ಸಿಬಿಐ ತನಿಖೆಗೆ ಒಪ್ಪಿಸಲಾಗದು.ಬಹಳ ಹೆಚ್ಚೆಂದರೆ, ಯಾವುದೇ ಸಾಕ್ಷ್ಯಾಧಾರವಿದ್ದಲ್ಲಿ, ಅದನ್ನು ಪುಷ್ಟೀಕರಿಸಲು, ಯಾರೇ ಇತರ ವ್ಯಕ್ತಿ ಅಪರಾಧದಲ್ಲಿ ಭಾಗಿಯಾಗಿರುವುದಕ್ಕೆ ಸಂಬಂಧಿಸಿದಂತೆ, ಅಧೀನ ನ್ಯಾಯಾಲಯದ ಮುಂದೆ ಅದನ್ನು ಮಂಡಿಸಬಹುದು ಮತ್ತು ಅರ್ಜಿದಾರರ ವಕೀಲರು ದೂರವಾಣಿಯಲ್ಲಿ ನಡೆದ ಸಂಭಾಷಣೆಯ ಅಂಗೀಕಾರಾರ್ಹತೆಗೆ ಸಂಬಂಧಿಸಿದಂತೆ ತೀವ್ರವಾಗಿ ವಾದಿಸಿದ್ದಾರೆ ಹಾಗೂ ಅಧೀನ ನ್ಯಾಯಾಲಯವು ಅಂಗೀಕಾರಾರ್ಹತೆಯ ಅಂಶವನ್ನು ಪರಿಗಣಿಸಿದ ಹೊರತು ಈ ಅಂಶದ ಮೇಲಿನ ತೀರ್ಪನ್ನು ಪರಿಗಣಿಸಿ ಅಧೀನ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಈ ನ್ಯಾಯಾಲಯವು ಕಸಿದುಕೊಳ್ಳಲಾಗದು.

70. ಇದಕ್ಕೆ ಸಂಬಂಧಿಸಿ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಚ ನಾನು ಉಲ್ಲೇಖಿಸಬಯಸುತ್ತೇನೆ.ಬ್ರಿಜೇಂದ್ರ ಸಿಂಗ್ ಮತ್ತು ಇತರರು -ವಿರುದ್ಧ-ರಾಜಸ್ಥಾನ ರಾಜ್ಯ 28 ಪ್ರಕರಣದ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಆರೋಪಿಗಳೆಂದು ದೋಷಾರೋಪ ಮಾಡಿರದ ಆ ವ್ಯಕ್ತಿಗಳ ವಿರುದ್ಧವೂ " ಸಿಆರ್‌ಪಿಸಿ'ಯ 319 ನೇ ಪ್ರಕರಣದಡಿ ಮುಂದುವರೆಯಲು ನ್ಯಾಯಾಲಯದ ಅಧಿಕಾರಗಳನ್ನು ವಿವಾದಿಸಲಾಗದು ಎಂದು ಅಭಿಪ್ರಾಯಪಟ್ಟಿದೆ.ಅಷ್ಟೇ ಅಲ್ಲದೆ, ಈ ಉಪಬಂಧವು ನಿಜವಾದ ಅಪರಾಧಿಯು ಶಿಕ್ಷೆಯಿಂದ ತಪ್ಪಿಸಿಕೊಳ್ಳಬಾರದೆಂಬ ಉದ್ದೇಶವನ್ನು ಸಾಧಿಸುವುದಕ್ಕೆಂದೇ ಇರುವುದಾಗಿದೆ ಮತ್ತು ಅಷ್ಟೇ ಅಲ್ಲದೆ, ಹರ್ದೀಪ್ಸಿಂಗ್ -ವಿರುದ್ಧ ಪಂಜಾಬ್ ರಾಜ್ಯ ಮತ್ತು ಇತರರು ಪ್ರಕರಣದ ತೀರ್ಪಿನಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, ' ಸಿಆರ್‌ಪಿಸಿ'ಯ 319 ನೇ woonw ww.at doctrine judex damnatur cum nocens absolvitur (ತಪ್ಪಿತಸ್ಥರನ್ನು ನಿರಪರಾಧಿಯೆಂದು ನಿರ್ಣಯಿಸಿದಾಗ ನ್ಯಾಯಾಧೀಶರನ್ನು ದೂಷಿಸಲಾಗಿದೆ) ಎಂಬುದರಿಂದ ಹೊರಹೊಮ್ಮುತ್ತದೆಂದು ಅಭಿಪ್ರಾಯಪಟ್ಟಿದೆ ಮತ್ತು ಅಷ್ಟೇ ಅಲ್ಲದೆ, ಈ ಸಿದ್ಧಾಂತವನ್ನು ' ಸಿಆರ್‌ಪಿಸಿ'ಯ 319 ನೇ ಪ್ರಕರಣದ ಅಧಿನಿಯಮಿತಿಗೆ ಆಧಾರವಾಗಿರುವ ಪರಿಧಿ ಮತ್ತು ಭಾವವನ್ನು ವಿವರಿಸುವಾಗ ದೀಪಸ್ತಂಭದ ಬೆಳಕಾಗಿ ಬಳಸಬೇಕಿದೆಯೆಂದು ಅಭಿಪ್ರಾಯಪಟ್ಟಿದೆ ಮತ್ತು ಅಷ್ಟೇ ಅಲ್ಲದೆ, ತನಿಖಾ ಏಜೆನ್ಸಿಯು ಯಾವುದೇ ಕಾರಣದಿಂದ ಒಬ್ಬ ನಿಜವಾದ ಅಪರಾಧಿಯನ್ನು ಆಪಾದಿತನೆಂದು ತೋರಿಸದಿದ್ದಲ್ಲಿ, ನಿಜವಾದ ಅಪರಾಧಿಯನ್ನು ಶಿಕ್ಷಿಸುವ ಮೂಲಕ ನ್ಯಾಯವನ್ನು ಮಾಡುವುದು ನ್ಯಾಯಾಲಯದ ಕರ್ತವ್ಯವಾಗಿದೆ.ನ್ಯಾಯಾಲಯವು ಸದರಿ ಆಪಾದಿತನನ್ನು ಅಧಿವಿಚಾರಣೆ ಎದುರಿಸಲು ಕರೆಯುವಲ್ಲಿ ಅಧಿಕಾರರಹಿತವಾಗಿಲ್ಲವೆಂದು ಅಭಿಪ್ರಾಯಪಟ್ಟಿದೆ.

71. ಮೇಲೆ ಉಲ್ಲೇಖಿಸಿದ ತೀರ್ಪುಗಳಲ್ಲಿ ವಿಧಿಸಿರುವ ನಿಯಮಗಳನ್ನು ಗಮನಕ್ಕೆ ತೆಗೆದುಕೊಂಡಿದ್ದು, ಸರ್ವೋಚ್ಚ ನ್ಯಾಯಾಲಯವು ತನಿಖಾ ಏಜೆನ್ಸಿಯು ನಿಜವಾದ ಅಪರಾಧಿಯನ್ನು ನಿರ್ಧರಿಸದಿದ್ದಲ್ಲಿ, ವ್ಯವಹರಣೆಗಳ ಸಮಯದಲ್ಲಿ ಯಾವುದೇ ಸಾಕ್ಷ್ಯಾಧಾರ ಕಂಡುಬಂದಲ್ಲಿ, ' ಸಿಆರ್‌ಪಿಸಿ'ಯ 319 ನೇ ಪ್ರಕರಣದ ವ್ಯಾಪ್ತಿಯು ನಿಜವಾದ ಅಪರಾಧಿಯನ್ನು ಕರೆತರಬಲ್ಲದು ಎಂಬುದನ್ನು ಸ್ಪಷ್ಟಪಡಿಸಿದೆ ಮತ್ತು ಯಾವುದೇ ಸಾಕ್ಷ್ಯಾಧಾರವನ್ನು ಮಂಡಿಸಿದಲ್ಲಿ, ' ಸಿಆರ್‌ಪಿಸಿ'ಯ 319 ನೇ ಪ್ರಕರಣದ ಮೇರೆಗಿನ ವ್ಯಾಪ್ತಿಯು, ನಿಜವಾದ ಅಪರಾಧಿಯ ವಿರುದ್ಧ ಆರೋಪ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಬಲ್ಲದು ಎಂಬುದು ಸ್ಪಷ್ಟವಾಗಿದೆ ಎಂಬ ಸಂಗತಿಯು ನಿರ್ವಿವಾದವಾಗಿದೆ.

72. ಸದ್ಯದ ಪ್ರಕರಣದಲ್ಲಿ ಸಿ.ಡಬ್ಲ್ಯೂ.-19 ಆಗಿರುವ 2 ನೇ ಅರ್ಜಿದಾರನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ಅವನು ಸಾಕ್ಷಿದಾರರ ಸಮನುಗಳ ಜಾರಿಯನ್ನು ತಪ್ಪಿಸಿದ್ದಾನೆ ಮತ್ತು ಸಾಕ್ಷ್ಯವನ್ನು ಮಂಡಿಸಲು ಮುಂದೆ ಬರುತ್ತಿಲ್ಲ ಮತ್ತು ಅದರ ಬದಲಿಗೆ ಮುಂದಿನ ವ್ಯವಹರಣೆಗಳನ್ನು ನಿಲ್ಲಿಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದಾನೆ ಎಂಬುದು ಸಹ ಪ್ರಾಸಿಕ್ಯೂಷನ್ ವಾದವಾಗಿದೆ.ತನಿಖಾಧಿಕಾರಿಯು ಸರಿಯಾದ ತನಿಖೆಯನ್ನು ನಡೆಸಿಲ್ಲ ಮತ್ತು ಆ ತನಿಖೆಯು ಸುಳ್ಳು ತನಿಖೆಯೇ ಆಗಿದೆ ಎಂಬುದು ಇದರಲ್ಲಿ 2 ನೇ ಅರ್ಜಿದಾರನಾಗಿರುವ ಸಿ.ಡಬ್ಲ್ಯೂ .19 ರ ಮುಖ್ಯ ವಾದವಾಗಿದೆ ಎಂಬುದನ್ನು ಗಮನಿಸಬೇಕಿದೆ.ಹಾಗೂ ಸಾಕ್ಷ್ಯಾಧಾರದೊಂದಿಗೆ ಏನನ್ನೂ ತೋರಿಸಿಲ್ಲವೆಂದು ಮತ್ತು ತನಿಖೆಯ ಸಮಯದಲ್ಲಿ ಯಾವುದೇ ಆಪಾದನೆ ಇಲ್ಲವೆಂದು ಮತ್ತು ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ ನಂತರ, ಅದರಲ್ಲೂ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ ಎರಡು ತಿಂಗಳ ನಂತರ ಈ ವಾದವನ್ನು ಮಾಡಲಾಗಿದೆಯೆಂದು ನಾನು ಈಗಾಗಲೇ ಎತ್ತಿ ತೋರಿಸಿದ್ದೇನೆ.ಅವನ ನಾದಿನಿಯು ಪಕ್ಷವನ್ನು ಬದಲಾಯಿಸಿಕೊಂಡಿದ್ದಾಳೆ ಮತ್ತು ಆಕೆ ಬೇರೆ ಪಕ್ಷಕ್ಕೆ ಸೇರಿಕೊಂಡಿದ್ದಾಳೆ ಮತ್ತು

ಆಪಾದನೆಯು ವೈಯಕ್ತಿಕ ದ್ವೇಷವಾಗುವ ಮಟ್ಟಕ್ಕೆ ಹೋಗಿದೆ ಎಂಬುದನ್ನು ಅದು ಬಿಂಬಿಸುತ್ತದೆ ಮತ್ತು ಅವನು ಅಂಥ ಆಪಾದನೆಯನ್ನು ಮಾಡಿದಾಗ ಮತ್ತು ನ್ಯಾಯಸಮ್ಮತ ತನಿಖೆಯಾಗಬೇಕೆಂದು ಈ ನ್ಯಾಯಾಲಯವನ್ನು ಕೋರಿದಾಗ, ಅವನು ತನ್ನ ಆಪಾದನೆಗೆ ಸಂಬಂಧಿಸಿದಂತೆ, ನ್ಯಾಯಾಲಯಕ್ಕೆ ಸಾಕ್ಷ್ಯವನ್ನು ಒದಗಿಸಬೇಕಿತ್ತು ಮತ್ತು ಅಧಿವಿಚಾರಣಾ ನ್ಯಾಯಾಧೀಶರು ವ್ಯವಹರಣೆಗಳ ಸಮಯದಲ್ಲಿ ಯಾವುದೇ ಸಾಕ್ಷ್ಯಾಧಾರವಿದ್ದಲ್ಲಿ, ನಿಜವಾದ ಅಪರಾಧಿಯನ್ನು ಕರೆಸಲು ಸಿಆರ್‌ಪಿಸಿ 319 ನೇ ಪ್ರಕರಣವನ್ನು ಅನ್ವಯಿಸಲು ಆ ಸಾಕ್ಷ್ಯಾಧಾರವನ್ನು ಅಧಿವಿಚಾರಣಾ ನ್ಯಾಯಾಧೀಶರು ಪರಿಗಣಿಸಬಹುದು.ಈಗಾಗಲೇ 63 ಜನ ಸಾಕ್ಷಿದಾರರಲ್ಲಿ 55 ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿದೆ ಎಂಬುದು ವ್ಯಕ್ತವಾಗಿದೆ ಮತ್ತು ಯಾರೇ ಸಾಕ್ಷಿದಾರರು ಬೆದರಿಕೆಯ ಯಾವುದೇ ಆಪಾದನೆಯನ್ನು ಮಾಡಿಲ್ಲವೆಂಬುದನ್ನು ಗಮನಿಸುವುದು ಸೂಕ್ತವಾಗಿದೆ ಮತ್ತು ತನಗೆ ಬೆದರಿಕೆ ಹಾಕಿದ್ದರೆಂಬುದು ಇದರಲ್ಲಿ 2 ನೇ ಅರ್ಜಿದಾರರ ವಾದವೂ ಆಗಿದೆ ಮತ್ತು ಒಂದು ಅರ್ಜಿಯನ್ನು ಸಲ್ಲಿಸಲಾಗಿದೆ ಮತ್ತು ಇದರಲ್ಲಿ ಅರ್ಜಿದಾರರು ವಾದಿಸಿದಂತೆ ತನಿಖಾ ಏಜೆನ್ಸಿಯು ಯಾವುದೇ ಕಾರಣಗಳಿಗಾಗಿ ನಿಜವಾದ ಅಪರಾಧಿಗಳಲ್ಲೊಬ್ಬನನ್ನು ಆಪಾದಿತನೆಂದು ತೋರಿಸದಿದ್ದಲ್ಲಿ, ನಿಜವಾದ ಅಪರಾಧಿಯನ್ನು ಕೋರ್ಟಿಗೆ ಕರೆಸುವ ಸಲುವಾಗಿ ನ್ಯಾಯಾಲಯದ ಮುಂದೆ ಆ ಸಾಕ್ಷ್ಯಾಧಾರವನ್ನು ಮಂಡಿಸಬೇಕಿದೆ.ಮೇಲೆ ಉಲ್ಲೇಖಿಸಲಾದ ಬ್ರಿಜೇಂದ್ರಸಿಂಗ್ ಮತ್ತು ಇತರರು -ವಿರುದ್ಧ-ರಾಜಸ್ಥಾನ ರಾಜ್ಯ ಪ್ರಕರಣದ ತೀರ್ಪಿನಲ್ಲಿ ಹಾಗೂ ಹರ್ದೀಪ್ಸಿಂಗ್-ವಿರುದ್ಧ-ಪಂಜಾಬ್ ರಾಜ್ಯ ಮತ್ತು ಇತರರು (ಮೇಲಿನ) ಪ್ರಕರಣದ ತೀರ್ಪಿನಲ್ಲಿ ವಿಧಿಸಲಾದ ನಿಯಮಗಳ ದೃಷ್ಟಿಯಿಂದ, ಈ ಅರ್ಜಿದಾರರು ಸಾಕ್ಷ್ಯಾಧಾರವನ್ನು ಮಂಡಿಸಿ ಮತ್ತು ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ' ಸಿಆರ್‌ಪಿಸಿ'ಯ 319 ನೇ ಪ್ರಕರಣದ ಅಧಿನಿಯಮಿತಿಯ ವ್ಯಾಪ್ತಿ ಮತ್ತು ವಲಯ ಹಾಗೂ ಭಾವವನ್ನು, ಅನ್ವಯಿಸಬಹುದು ಮತ್ತು ಅಧಿವಿಚಾರಣಾ ನ್ಯಾಯಾಲಯಕ್ಕೆ ಸಾಕ್ಷ್ಯಾಧಾರವು ಕಂಡುಬಂದಲ್ಲಿ, ಆಗ ಅರ್ಜಿದಾರರು ವಾದಿಸಿದಂತೆ ನಿಜವಾದ ಅಪರಾಧಿಯನ್ನು ಆಪಾದಿತನೆಂದು ಸೇರಿಸಬಹುದು.

73. ಈ ನ್ಯಾಯಾಲಯವು ತನಿಖಾಧಿಕಾರಿಗೆ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಲು ನಿರ್ದೇಶಿಸಿ ಸಿಆರ್‌ಪಿಸಿ 173 ( 8) ನೇ ಪ್ರಕರಣವನ್ನು ಅನ್ವಯಿಸಬಹುದೆ?ಎಂಬುದಕ್ಕೆ ಸಂಬಂಧಿಸಿದಂತೆಯೂ ಈ ನ್ಯಾಯಾಲಯವು ಪರಿಶೀಲಿಸಿದೆ ಮತ್ತು ವಿಷಯವನ್ನು ಸಿಬಿಐಗೆ ಒಪ್ಪಿಸುವ ಅರ್ಜಿಯಲ್ಲಿ ಮಂಡಿಸಲಾದ ಆಧಾರಗಳಿಗೆ ಸಂಬಂಧಿಸಿದಂತೆ ವಿವರವಾಗಿ ಈಗಾಗಲೇ ನಾನು ಎತ್ತಿ ತೋರಿಸಿದ್ದೇನೆ ಮತ್ತು ಈ ನ್ಯಾಯಾಲಯಕ್ಕೆ ಈ ವಿಷಯವನ್ನು ಸಿಬಿಐಗೆ ಒಪ್ಪಿಸುವುದಕ್ಕಾಗಿ ಪ್ರಕರಣವನ್ನು ಪರಿಗಣಿಸಲು ಅಂಥ ಯಾವುದೇ ಸಾಕ್ಷ್ಯಾಧಾರ ಕಂಡುಬಂದಿಲ್ಲ ಮತ್ತು ತನಿಖಾಧಿಕಾರಿಗೆ ತನಿಖೆ ಮಾಡಲು ಹಾಗೂ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಸಲ್ಲಿಸಲು ಕೋರುವ ಸಿಆರ್‌ಪಿಸಿ 173 ( 8) ನೇ ಪ್ರಕರಣವನ್ನು ಅನ್ವಯಿಸಲು ಯಾವುದೇ ಸಾಕ್ಷ್ಯಾಧಾರವು ನನಗೆ ಕಂಡುಬಂದಿಲ್ಲ ಮತ್ತು ಸಿಆರ್‌ಪಿಸಿ ನಿಜವಾದ ಅಪರಾಧಿಯನ್ನು ತೋರಿಸಲು ನ್ಯಾಯಾಲಯದ ಮುಂದೆ ಯಾವುದೇ ಸಾಕ್ಷ್ಯಾಧಾರವಿದ್ದಲ್ಲಿ, ನ್ಯಾಯಾಲಯಕ್ಕೆ ಹಾಜರಾಗಿಲ್ಲದ ಸಿ.ಡಬ್ಲ್ಯೂ .19 ರವರು ಅದನ್ನು ಮಂಡಿಸಿದಲ್ಲಿ, ಅರ್ಜಿದಾರರ ವಾದವನ್ನು ಪರಿಗಣಿಸುವ ಸಿಆರ್‌ಪಿಸಿ 319 ನೇ ಪ್ರಕರಣದ ವ್ಯಾಪ್ತಿಯನ್ನು ಮಾತ್ರ ಅನ್ವಯಿಸಬಹುದು.

74. ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತು ಅರ್ಜಿದಾರರ ವಕೀಲರ ಹಾಗೂ ಎದುರುದಾರರ ವಕೀಲರ ವಾದಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಮೇಲೆ ಉಲ್ಲೇಖಿಸಲಾದ ತೀರ್ಪುಗಳಲ್ಲಿ ವಿಧಿಸಲಾದ ನಿಯಮಗಳನ್ನು ಪರಿಶೀಲಿಸಿದ್ದು, ತನಿಖೆಯು ನ್ಯಾಯಾಲಯದಲ್ಲಿ ವಿಶ್ವಾಸವನ್ನು ಮೂಡಿಸದಂಥ ಅಸಾಧಾರಣ ಪ್ರಕರಣದಲ್ಲಿ ಮಾತ್ರ ಆ ವಿಷಯವನ್ನು ಸಿಬಿಐಗೆ ಒಪ್ಪಿಸುವ ಈ ನ್ಯಾಯಾಲಯದ ವಿಶೇಷಾಧಿಕಾರವನ್ನು ಅನ್ವಯಿಸಬಹುದು ಎಂಬುದು ಸ್ಪಷ್ಟವಾಗಿದೆ ಮತ್ತು ಹೀಗಾಗಿ, ದಾಖಲೆಯಲ್ಲಿರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ್ದು, ಸದ್ಯದ ಪ್ರಕರಣದಲ್ಲಿ ಅಂಥ ಯಾವುದೇ ಸನ್ನಿವೇಶಗಳು ನನಗೆ ಕಂಡುಬಂದಿಲ್ಲ ಮತ್ತು ಹೀಗಾಗಿ, ಸಿಬಿಐ ತನಿಖೆಗೆ ವಿಷಯವನ್ನು ಒಪ್ಪಿಸಲು ಅರ್ಜಿದಾರರಿಂದ ಕೋರಲಾದಂತೆ ಮ್ಯಾಂಡಮಸ್ ರಿಟ್ ಜಾರಿ ಮಾಡಲು ಅರ್ಹ ಪ್ರಕರಣ ಇದಲ್ಲ ಮತ್ತು ಅಧಿವಿಚಾರಣೆಯು ಬಹುತೇಕ ಪೂರ್ಣಗೊಂಡಿದೆ ಮತ್ತು ಅದು ಅಧಿವಿಚಾರಣೆಯ ಮುಕ್ತಾಯದ ಅಂಚಿನಲ್ಲಿದೆ ಹಾಗೂ ಸಿಡಬ್ಲ್ಯೂ .19 ಸೇರಿದಂತೆ ಇನ್ನಷ್ಟು ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕಿದೆ ಮತ್ತು ಈ ಹಂತದಲ್ಲಿ ವಿಷಯವನ್ನು ಸಿಬಿಐಗೆ ಒಪ್ಪಿಸುವುದು ಸೂಕ್ತವಲ್ಲ ಹಾಗೂ ಅರ್ಜಿದಾರರು ವಾದಿಸಿರುವಂತೆ ಸಿಬಿಐಗೆ ಈ ವಿಷಯವನ್ನು ಒಪ್ಪಿಸುವ ಅಂಥ ಅಸಾಧಾರಣ ಪರಿಹಾರವನ್ನು ನೀಡಲು ಯಾವುದೇ ಸಾಕ್ಷ್ಯಾಧಾರವು ಈ ನ್ಯಾಯಾಲಯಕ್ಕೆ

ಕಂಡುಬಂದಿಲ್ಲದ ಕಾರಣ, ಕೋರಲಾದಂತೆ ಪರಿಹಾರವನ್ನು ನೀಡಲು ಈ ಪ್ರಕರಣದಲ್ಲಿ ಯಾವುದೇ ಗುಣಾರ್ಹತೆಗಳು ನನಗೆ ಕಂಡುಬಂದಿಲ್ಲ.

75. ಈ ಮೇಲೆ ಮಾಡಲಾದ ಚರ್ಚೆಗಳ ದೃಷ್ಟಿಯಿಂದ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತಿದ್ದೇನೆ:

ಆದೇಶ

ಈ ರಿಟ್ ಅರ್ಜಿಗಳನ್ನು ವಜಾ ಮಾಡಲಾಗಿದೆ.